ಪಟ್ಟಣ ಸಹಕಾರ



# ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 11
ಸಂಚಿಕೆ : 2
ಏಪ್ರಿಲ್/ಮೇ/
ಜೂನ್ : 2023
ಪುಟಗಳು : 44

## ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಂದ ಗ್ಯಾರಂಟಿಗಳ ಕೊಡುಗೆ



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು,
ಹಣಕಾಸು, ಆಡಳಿತ ಸುಧಾರಣೆ,
ಗುಪ್ತಚರ ಇಲಾಖೆ

**ಶ್ರೀ ಎಚ್.ಕೆ. ಪಾಟೀಲ**
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ,
ಪ್ರವಾಸೋದ್ಯಮ ಇಲಾಖೆ
ಸಚಿವರು

**ಶ್ರೀ ಕೆ.ಎನ್. ರಾಜಣ್ಣ**
ಮಾನ್ಯ ಸಹಕಾರ ಸಚಿವರು

**ಶ್ರೀ ಡಿ.ಕೆ. ಶಿವಕುಮಾರ**
ಮಾನ್ಯ ಉಪಮುಖ್ಯಮಂತ್ರಿಗಳು,
ಜಲಸಂಪನ್ಮೂಲ,
ಬೆಂಗಳೂರು ನಗರಾಭಿವೃದ್ಧಿ ಸಚಿವರು



ಇನ್ನೆರಡು ವರ್ಷಗಳಲ್ಲಿ ಕರ್ನಾಟಕ 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ : ಅಮಿತಾಬ್ ಕಾಂತ್



ಪ್ರಗತಿ ಪಥದಲ್ಲಿ ಸಾಗುತ್ತಿರುವ ಮರ್ಚಂಟ್ಸ ಲಿಬರಲ್ ಕೋ-ಆಪ್ ಬ್ಯಾಂಕ ಲಿ., ಗದಗ



ದಿನಾಂಕ : 12.05.2023 ರಂದು ಮುಂಬಯಿನ ಭಾರತೀಯ ರಿಜರ್ವ್ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಆರ್‌ಬಿಐ ಗವರ್ನರ್‌ರವರಾದ ಶ್ರೀ ಶಕ್ತಿಕಾಂತ್ ದಾಸ್ ರವರ ಅಧ್ಯಕ್ಷತೆಯಲ್ಲಿ ರಾಷ್ಟ್ರದ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಗಳ ಪ್ರತಿನಿಧಿಗಳೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರಮುಖ ವಿಷಯಗಳ ಬಗ್ಗೆ ಸಭೆ ಜರುಗಿತು. ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಹಿರಿಯ ನಿರ್ದೇಶಕರಾದ ಶ್ರೀ ರುದ್ರೇಗೌಡರವರು ಭಾಗವಹಿಸಿದ್ದರು.




ದಿನಾಂಕ : 16.03.2023ರಂದು ಕೆ.ಎಚ್.ಪಾಟೀಲ ಅಭಿಮಾನಿಗಳ ಬಳಗ, ವಿವಿಧ ಸಹಕಾರ ಸಂಸ್ಥೆಗಳು ಮತ್ತು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನ ಗಾಂಧೀ ಭವನದಲ್ಲಿ ನಾಡು ಮೆಚ್ಚಿದ ಜನನಾಯಕ ಕೆ.ಎಚ್. ಪಾಟೀಲರ 98ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.



ದಿನಾಂಕ : 17.03.2023ರಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಕೆ.ಎಚ್.ಪಾಟೀಲ ಸಭಾಂಗಣದಲ್ಲಿ ಸಹಕಾರ ಇಲಾಖೆ ಮತ್ತು ಭಾರತೀಯ ರಿಜರ್ವ್ ಬ್ಯಾಂಕ್ ಮತ್ತು ಮಹಾಮಂಡಳದ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರಗತಿ ಪರಿಶೀಲನಾ ಸಭೆ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ॥ ಕೆ. ರಾಜೇಂದ್ರ ವಹಿಸಿದ್ದರು.

## ಸಂಪಾದಕೀಯ



ಆತ್ಮೀಯ ಸಹಕಾರಿ ಬಂಧುಗಳೇ...

ಎಚ್.ಕೆ. ಪಾಟೀಲ

# ರಾಜ್ಯದ ಅಭಿವೃದ್ಧಿಯ ಭಾಗ್ಯದ ಬಾಗಿಲು ತೆರೆಯಲಿ, ಜನರಿಗೆ ಗ್ಯಾರಂಟಿ ನೆಮ್ಮದಿ ಸಿಗಲಿ

ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರುಗಳಿಗೆಯಲ್ಲಿಯೇ ತಮ್ಮ ಚುನಾವಣಾ ಘೋಷಣೆಯಾದ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವುದಾಗಿ ನುಡಿದಿದ್ದ ಮುಖ್ಯಮಂತ್ರಿಗಳು ಈಗ ಅವುಗಳನ್ನು ಜಾರಿಗೊಳಿಸಿದ್ದಾರೆ. ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ರಕ್ಷಣೆಯಲ್ಲಿ ಸದಾ ಮುಂದಿರುವ ಸಿದ್ದರಾಮಯ್ಯನವರು ರಾಜಕೀಯ ಸ್ವಾತಂತ್ರ್ಯದ ಜೊತೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ನೀಡಿದರೆ ಮಾತ್ರ, ನೈಜ ಪ್ರಜಾಪ್ರಭುತ್ವ ಸ್ಥಾಪನೆ ಸಾಧ್ಯ ಎಂಬ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ನಡೆಯುವವರಾಗಿದ್ದಾರೆ.

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪೂರ್ಣ ಪ್ರಮಾಣದ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಮೇ 20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಜೊತೆ 8 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಬಳಿಕ ಮೇ 27ರಂದು 24 ಮಂದಿ ಸಚಿವರಾಗಿ ಪದಗ್ರಹಣ ಮಾಡಿದ್ದಾರೆ. ಈಗ ನೂತನ ಸಚಿವರಿಗೆ ಖಾತೆ ಹಂಚಿಕೆಯೂ ಆಗಿದೆ.

ಸಿದ್ದರಾಮಯ್ಯನವರು ತಮ್ಮ ಸಾರ್ವಜನಿಕ ಜೀವನದ ಆರಂಭದಿಂದಲೂ ಶೋಷಿತ ವರ್ಗಗಳ ಏಳಿಗೆಗಾಗಿ ಸದಾ ಮಿಡಿಯುತ್ತಿದ್ದ ಅವರಲ್ಲಿ ಸಾಮಾಜಿಕ ನ್ಯಾಯದ ಆಶಯ ಸೈದ್ಧಾಂತಿಕವಾಗಿ ಆಲೋಚನೆಗೆ ಕಾರಣವಾದುದು ಡಾ। ರಾಮಮನೋಹರ ಲೋಹಿಯಾ ಚಿಂತನೆಯನ್ನು ಓದಿಕೊಂಡಿದ್ದರ ಫಲಶೃತಿಯಾಗಿದೆ. ಈ ಕಾರಣಕ್ಕಾಗಿಯೇ ಅವರು ವಕೀಲ ವೃತ್ತಿಯನ್ನು ಬಿಟ್ಟು ಸಾರ್ವಜನಿಕ ಕ್ಷೇತ್ರ ಪ್ರವೇಶಿಸಿದರು.

ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರುಗಳಿಗೆಯಲ್ಲಿಯೇ ತಮ್ಮ ಚುನಾವಣಾ ಘೋಷಣೆಯಾದ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವುದಾಗಿ ನುಡಿದಿದ್ದ ಮುಖ್ಯಮಂತ್ರಿಗಳು ಈಗ ಅವುಗಳನ್ನು ಜಾರಿಗೊಳಿಸಿದ್ದಾರೆ. ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ರಕ್ಷಣೆಯಲ್ಲಿ ಸದಾ ಮುಂದಿರುವ ಸಿದ್ದರಾಮಯ್ಯನವರು ರಾಜಕೀಯ ಸ್ವಾತಂತ್ರ್ಯದ ಜೊತೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ನೀಡಿದರೆ ಮಾತ್ರ, ನೈಜ ಪ್ರಜಾಪ್ರಭುತ್ವ ಸ್ಥಾಪನೆ ಸಾಧ್ಯ ಎಂಬ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ನಡೆಯುವವರಾಗಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ ಅವರು ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಪ್ರಸ್ತುತ ಸಿದ್ದರಾಮಯ್ಯನವರು ತಮ್ಮ ಸರ್ವಸನ್ನದ ಸಚಿವ ಸಂಪುಟ ರಾಜ್ಯದ ಆರುವರೆ ಕೋಟಿ ಜನರ ನಿರೀಕ್ಷೆಯಂತೆಯೇ ನಡೆಯಲಿದೆ ಎನ್ನುವ ಆಶಯ ಜನರದ್ದಾಗಿದೆ. ಕರ್ನಾಟಕ ಸರ್ವಜನಾಂಗಗಳ ಶಾಂತಿಯ ತೋಟವಾಗಲಿ. ಸರ್ವಜನಪ್ರಿಯ ಸರ್ಕಾರದಿಂದ ರಾಜ್ಯದ ಅಭಿವೃದ್ದಿಯ ಭಾಗ್ಯದ ಬಾಗಿಲು ತೆರೆಯಲಿ, ಜನರಿಗೆ ಗ್ಯಾರಂಟಿ ನೆಮ್ಮದಿ ಸಿಗಲಿ ಎಂದು ಆಶಿಸೋಣ...

# ಒಳಪುಟಗಳಲ್ಲಿ

ಪಟ್ಟಣ ಸಹಕಾರ
ಬ್ಯಾಂಕಿಂಗ್ ಪ್ರಪಂಚ

ಸಂಪುಟ : 11 ಸಂಚಿಕೆ : 02

**ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ**

ಏಪ್ರಿಲ್, ಮೇ, ಜೂನ್-2023

**ಶ್ರೀ ಎಚ್.ಕೆ. ಪಾಟೀಲ**
ಗೌರವಾಧ್ಯಕ್ಷರು

**ಶ್ರೀ ಜಿ.ಎಸ್. ಪರಮಶಿವಯ್ಯ**
ಉಪಾಧ್ಯಕ್ಷರು

**ಶ್ರೀ ಪುಂಡಲೀಕ ಎನ್. ಕೇರೂರೆ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ/
ಸಂಪಾದಕರು

**ಸಂಚಿಕೆ ನಿರ್ವಹಣೆ / ವಿನ್ಯಾಸ :**
ವರ್ಣ ಕಮ್ಯೂನಿಕೇಷನ್

**ಪ್ರಕಟಣೆ :**
**ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,**
ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

**ದೂರವಾಣಿ :**
080-22233662, 080-22279574

**ಫ್ಯಾಕ್ಸ್** : 080-22220774

**ಇ-ಮೇಲ್ :**
editorkubf@gmail.com

**ಅಂತರ್ಜಾಲ** : www.kubfed.com

**ಮುದ್ರಣ** : ನವರತ್ನ ಪ್ರಿಂಟರ್ಸ್, ಬೆಂಗಳೂರು.

ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸದೇ, 5 ಗ್ಯಾರಂಟಿಗಳ ಜಾರಿ : ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ .. 5

ರೈತರ ಬಂಧು, ಜನಪ್ರಿಯ ಸಹಕಾರಿ ಮುಖಂಡ ದೂರದೃಷ್ಟಿಯ ನೇತಾರ, ಸಹಕಾರಿ ಹೃದಯದ ರಾಜಕಾರಣಿ ನೂತನ ಸಹಕಾರ ಸಚಿವ ಮಾನ್ಯ ಶ್ರೀ ಕೆ.ಎನ್. ರಾಜಣ್ಣನವರು ........ 8

ಇನ್ನೆರಡು ವರ್ಷಗಳಲ್ಲಿ ಕರ್ನಾಟಕ 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ : ಅಮಿತಾಬ್ ಕಾಂತ್ ........ 11

ಆದಾಯ ತೆರಿಗೆ ರಿಟರ್ನ್ ಸಲ್ಲಿಸುವಾಗ ಈ 5 ವಿಷಯಗಳನ್ನು ಮರೆಯಬೇಡಿ! ........ 12

ಆರ್‌ಬಿಐ ಸ್ಥಾಪನೆ ಹಿಂದಿನ ಮೆದುಳು ಅಂಬೇಡ್ಕರ್ ಅರ್ಥಶಾಸ್ತ್ರದಲ್ಲೂ ಬಲಭೀಮ! ........ 13

ಕ್ಲೀನ್ ನೋಟ್ ಪಾಲಿಸಿ ನಿಯಮದಂತೆ ರೂ. 2000 ಮುಖಬೆಲೆ ನೋಟು ಹಿಂಪಡೆಯಲು ಆರ್‌ಬಿಐ ನಿರ್ಧಾರ ಹೊಸ ಅವತಾರದಲ್ಲಿ ಮತ್ತೆ ರೂ 1000 ನೋಟು? ........ 15

ಒಂದು ಸಾವಿರ ರೂ ಮುಖಬೆಲೆಯ ನೋಟಿನ ಮರು ಪರಿಚಯ ಇಲ್ಲ, ಪೋಸ್ಟ್ ಆಫೀಸ್‌ನಲ್ಲಿ ನೋಟು ಬದಲಾವಣೆ ಇಲ್ಲ : ಆರ್‌ಬಿಐ ಸ್ಪಷ್ಟನೆ ........ 17

ಕಡಿಮೆ ಪ್ರಮಾಣದ ಆರ್ಥಿಕ ಬೆಳವಣಿಗೆ ಇಂದಿನ ವಾಸ್ತವ ........ 18

**CHRONOLOGY OF MAJOR POLICY ANNOUNCEMENTS BY RESERVE BANK OF INDIA RELATING TO URBAN CO-OPERATIVE BANKS DURING THE FINANCIAL YEAR 2022-23 ........ 21**

ಬ್ಯಾಂಕ್ ಉದ್ಯೋಗವೂ ಸೇಫ್ ಅಲ್ಲ! 'ಎಐ' ಪ್ರವೇಶದಿಂದ ಬ್ಯಾಂಕಿಂಗ್ ವಲಯದಲ್ಲಿ ಮಹತ್ವದ ಬದಲಾವಣೆ ........ 23

ಬ್ಯಾಂಕುಗಳಲ್ಲಿನ 35,000 ಕೋಟಿ ರೂ.ಗೆ ವಾರಸುದಾರರೇ ಇಲ್ಲ, ತಮ್ಮದೇ ಹಣ ಮರೆತ ಜನ! ........ 25

ಪ್ರಗತಿ ಪಥದಲ್ಲಿ ಸಾಗುತ್ತಿರುವ ಮರ್ಚಂಟ್ಸ ಲಿಬರಲ್ ಕೊ-ಆಪ್ ಬ್ಯಾಂಕ ಲಿ., ಗದಗ ಎಪ್ರಿಲ್ 20, 2023 ರಂದು ಬ್ಯಾಂಕು 58 ವಸಂತಗಳನ್ನು ಪೂರೈಸಿದೆ (ಬ್ಯಾಂಕಿನ ಸಂಸ್ಥಾಪನಾ ದಿನದ ನಿಮಿತ್ಯ ಲೇಖನ) .... 27

ದೇಶದಲ್ಲಿ ಅತಿ ಹೆಚ್ಚು ತೆರಿಗೆ ಕಟ್ಟುವವರು ಯಾರು ಕಾರ್ಪೊರೇಟ್ ತೆರಿಗೆಯಲ್ಲಿ ಭಾರಿ ಪ್ರಮಾಣದ ಕಡಿತ, ಬಡವರ ಮೇಲೆ ಜಿ.ಎಸ್.ಟಿ. ಹೊಡೆತ ........ 31

ಸಹಕಾರದ ಬಗ್ಗೆ ಗಣ್ಯರ ಅನಿಸಿಕೆ ........ 38

ಹೆಸರಿಗೆ ತಕ್ಕಂತೆ ನಯನಗಳ ಮೂಲಕವೇ ಭಾವಾಭಿನಯ ತೋರುವ ನಯನ ನಾಗರಾಜ್ ........ 39

# ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸದೇ, 5 ಗ್ಯಾರಂಟಿಗಳ ಜಾರಿ : ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ




ರಾಜ್ಯದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದಿರುವ ಶ್ರೀ ಸಿದ್ದರಾಮಯ್ಯ ಅವರ ನೇತೃತ್ವದ ಸಚಿವ ಸಂಪುಟ 2ನೇ ಸಭೆಯಲ್ಲೇ ಚುನಾವಣೆಯಲ್ಲಿ ವಾಗ್ದಾನ ಮಾಡಿದಂತೆ 5 ಭರವಸೆಗಳು ಘೋಷಿಸಲಾಗಿದೆ.

ಈ ಗ್ಯಾರಂಟಿಗಳ ಜಾರಿಯಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯ ಯಾವುದೇ ಪ್ರತಿಕೂಲ ಉಂಟಾಗುವುದಿಲ್ಲ ಎಂಬ ಭರವಸೆಯನ್ನು ಶ್ರೀ ಸಿದ್ದರಾಮಯ್ಯ ಅವರು ನೀಡಿದ್ದಾರೆ.

ಯಾವುದೇ ಜಾತಿ, ಧರ್ಮ, ಭಾಷೆಯನ್ನು ಪರಿಗಣಿಸದೆ ನಾಡಿನ ಪ್ರತಿಯೊಬ್ಬರಿಗೂ ಈ ಗ್ಯಾರಂಟಿಗಳು ದೊರೆಯಲಿವೆ ಎಂದು ಹೇಳಿದ್ದಾರೆ.

ಇದೀಗ ಸರ್ಕಾರ ತನ್ನ ಎರಡನೇ ಕ್ಯಾಬಿನೆಟ್ ಸಭೆಯ ನಂತರ ನೀಡಿದ್ದ ಐದು ಗ್ಯಾರಂಟಿಗಳನ್ನು ಜಾರಿ ಮಾಡಿದೆ. ಗೃಹ ಲಕ್ಷ್ಮೀ, ಗೃಹ ಜ್ಯೋತಿ, ಅನ್ನಭಾಗ್ಯ, ಶಕ್ತಿ ಹಾಗೂ ಯುವನಿಧಿ ಯೋಜನೆಗಳನ್ನು ಜಾರಿಗೆ ತಂದಿದೆ. ಜೊತೆಗೆ ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಭರವಸೆಯನ್ನೂ ಸರ್ಕಾರ ನೀಡಿದೆ.



# ನೂತನ ಸಚಿವ ಸಂಪುಟ


**ಸಿದ್ದರಾಮಯ್ಯ**
ಮುಖ್ಯಮಂತ್ರಿ, ಹಣಕಾಸು, ಆಡಳಿತ ಸುಧಾರಣೆ, ಗುಪ್ತಚರ, ಇತರೆ


**ಡಿ.ಕೆ. ಶಿವಕುಮಾರ್**
ಉಪ ಮುಖ್ಯಮಂತ್ರಿ ಜಲಸಂಪನ್ಮೂಲ, ಬೆಂಗಳೂರು ನಗರ ಅಭಿವೃದ್ಧಿ


**ಡಾ. ಜಿ. ಪರಮೇಶ್ವರ್**
ಗೃಹ (ಗುಪ್ತಚರ ಹೊರತುಪಡಿಸಿ)


**ಎಂ.ಬಿ. ಪಾಟೀಲ್**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ


**ಕೆ.ಹೆಚ್. ಮುನಿಯಪ್ಪ**
ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರಗಳು


**ಕೆ.ಜೆ. ಜಾರ್ಜ್**
ಇಂಧನ


**ಬಿ.ಝಡ್. ಜಮೀರ್ ಅಹ್ಮದ್ ಖಾನ್**
ವಸತಿ ಮತ್ತು ವಕ್ಫ್


**ರಾಮಲಿಂಗಾರೆಡ್ಡಿ**
ಸಾರಿಗೆ, ಮುಜರಾಯಿ


**ಸತೀಶ ಜಾರಕಿಹೊಳಿ**
ಲೋಕೋಪಯೋಗಿ


**ಪ್ರಿಯಾಂಕ್ ಖರ್ಗೆ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐಟಿ ಬಿಟಿ


**ಎಚ್.ಕೆ. ಪಾಟೀಲ**
ಕಾನೂನು ಮತ್ತು ಸಂಸದೀಯ ವ್ಯವಹಾರ, ಪ್ರವಾಸೋದ್ಯಮ


**ಕೃಷ್ಣ ಬೈರೇಗೌಡ**
ಕಂದಾಯ


**ಎನ್. ಚಲುವರಾಯಸ್ವಾಮಿ**
ಕೃಷಿ


**ಕೆ. ವೆಂಕಟೇಶ್**
ಪಶುಸಂಗೋಪನೆ, ರೇಷ್ಮೆ


**ಡಾ. ಎಚ್.ಸಿ. ಮಹದೇವಪ್ಪ**
ಸಮಾಜ ಕಲ್ಯಾಣ


**ಈಶ್ವರ ಖಂಡ್ರೆ**
ಅರಣ್ಯ, ಪರಿಸರ


**ಕೆ.ಎನ್. ರಾಜಣ್ಣ**
ಸಹಕಾರ


**ದಿನೇಶ್ ಗುಂಡೂರಾವ್**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ


**ಶರಣಬಸಪ್ಪ ದರ್ಶನಾಪುರ**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ


**ಶಿವಾನಂದ ಪಾಟೀಲ**
ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ

## ನೂತನ ಸಚಿವ ಸಂಪುಟ



**ಆರ್.ಬಿ. ತಿಮ್ಮಾಪುರ**
ಅಬಕಾರಿ



**ಎಸ್.ಎಸ್. ಮಲ್ಲಿಕಾರ್ಜುನ್**
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ



**ಶಿವರಾಜ ತಂಗಡಗಿ**
ಹಿಂದುಳಿದ ವರ್ಗಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ



**ಡಾ. ಶರಣಪ್ರಕಾಶ ಪಾಟೀಲ್**
ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ



**ಮಂಕಾಳ ಸುಬ್ಬ ವೈದ್ಯ**
ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲ ಸಾರಿಗೆ



**ಲಕ್ಷ್ಮೀ ಹೆಬ್ಬಾಳ್ಕರ್**
ಮಹಿಳಾ–ಮಕ್ಕಳ ಕಲ್ಯಾಣ



**ರಹೀಮ್ ಖಾನ್**
ಪೌರಾಡಳಿತ, ಹಜ್



**ಡಿ. ಸುಧಾಕರ್**
ಯೋಜನೆ ಮತ್ತು ಸಾಂಖ್ಯಿಕ



**ಸಂತೋಷ ಲಾಡ್**
ಕಾರ್ಮಿಕ



**ಎನ್.ಎಸ್. ಬೋಸರಾಜು**
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ



**ಬಿ.ಎಸ್. ಸುರೇಶ್**
ನಗರಾಭಿವೃದ್ಧಿ, ನಗರ ಯೋಜನಾ ಪ್ರಾಧಿಕಾರ



**ಮಧು ಬಂಗಾರಪ್ಪ**
ಪ್ರಾಥಮಿಕ–ಪ್ರೌಢ ಶಿಕ್ಷಣ



**ಡಾ. ಎಂ.ಸಿ. ಸುಧಾಕರ್**
ಉನ್ನತ ಶಿಕ್ಷಣ



**ಬಿ. ನಾಗೇಂದ್ರ**
ಯುವಜನ ಸೇವೆ ಕ್ರೀಡೆ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣ

## ವಿಧಾನಸಭಾ ಅಧ್ಯಕ್ಷರಾಗಿ ಶ್ರೀ ಯು.ಟಿ. ಖಾದರ್ ಆಯ್ಕೆ



ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಾಗಿ ಹಿರಿಯ ಶಾಸಕ, ಮಾಜಿ ಸಚಿವ ಶ್ರೀ ಯು.ಟಿ. ಖಾದರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ನಂತರ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಅವರು ಸೇರಿದಂತೆ ಸಚಿವರು, ಶಾಸಕರುಗಳು ನೂತನ ವಿಧಾನಸಭಾಧ್ಯಕ್ಷ ಶ್ರೀ ಯು.ಟಿ. ಖಾದರ್ ಅವರನ್ನು ಸಭಾಧ್ಯಕ್ಷರ ಪೀಠಕ್ಕೆ ಆಹ್ವಾನಿಸಿ ಅಭಿನಂದಿಸಿ ಶುಭಕೋರಿದರು.

## ಶಾಸಕರಾಗಿ ಶ್ರೀ ಅಶೋಕ್ ಮಲ್ಲಪ್ಪ ಮನಗೂಳಿ ಆಯ್ಕೆ



2023ರ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದ ನಮ್ಮ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಅಶೋಕ್ ಮಲ್ಲಪ್ಪ ಮನಗೂಳಿ ಅವರನ್ನು ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಆಡಳಿತ ಮಂಡಳಿ ಎಲ್ಲ ಸದಸ್ಯರ ಪರವಾಗಿ ಅಭಿನಂದಿಸಿ, ಶುಭಕೋರಲಾಯಿತು.

# ರೈತರ ಬಂಧು, ಜನಪ್ರಿಯ ಸಹಕಾರಿ ಮುಖಂಡ ದೂರದೃಷ್ಟಿಯ ನೇತಾರ, ಸಹಕಾರಿ ಹೃದಯದ ರಾಜಕಾರಣಿ ನೂತನ ಸಹಕಾರ ಸಚಿವ ಮಾನ್ಯ ಶ್ರೀ ಕೆ.ಎನ್. ರಾಜಣ್ಣನವರು

ಶಂಕರ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು

"ಮನುಷ್ಯ ಎಷ್ಟರಮಟ್ಟಿಗೆ ಇತರರ ಒಳ್ಳೆಯದಕ್ಕಾಗಿ ದುಡಿಯುತ್ತಾನೋ ಅಷ್ಟರಮಟ್ಟಿಗೆ ಅವನು ದೊಡ್ಡವನಾಗುತ್ತಾನೆ. ಶ್ರೀ ಕೆ.ಎನ್.ರಾಜಣ್ಣನವರು ಇಂದು ರಾಜ್ಯದ ದೊಡ್ಡ ವ್ಯಕ್ತಿಯಾಗಿ ಬೆಳೆದಿರುವುದರ ರಹಸ್ಯ ಈ ಮಾತಿನಲ್ಲಿ ಅಡಗಿದೆ."

ಬಡಜನತೆಯ ಆರ್ಥಿಕ ಸಂಕಷ್ಟಗಳಿಗೆ ಸಹಕಾರವೇ "ದಿವ್ಯ ಔಷಧಿ" ಎಂದು ನಂಬಿ ಸಹಕಾರಿ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಶ್ರೀ ಕೆ.ಎನ್.ರಾಜಣ್ಣನವರು ರಾಜ್ಯದ ಒಬ್ಬ ಅಪರೂಪದ ಸಹಕಾರಿ, ಜಿಲ್ಲೆಯ ಹೆಮ್ಮೆಯ ಸಹಕಾರಿ. ಕರ್ನಾಟಕ ರಾಜ್ಯದ ಸಹಕಾರ ಚಳುವಳಿಯಲ್ಲಿ ಶ್ರೀ ಕೆ.ಎನ್. ರಾಜಣ್ಣನವರ ಹೆಸರು ಜನಜನಿತ. ಹಲವಾರು ಸಹಕಾರ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳಸಿ, ಪೋಷಿಸಿ ಎತ್ತರೆತ್ತರಕ್ಕೆ ಕೊಂಡೊಯ್ದ ಅಪರೂಪದ ದಾಖಲೆ. ಅವರ ಕತೃತ್ವ ಶಕ್ತಿ, ದೂರದೃಷ್ಟಿ, ಅಬಲರ ಬಗೆಗಿನ ಅನುಕಂಪ, ಧ್ವನಿ ಇಲ್ಲದವರಿಗೆ ಧ್ವನಿಯಾಗುವ ವ್ಯಕ್ತಿತ್ವ ಅವರದು. ಸಹಕಾರಿ ಕ್ಷೇತ್ರದ ಮುಖಾಂತರ ಜನಸೇವೆಯ ಸಂಕಲ್ಪ ತೊಟ್ಟು ಜೀವನದ ಅನೇಕ ಏರಿಳಿತಗಳನ್ನು ಹಿಮ್ಮೆಟ್ಟಿ ಸಹಕಾರಿ ಕ್ಷೇತ್ರದ ರುವಾರಿಯಾಗಿ ಇಂದು ಸಹಕಾರಿ ಸಚಿವ ಸ್ಥಾನವನ್ನು ಅಲಂಕರಿಸಿ ಶ್ರೀ ಕೆ. ಎನ್. ಆರ್ ರವರು ಒಬ್ಬ ಅಪ್ಪಟ ಸಹಕಾರಿ.

ಶ್ರೀ ಕೆ.ಎನ್. ರಾಜಣ್ಣನವರು ಮೂಲತಃ ರೈತಪರ ಒಲವುಳ್ಳವರು ರೈತಸ್ನೇಹಿಯಾಗಿ ಅವರ ಕಷ್ಟ ಕಾರ್ಪಣ್ಯಗಳಿಗೆ ಬಲವಾಗಿ ಸ್ಪಂದಿಸಿ ಜನಹಿತದ ಚಿಂತೆ ಸೇವಾ ಮನೋಭಾವನೆ ಅವರ ವ್ಯಕ್ತಿತ್ವದ ವೈಶಿಷ್ಟ್ಯ. ಶ್ರೀ ಕೆ.ಎನ್. ರಾಜಣ್ಣನವರು ವಿದ್ಯಾರ್ಥಿ ದೆಸೆಯಿದ್ದಾಗಲೇ ವಿದ್ಯಾರ್ಥಿ ನಾಯಕರಾಗಿದ್ದರು. ನಾಯಕತ್ವದ ಎಲ್ಲ ಗುಣಗಳು ಸಹಜವಾಗಿ ಅವರಲ್ಲಿ ಮೂಡಿ ಬಂದಿದೆ. 1976 ನೇ ವರ್ಷ ಅವರ ಬದುಕಿನಲ್ಲಿ ಹೊಸ ಆಯಾಮವನ್ನು ಪಡೆದ ವರ್ಷ ಕ್ಯಾತ್ಸಂದ್ರ ಪಂಚಾಯಿತಿ ಅಧ್ಯಕ್ಷರಾಗಿ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಅವರು ಹೋರಾಟಗಾರರು. ರೈತರ ಪರವಾಗಿ ರೈತರ ಏಳಿಗೆಗಾಗಿ ಹಗಲಿರುಳು ದುಡಿಯುತ್ತಾರೆ. ಅವರ ಬದುಕನ್ನು ಹಸನುಗೊಳಿಸುವುದಕ್ಕಾಗಿ ಅನೇಕ ವೈವಿಧ್ಯಮಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ತುಮಕೂರು ಡಿ.ಸಿ.ಸಿ. ಬ್ಯಾಂಕಿನ ಮುಖಾಂತರ ಅನುಷ್ಠಾನಗೊಳಿಸುತ್ತಿರುವ ಮುಖಾಂತರ ಶ್ರೀ ರಾಜಣ್ಣನವರು ತುಮಕೂರು ಜಿಲ್ಲೆಯನ್ನು ರಾಜ್ಯದ, ರಾಷ್ಟ್ರದ ಸಹಕಾರಿ ಭೂಪಟದಲ್ಲಿ ಮೂಡುವಂತೆ ಮಾಡಿರುವ ಅಪರೂಪದ ಸಹಕಾರಿ. ಇವರು ನಿಷ್ಠುರವಾದಿ ಹಾಗೂ



ಹಠವಾದಿಯಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ತುಮಕೂರು ಡಿ.ಸಿ.ಸಿ ಬ್ಯಾಂಕ್, ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ರಾಜ್ಯ ಸಹಕಾರ ಮಹಾಮಂಡಳ, ತುಮಕೂರು ಟಿ.ಎ.ಪಿ.ಸಿ.ಎಂ.ಎಸ್ ರಾಷ್ಟ್ರಮಟ್ಟದ ಬ್ಯಾಂಕುಗಳ ಮಹಾಮಂಡಳ ಸಹಕಾರಿ ಬ್ಯಾಂಕುಗಳ ಮಹಾಮಂಡಳ, ಮುಂತಾದ ಹತ್ತು ಹಲವಾರು ಸಂಘ, ಸಂಸ್ಥೆಗಳೊಂದಿಗೆ ತಮ್ಮನ್ನು ತಾವು ಬೆಸೆದುಕೊಂಡು ಬೆಳೆದ ಶ್ರೀ ಕೆ.ಎನ್. ರಾಜಣ್ಣನವರು ಪ್ರಾಮಾಣಿಕತೆ, ನಿಷ್ಠೆ, ಸೇವಾಭಾವ ಹಾಗೂ ತಾತ್ವಿಕ ವಿಚಾರಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳದ ನಿಷ್ಠುರರಾಗಿ ನಾಡಿನ ಶ್ರೇಷ್ಠ ಪುತ್ರರಾಗಿ ಗಣ್ಯರಾಗಿ ಸಹಕಾರಿ ಕ್ಷೇತ್ರದಲ್ಲಿ ಜನಮಾನಸದಲ್ಲಿ ಬೇರೂರಿ ಜನರ ಗಮನ ಸೆಳೆದಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿ ಹಾಗೂ ಕರ್ನಾಟಕ

## ವಿಶೇಷ ಲೇಖನ





ವಿಧಾನಸಭೆಯ ಸದಸ್ಯರಾಗಿ ತಮ್ಮ ಹುದ್ದೆಗೆ ಗೌರವ ತರುವಂತಹ ಹಾಗೂ ವೈವಿಧ್ಯಮಯ ಪ್ರಗತಿ ಕಾರ್ಯಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ಕ್ಷೇತ್ರದಲ್ಲಿ ಕೈಗೊಂಡು ಜನಮಾನಸದಲ್ಲಿ ಆದರ್ಶರಾಗಿರುತ್ತಾರೆ.

ರೈತರ ಆರ್ಥಿಕ ಅಭಿವೃದ್ಧಿ ಸಹಕಾರಿ ರಂಗದಿಂದಲೇ ಮಾತ್ರ ಸಾಧ್ಯವೆಂದು ಮನಗೊಂಡ ಶ್ರೀ ಕೆ.ಎನ್.ರಾಜಣ್ಣನವರು 1979ರಲ್ಲಿ ತುಮಕೂರು ಟಿ.ಎ.ಪಿ.ಸಿ.ಎಂ. ಎಸ್.ನ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರವನ್ನು ಪ್ರವೇಶಿಸಿದರು. 10 ವರ್ಷಗಳಿಗಿಂತಲೂ ಹೆಚ್ಚು ಕಾಲ ಟಿ.ಎ.ಪಿ.ಸಿ.ಎಂ.ಎಸ್.ಯ ಅಧ್ಯಕ್ಷರಾಗಿ ತನ್ಮೂಲಕ ತುಮಕೂರು ಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರವನ್ನು ತಮ್ಮ ಅಚ್ಚುಮೆಚ್ಚಿನ ಸೇವಾ ಕ್ಷೇತ್ರವನ್ನಾಗಿ ಆರಿಸಿಕೊಂಡರು. ಕ್ಯಾತ್ಸಂದ್ರದ ಚಂದ್ರಮೌಳೇಶ್ವರ ಸಹಕಾರ ಸಂಘದ ಸ್ಥಾಪಕ ಅಧ್ಯಕ್ಷರಾಗಿ ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್‌ನ ನಿರ್ದೇಶಕರಾಗಿ ಸಹಕಾರಿ ಶಿಕ್ಷಣ ತರಬೇತಿ ಪ್ರಚಾರ ಕಾರ್ಯದಲ್ಲಿಯೂ ಸಹ ಆಸಕ್ತಿ ತೋರಿಸಿದ್ದಾರೆ. ತಮ್ಮ ಅಪಾರ ಅನುಭವ ಮತ್ತು ಪರಿಶ್ರಮದಿಂದ ಸಹಕಾರಿ ತತ್ವ ಆದರ್ಶಗಳಲ್ಲಿ ನಂಬಿಕೆ ಇಟ್ಟು ಈ ಕ್ಷೇತ್ರವನ್ನು ತಮ್ಮ ಅಮೂಲ್ಯ ಸೇವೆಯ ಮೂಲಕ ಶ್ರೀಮಂತಗೊಳಿಸಿದ್ದಾರೆ. ಅವರ ಮಾತಿನಲ್ಲಿಯೇ ಹೇಳಬೇಕಾದರೆ ನಾನು ಜೀವನದಲ್ಲಿ ಬಡತನ, ಸಿರಿತನವನ್ನು ನೋಡಿದ್ದೇನೆ. ಅಧಿಕಾರವನ್ನು ಅನುಭವಿಸಿದ್ದೇನೆ. ಅವೆಲ್ಲವೂ ಶಾಶ್ವತವಲ್ಲ. ರೈತರು ಬಡಜನತೆ ಆರ್ಥಿಕವಾಗಿ ಅಬಲರಾದವರ ಶೋಷಣೆಯನ್ನು ತಪ್ಪಿಸುವುದೇ ನನ್ನ ಜೀವನದ ಗುರಿ. ಈ ದಿಸೆಯಲ್ಲಿ ಸಾಧ್ಯವಿರುವ ಎಲ್ಲ ಯೋಜನೆಗಳನ್ನು ಡಿ.ಸಿ.ಸಿ.ಬ್ಯಾಂಕ್ ಮತ್ತು ರಾಜ್ಯ ಅಪೆಕ್ಸ್ ಬ್ಯಾಂಕಿನ ಮುಖಾಂತರ ಹಾಗೂ ಶಾಸಕನಾಗಿ ಜಾರಿಗೊಳಿಸುತ್ತೇನೆ.

ರಾಜ್ಯದ ಸಹಕಾರಿ ಕ್ಷೇತ್ರದ ಉತ್ತುಂಗ ಸಂಸ್ಥೆ ಎನಿಸಿದ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ದಿನಾಂಕ 01–10–2001 ರಂದು ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಗೊಂಡರು. ತಮ್ಮ ಅಪಾರ ಅನುಭವ ದಿಟ್ಟ ನಿರ್ಧಾರಗಳಿಂದ ಅಪೆಕ್ಸ್ ಬ್ಯಾಂಕನ್ನು ರೈತ ಸಮುದಾಯದ ಉನ್ನತಿಗಾಗಿ ಶ್ರಮಿಸುತ್ತಿರುವ ಬ್ಯಾಂಕ್ ಎಂದು ಮಾರ್ಪಾಡು ಮಾಡಿ ರಾಷ್ಟ್ರದಲ್ಲಿಯೇ ಸಹಕಾರಿ ಕ್ಷೇತ್ರದ ನೇತಾರರೆಂದು ಹೆಸರು ಪಡೆದರು.

ಜಿಲ್ಲೆಯ ಸಹಕಾರಿ ಕ್ಷೇತ್ರದ ಏಕೈಕ ರೈತ ಸಮುದಾಯದ ಬ್ಯಾಂಕಾಗಿರುವ ತುಮಕೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ 27–01–2001 ರಂದು ಅಧಿಕಾರ ಸ್ವೀಕರಿಸಿದರು. ಬ್ಯಾಂಕಿನಲ್ಲಿ ಕೃಷಿ ಮತ್ತು ಕೃಷಿಯೇತರ ಸಾಲಗಳ ನೀಡಿಕೆ, ಸಾಲ ವಸೂಲಾತಿ, ಕಾರ್ಯದಕ್ಷತೆ ಆಡಳಿತ ಸುಧಾರಣೆ ತರಬೇತಿ ಮುಂತಾದ ವಿಷಯಗಳಲ್ಲಿ ಉಲ್ಲೇಖನೀಯ ಮಾರ್ಪಾಡುಗಳಿಂದ ಬ್ಯಾಂಕಿಗೆ ಒಂದು ಹೊಸ ರೂಪವನ್ನು ತಂದುಕೊಟ್ಟರು. ಇಂದು ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಒಂದು ಆದರ್ಶ ಮತ್ತು ಅನುಕರಣೀಯ ಡಿ.ಸಿ.ಸಿ. ಬ್ಯಾಂಕಾಗಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ.

ಇಂದು ರಾಜ್ಯದಲ್ಲಿಯೇ ಮೌನಕ್ರಾಂತಿ ನಡೆಯುತ್ತಿದ್ದು, ತುಮಕೂರು ಡಿಸಿಸಿ ಬ್ಯಾಂಕ್ ಮುಂಚೂಣಿಯಲ್ಲಿದೆ. ರಾಷ್ಟ್ರಮಟ್ಟದ ಸಹಕಾರಿ ಕ್ಷೇತ್ರದಲ್ಲಿಯೂ ಸಹ ಶ್ರೀ ಕೆ.ಎನ್. ರಾಜಣ್ಣನವರ ಸೇವೆ ವಿಸ್ತಾರಗೊಂಡು ರಾಷ್ಟ್ರೀಯ ರಾಜ್ಯ ಸಹಕಾರ ಬ್ಯಾಂಕುಗಳ ಒಕ್ಕೂಟದ ನಿರ್ದೇಶಕರಾಗಿ ರಾಜ್ಯ ಸಹಕಾರಿ ಮಾರಾಟ ಮಹಾಮಂಡಲದ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರದ ಎಲ್ಲಾ ಮಜಲುಗಳಲ್ಲಿ ತಮ್ಮ ವಿಶಿಷ್ಟಪೂರ್ಣವಾದ ವ್ಯಕ್ತಿತ್ವದ ಅರ್ಪಣಾ ಮನೋಭಾವದಿಂದ ರಾಷ್ಟ್ರದ ಸಹಕಾರ ಅಭಿವೃದ್ಧಿಯಲ್ಲಿ ಖ್ಯಾತಿ ಪಡೆದಿದ್ದಾರೆ. ಜಿಲ್ಲೆಯ ಬೆಳ್ಳಾವಿ ಕ್ಷೇತ್ರದಿಂದ ವಿಧಾನ ಸಭೆಗೆ ಪ್ರತಿನಿಧಿಸಿ ತೀರಾ ಹಿಂದುಳಿದ, ಬಡವರ ಸಮಸ್ಯೆಗಳಿಗೆ ಬಲವಾಗಿ ಸ್ಪಂದಿಸುತ್ತಿದ್ದಾರೆ. ಜನತೆಯ ದಕ್ಷ ಶಾಸಕರೆಂದು ಕೀರ್ತಿಗಳಿಸಿರುತ್ತಾರೆ. 1998ರಿಂದ 2004 ರವರೆಗೆ ತುಮಕೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ಅತ್ಯಧಿಕ ಮತಗಳ ಅಂತರದಿಂದ ಜಯಶೀಲರಾಗಿ ವಿಧಾನ ಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಅನೇಕ ಬಾರಿ ವಿದೇಶ ಪ್ರವಾಸ ಕೈಗೊಂಡು ಅಲ್ಲಿನ ಸಹಕಾರಿ ಅಭಿವೃದ್ಧಿ ಬಗೆಗೆ ಅಧ್ಯಯನ ಮಾಡಿದ್ದಾರೆ.

ಜಿಲ್ಲೆಯ ಆರ್ಥಿಕ, ರಾಜಕೀಯ, ಸಹಕಾರಿ ಕ್ಷೇತ್ರದಲ್ಲಿ ಅನುಪಮ ಸೇವೆ ಮಾಡುತ್ತಿರುವ ಶ್ರೀ ಕೆ.ಎನ್.ರಾಜಣ್ಣನವರು ಜಿಲ್ಲೆಯು ರಾಷ್ಟ್ರದ ಸಹಕಾರ ಕ್ಷೇತ್ರಕ್ಕೆ ನೀಡಿದ ಅನುಪಮ ಕೊಡುಗೆಯಾಗಿ ಈ ಕ್ಷೇತ್ರವನ್ನು ಬೆಳೆಸಲು ಪ್ರಗತಿಯತ್ತ ಕೊಂಡೊಯ್ಯುತ್ತಿದ್ದಾರೆ.



ಸಹಕಾರಿ ಕ್ಷೇತ್ರದಲ್ಲಿ ಸುಮಾರು 45 ವರ್ಷಗಳಿಂದ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ತುಮಕೂರು ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಕೆ.ಎನ್.ರಾಜಣ್ಣನವರ ಐತಿಹಾಸಿಕ ಸೇವೆಯ ಕೆಲವು ನಿದರ್ಶನಗಳು :

1. ತುಮಕೂರು ಜಿಲ್ಲೆ ತೀವ್ರ ಬರಗಾಲ ಎದುರಿಸುತ್ತಿದ್ದಾಗ ಸರ್ಕಾರ ಪ್ರಾರಂಭಿಸಿದ ಗೋಶಾಲೆಗಳಿಗೆ ಡಿ.ಸಿ.ಸಿ. ಬ್ಯಾಂಕಿನ ವತಿಯಿಂದ ರೈತರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ಊಟ ನೀಡುವುದರ ಮೂಲಕ ರಾಜ್ಯಕ್ಕೆ ಮಾದರಿಯಾಗಿದೆ.
2. ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದ ಕೀರ್ತಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣನವರಿಗೆ ಸಲ್ಲುತ್ತದೆ. ಜಿಲ್ಲೆಯ ರೈತರ ಮಕ್ಕಳಿಗೆ ಪ್ರತಿವರ್ಷ ಪ್ರತಿಭಾ ಪುರಸ್ಕಾರವನ್ನು ನೀಡುವ ಮಾದರಿ ಯೋಜನೆಯನ್ನು ಜಾರಿಗೊಳಿಸಿ ಗ್ರಾಮೀಣ ಪ್ರದೇಶದ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುತ್ತಿರುವ ಶ್ರೀ ಕೆ.ಎನ್. ರಾಜಣ್ಣನವರ "ಸಾಮಾಜಿಕ ಕಳಕಳಿ" ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಈ ಹಿನ್ನಲೆಯಲ್ಲಿ ಹಿರಿಯ ಸಹಕಾರಿಯಾಗಿ ಹಾಗೂ ಈ ಕ್ಷೇತ್ರಕ್ಕೆ 4 ದಶಕಗಳ ಅವಿರತ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಗೌರವಿಸಿ 14–11–2013 ರಂದು ಜರುಗಿದ 2013ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಆಚರಣೆ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದಿಂದ "ಸಹಕಾರ ರತ್ನ" ಪುರಸ್ಕಾರಕ್ಕೆ ಭಾಜನರಾಗಿರುತ್ತಾರೆ. ಕರ್ನಾಟಕ ರಾಜ್ಯದ ಸಹಕಾರಿ ಚಳುವಳಿಯ ಉತ್ತುಂಗ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಸಹಕಾರ ಅಫೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಎರಡನೇ ಬಾರಿಗೆ ಆಯ್ಕೆಗೊಂಡು ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದಿರುತ್ತಾರೆ. ಅಲ್ಲದೆ ಏಷ್ಯಾದಲ್ಲಿಯೇ ಪ್ರಥಮ ಸಹಕಾರ ಸಂಘವೆಂದೆನಿಸಿದ ಕಣಗಿನಹಾಳ್ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಅಫೆಕ್ಸ್ ಬ್ಯಾಂಕ್ ಅಧ್ಯಕ್ಷರಾದ ಅವಧಿಯಲ್ಲಿ ಭೇಟಿ ನೀಡಿ ಸಂಘದ ಪುನಃಶ್ಚೇತನ ಕಾರ್ಯಕ್ಕೆ ಅಪೆಕ್ಸ್ ಬ್ಯಾಂಕಿನಿಂದ ಭಾರೀ ಮೊತ್ತದ ಆರ್ಥಿಕ ನೆರವನ್ನು ನೀಡಿರುವುದು ಅವರಿಗೆ ಸಹಕಾರಿ ಚಳುವಳಿಯ ಮೇಲಿರುವ ಕಾಳಜಿ ಹಾಗೂ ರೈತ ಸಮುದಾಯದ ಮೇಲೆ ಇರುವ ಅನುಕಂಪ ಸೇವಾ ಭಾವನೆಯನ್ನು ಎತ್ತಿ ತೋರಿಸುತ್ತದೆ. ರಾಜಣ್ಣನವರು ರೈತರ ಪರವಾಗಿ ರೈತರ ಏಳಿಗೆಗಾಗಿ ರೈತರ ಬದುಕನ್ನು ಹಸನಗೊಳಿಸುವುದಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡವರು. ಹೀಗೆ ಗ್ರಾಮಾಂತರ ಜನತೆಯೊಂದಿಗೆ ತಮ್ಮನ್ನು ಬೆರೆಸಿಕೊಂಡು ಬೆಳೆದ ಶ್ರೀ ಕೆ.ಎನ್. ಆರ್.ರವರು ರೈತರನ್ನು ಮಧ್ಯವರ್ತಿಗಳ ಶೋಷಣೆಯಿಂದ ಮುಕ್ತಗೊಳಿಸಲು ಅನೇಕ ಪ್ರಗತಿಪರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ರೈತರ ಜಾಗೃತಿಗಾಗಿ ಅವರ ಸರ್ವಾಂಗೀಣ ಉನ್ನತಿಗಾಗಿ ಸಹಕಾರದ ಅಸ್ತ್ರವನ್ನು ಬಳಸಲು ಸದಾ ಅರ್ಪಿತರಾಗಿದ್ದಾರೆ. ಹೀಗೆ ರಾಷ್ಟ್ರದ ಸಹಕಾರಿ ಚಳುವಳಿಗೆ ತುಮಕೂರು ಜಿಲ್ಲೆ ನೀಡಿದ ಒಂದು ಉತ್ತಮ ಅನುಪಮ ಕೊಡುಗೆ ಶ್ರೀ ಕೆ.ಎನ್.ರಾಜಣ್ಣನವರು.

ಹಿರಿಯ ಸಹಕಾರಿ ಹಾಗೂ ಸಹಕಾರಿ ಕ್ಷೇತ್ರದ ಹೆಮ್ಮೆಯ ಪುತ್ರ ಶ್ರೀ ಕೆ.ಎನ್. ರಾಜಣ್ಣನವರು ತುಮಕೂರು ಜಿಲ್ಲೆಯ ಅಪರೂಪದ ಕೊಡುಗೆ. ರಾಜ್ಯ ಸಹಕಾರ ಸಚಿವರಾಗಿ ಜನಸೇವೆ ಗೈಯ್ಯಲು ಕನಸನ್ನು ಹೊತ್ತಿ ಇಂದು ಮಾನ್ಯ ಶ್ರೀ ಸಿದ್ದರಾಮಯ್ಯನವರ ಸಂಪುಟದಲ್ಲಿ ಸಹಕಾರ ಸಚಿವರಾಗಿರುವುದು ಸಹಕಾರಿಗಳು ಹೆಮ್ಮೆ ಪಡುವ ವಿಷಯವಾಗಿದೆ. ಸಮಸ್ತ ಸಹಕಾರಿಗಳ, ಬಡವರ, ದುರ್ಬಲ ವರ್ಗದವರ ಧ್ವನಿಯಾಗಿ ನಾನು ಕೆಲಸ ಮಾಡುತ್ತೇನೆಂದು ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿಕೆ ನೀಡಿರುವುದು ಇಲ್ಲಿ ಉಲ್ಲೇಖನೀಯ. ಸಹಕಾರಿ ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಕ್ರಾಂತಿಕಾರಿ ಬದಲಾವಣೆಯನ್ನು ನಾವು ಅಪೇಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ.



# ಇನ್ನೆರಡು ವರ್ಷಗಳಲ್ಲಿ ಕರ್ನಾಟಕ 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ : ಅಮಿತಾಬ್ ಕಾಂತ್

ಮುಂದಿನ ಎರಡು ವರ್ಷಗಳಲ್ಲಿ ತಮಿಳುನಾಡು ಮತ್ತು ಕರ್ನಾಟಕವು 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ ಎಂದು ಭಾರತದ ಜಿ20 ರಾಯಭಾರಿ ಮತ್ತು ನೀತಿ ಆಯೋಗದ ಮಾಜಿ ಸಿಇಒ ಅಮಿತಾಭ್ ಕಾಂತ್ ಹೇಳಿದ್ದಾರೆ. ಭಾರತದ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿಯಲ್ಲಿ ದಕ್ಷಿಣದ ರಾಜ್ಯಗಳು ಪ್ರಮುಖ ಪಾತ್ರ ವಹಿಸಲಿವೆ ಎಂದೂ ಅವರು ತಿಳಿಸಿದ್ದಾರೆ.

ಇಂಡಿಯಾ ಟುಡೇ ಕಾನ್‌ಕ್ಲೇವ್ ಸೌತ್ 2023ರಲ್ಲಿ ಮಾತನಾಡಿರುವ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇನ್ನೆರಡು ವರ್ಷಗಳಲ್ಲಿ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳು 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿವೆ. ಆದ್ದರಿಂದ, ಭಾರತದ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಮತ್ತು ನಂತರ 10 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಮಹತ್ವಾಕಾಂಕ್ಷೆಯಲ್ಲಿ ಹೆಚ್ಚಿನ ಪಾಲಿನ ಕೊಡುಗೆಯನ್ನು ದಕ್ಷಿಣದ ರಾಜ್ಯಗಳನ್ನು ನೀಡಬೇಕಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಭಾರತದ ಬೆಳವಣಿಗೆಗೆ ನಿಜವಾಗಿಯೂ ಚಾಲನೆ ನೀಡಲು ಈ ರಾಜ್ಯಗಳು ಮುಂಚೂಣಿಯಲ್ಲಿರುವ ಪ್ರಮುಖ ಚಾಲಕರಾಗಿರಬೇಕು, ಎಂದು ಅಮಿತಾಭ್ ಕಾಂತ್ ಅಭಿಪ್ರಾಯಪಟ್ಟಿದ್ದಾರೆ. ದೇಶದ ಜಿಡಿಪಿಗೆ ಶೇ. 30ರಷ್ಟು ಕೊಡುಗೆಯನ್ನು ದಕ್ಷಿಣ ಭಾರತ ನೀಡುತ್ತಿದೆ. ದಕ್ಷಿಣದ ರಾಜ್ಯಗಳಲ್ಲಿನ ತಲಾ ಆದಾಯವು ದೇಶದ ಇತರ ಎಲ್ಲಾ ಭಾಗಗಳಿಗಿಂತ ಹೆಚ್ಚಿನದಾಗಿದೆ ಎಂದು ಅವರು ಹೇಳಿದ್ದಾರೆ.

ತಮಿಳುನಾಡು, ತೆಲಂಗಾಣ, ಕರ್ನಾಟಕ ಮತ್ತು ಕೇರಳದ ಉದಾಹರಣೆಗಳನ್ನು ನೀಡಿದ ಅವರು, ದೇಶದ ದಕ್ಷಿಣ ಭಾಗದ ರಾಜ್ಯಗಳು ಹಲವಾರು ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ, ತಮಿಳುನಾಡು ಉತ್ಪಾದನೆಯಲ್ಲಿ ಉತ್ಕೃಷ್ಟವಾಗಿದ್ದು, ಅತ್ಯಾಧುನಿಕ ವಲಯಗಳಿಗೆ ಬೇಕಾದ ಅತ್ಯಂತ ಹೆಚ್ಚಿನ ಕೌಶಲ್ಯ ಹೊಂದಿರುವ ಕುಶಲಕರ್ಮಿಗಳು ಇಲ್ಲಿದ್ದಾರೆ. ತೆಲಂಗಾಣ ಔಷಧೀಯ ವಲಯದಲ್ಲಿ ಉತ್ತಮವಾಗಿದೆ. ಭಾರತದ ಫಾರ್ಮಾ ವಲಯದ ಸುಮಾರು ಶೇ. 35–40ರಷ್ಟು ಉತ್ಪನ್ನಗಳು ಅಲ್ಲಿಂದಲೇ ಬರುತ್ತವೆ ಎಂದು ಅವರು ವಿವರ ನೀಡಿದ್ದಾರೆ.

ಕೇರಳವು ಪ್ರವಾಸೋದ್ಯಮ ವಲಯದಲ್ಲಿ ದೊಡ್ಡ ರೀತಿಯಲ್ಲಿ ಸಾಧನೆ ಮಾಡಿದೆ. ಈ ಮೂಲಕ ತನ್ನದೇ ಆದ ವಿಶಿಷ್ಟ ಬ್ರ್ಯಾಂಡ್ ಅನ್ನು ಸೃಷ್ಟಿಸಿದೆ. ಕರ್ನಾಟಕವು ಸುಮಾರು ಎರಡೂವರೆ ದಶಕಗಳಿಂದ ಭಾರತದ ಸೇವಾ ವಲಯದ ಕೇಂದ್ರ ಸ್ಥಾನವಾಗಿದೆ. ಈ ಮೂಲಕ ಭಾರತದ ಸೇವಾ ಆರ್ಥಿಕತೆಗೆ ಚಾಲನೆ ನೀಡಿದೆ ಎಂದು ಹೇಳಿದ್ದಾರೆ.

ಕೊನೆಯದಾಗಿ, ಆದರೆ ಮುಖ್ಯವಾಗಿ ಉತ್ಪಾದನೆ ಮತ್ತು ಫಾರ್ಮಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಆಂಧ್ರ ಪ್ರದೇಶವು ಈಗ ನವೀಕರಿಸಬಹುದಾದ ಮತ್ತು ಹಸಿರು ಇಂಧನ ಕ್ಷೇತ್ರದಲ್ಲಿ ತ್ವರಿತ ಬೆಳವಣಿಗೆಯನ್ನು ಸಾಧಿಸಲು ಸಜ್ಜಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ರಾಜ್ಯಗಳು ನಿಜವಾಗಿಯೂ ಅತ್ಯುತ್ತಮ ಉದ್ಯೋಗ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಪ್ರದರ್ಶಿಸಿವೆ. ಆದ್ದರಿಂದ ಜೀವನದ ಗುಣಮಟ್ಟ ಮತ್ತು ಆರೋಗ್ಯ, ಶಿಕ್ಷಣ ಮತ್ತು ಪೋಷಣೆಯಲ್ಲಿನ ಸಾಮಾಜಿಕ ಸೂಚಕಗಳಲ್ಲಿ ಭಾರತದ ಉಳಿದ ಭಾಗಗಳಿಗೆ ಹೋಲಿಸಿದರೆ ಈ ರಾಜ್ಯಗಳು ಮುಂಚೂಣಿಯಲ್ಲಿವೆ, ಎಂದು ಅವರು ಹೇಳಿದ್ದಾರೆ.

ಇದು ನಿಜವಾಗಿಯೂ ಹಲವಾರು ವರ್ಷಗಳಿಂದ ಮಾಡಿರುವ ಕೆಲಸವನ್ನು ತೋರಿಸುತ್ತದೆ. ಸರ್ಕಾರದಲ್ಲಿನ ಬದಲಾವಣೆಗಳ ಹೊರತಾಗಿಯೂ ಸಾಮಾಜಿಕ ಅಭಿವೃದ್ಧಿಯ ನೀತಿಯ ಸ್ಥಿರತೆಯು ಈ ರಾಜ್ಯಗಳಲ್ಲಿ ನಿಜವಾಗಿಯೂ ಫಲಿತಾಂಶಗಳನ್ನು ನೀಡಿದೆ ಎಂದು ಅಮಿತಾಭ್‌ಕಾಂತ್ ಶ್ಲಾಘಿಸಿದ್ದಾರೆ.

# ಆದಾಯ ತೆರಿಗೆ ರಿಟರ್ನ್ ಸಲ್ಲಿಸುವಾಗ ಈ 5 ವಿಷಯಗಳನ್ನು ಮರೆಯಬೇಡಿ!

**ITR ಅನ್ನು ಫೈಲ್ ಮಾಡಲು ನಿಮಗೆ ಫಾರ್ಮ್ 16, 26AS, AIS/TIS, ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು, ಹೂಡಿಕೆ ದಾಖಲೆಗಳು, ಬಾಡಿಗೆ ರಸೀದಿಗಳು ಮುಂತಾದ ವಿವಿಧ ದಾಖಲೆಗಳು ಬೇಕಾಗುತ್ತವೆ. ಆದ್ದರಿಂದ ITR ರಿಟರ್ನ್ ಫೈಲಿಂಗ್ ಅನ್ನು ಪ್ರಾರಂಭಿಸುವ ಮೊದಲು, ನಿಮ್ಮ ಬಳಿ ಎಲ್ಲಾ ದಾಖಲೆಗಳನ್ನು ಭೌತಿಕವಾಗಿ ಅಥವಾ ಅದರ ಸಾಫ್ಟ್ ಕಾಪಿಗಳು ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಎಲ್ಲಾ ಆದಾಯದ ಮೂಲಗಳ ಬಗ್ಗೆ ನಿಮಗೆ ಸ್ಪಷ್ಟವಾದ ತಿಳುವಳಿಕೆ ಇದೆ ಎಂದು ನೀವು ಖಚಿತಪಡಿಸಿಕೊಳ್ಳಬೇಕು. ಉದಾಹರಣೆಗೆ ಸಂಬಳ, ಮನೆ ಬಾಡಿಗೆ, ವ್ಯಾಪಾರ ಆದಾಯ, ಬಂಡವಾಳ ಲಾಭದ ಆದಾಯ ಇತ್ಯಾದಿ. ಸರಿಯಾದ ಫಾರ್ಮ್‌ಗಳನ್ನು ಭರ್ತಿ ಮಾಡಲು ಮತ್ತು ನೀವು ಅರ್ಹರಾಗಿರುವ ಎಲ್ಲಾ ಕಡಿತಗಳನ್ನು ಕ್ಲೈಮ್ ಮಾಡಲು ಇದು ನಿಮಗೆ ಸಹಾಯ ಮಾಡುತ್ತದೆ.**

ಸ್ವಂತವಾಗಿ ಆದಾಯ ತೆರಿಗೆ ರಿಟರ್ನ್ **(ITR)** ಅನ್ನು ಸಲ್ಲಿಸುವುದು ಜಟಿಲವಾದ ಕೆಲಸ. ಅದರಲ್ಲೂ ಇದನ್ನು ಮೊದಲ ಬಾರಿಗೆ ಮಾಡುತ್ತಿದ್ದರೆ ಪ್ರಕ್ರಿಯೆಗಳು ಕಷ್ಟವೆನಿಸಬಹುದು. ಆದಾಗ್ಯೂ, ಇ-ಫೈಲಿಂಗ್ ವೆಬ್‌ಸೈಟ್‌ನಲ್ಲಾಗಿರುವ ಇತ್ತೀಚಿನ ತಿದ್ದುಪಡಿಗಳು, ಯಾವುದೇ ತೆರಿಗೆ ವೃತ್ತಿಪರರ ಸಹಾಯವಿಲ್ಲದೆ ಐಟಿಆರ್ ಅನ್ನು ಸಲ್ಲಿಸುವುದನ್ನು ಸುಲಭಗೊಳಿಸಿದೆ.

ಸಂಪೂರ್ಣ ITR ಫೈಲಿಂಗ್ ಪ್ರಕ್ರಿಯೆ ಈಗ ಮೊದಲಿಗಿಂತಲೂ ಸರಳ. ವಿಶೇಷವಾಗಿ ಸಂಬಳವನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲವನ್ನು ಹೊಂದಿರದ ಉದ್ಯೋಗಿಗಳಿಗೆ ಇದು ಸರಳವೆನಿಸುತ್ತದೆ. ನೀವು ಕೂಡ ಆದಾಯ ತೆರಿಗೆ ಪಾವತಿಸಲು ಹೊರಟಿದ್ದರೆ ಕೆಳಗಿನ ಐದು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

**ಎಲ್ಲಾ ಅಗತ್ಯ ದಾಖಲೆಗಳು :** ITR ಅನ್ನು ಫೈಲ್ ಮಾಡಲು ನಿಮಗೆ ಫಾರ್ಮ್ 16, 26AS, AIS/TIS, ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು, ಹೂಡಿಕೆ ದಾಖಲೆಗಳು, ಬಾಡಿಗೆ ರಸೀದಿಗಳು ಮುಂತಾದ ವಿವಿಧ ದಾಖಲೆಗಳು ಬೇಕಾಗುತ್ತವೆ. ಆದ್ದರಿಂದ ITR ರಿಟರ್ನ್ ಫೈಲಿಂಗ್ ಅನ್ನು ಪ್ರಾರಂಭಿಸುವ ಮೊದಲು, ನಿಮ್ಮ ಬಳಿ ಎಲ್ಲಾ ದಾಖಲೆಗಳನ್ನು ಭೌತಿಕವಾಗಿ ಅಥವಾ ಅದರ ಸಾಫ್ಟ್ ಕಾಪಿಗಳು ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**ಆದಾಯದ ಮೂಲಗಳು :** ಎಲ್ಲಾ ಆದಾಯದ ಮೂಲಗಳ ಬಗ್ಗೆ ನಿಮಗೆ ಸ್ಪಷ್ಟವಾದ ತಿಳುವಳಿಕೆ ಇದೆ ಎಂದು ನೀವು ಖಚಿತಪಡಿಸಿಕೊಳ್ಳಬೇಕು. ಉದಾಹರಣೆಗೆ ಸಂಬಳ, ಮನೆ ಬಾಡಿಗೆ, ವ್ಯಾಪಾರ ಆದಾಯ, ಬಂಡವಾಳ ಲಾಭದ ಆದಾಯ ಇತ್ಯಾದಿ. ಸರಿಯಾದ ಫಾರ್ಮ್‌ಗಳನ್ನು ಭರ್ತಿ ಮಾಡಲು ಮತ್ತು ನೀವು ಅರ್ಹರಾಗಿರುವ ಎಲ್ಲಾ ಕಡಿತಗಳನ್ನು ಕ್ಲೈಮ್ ಮಾಡಲು ಇದು ನಿಮಗೆ ಸಹಾಯ ಮಾಡುತ್ತದೆ.




**ಸೂಕ್ತ ಐಟಿಆರ್ ಫಾರ್ಮ್ ಅನ್ನು ಆಯ್ದುಕೊಳ್ಳಿ :** ವಿವಿಧ ರೀತಿಯ ಆದಾಯ ಮತ್ತು ತೆರಿಗೆದಾರರಿಗೆ ವಿವಿಧ ITR ಫಾರ್ಮ್‌ಗಳಿವೆ. ನಿಮ್ಮ ಆದಾಯದ ಮೂಲಗಳು ಮತ್ತು ತೆರಿಗೆದಾರರ ವರ್ಗವನ್ನು ಆಧರಿಸಿ, ಸರಿಯಾದ ITR ಫಾರ್ಮ್ ಅನ್ನು ಆರಿಸಿದ್ದೀರಿ ಎಂದು ಖಚಿತಪಡಿಸಿಕೊಳ್ಳಿ.

**ತೆರಿಗೆ ವಿಧಿಸಬಹುದಾದ ಆದಾಯದ ಲೆಕ್ಕಾಚಾರ :** ITR ಅನ್ನು ಸಲ್ಲಿಸುವ ಮೊದಲು ನಿಮ್ಮ ತೆರಿಗೆಯ ಆದಾಯವನ್ನು ಲೆಕ್ಕಹಾಕಬೇಕು. ಇದಕ್ಕಾಗಿ ಆದಾಯ ತೆರಿಗೆ ಕ್ಯಾಲ್ಕುಲೇಟರ್ ಅನ್ನು ಬಳಸಬೇಕು.

**ರಿಯಾಯಿತಿ :** ITR ಅನ್ನು ಸಲ್ಲಿಸುವಾಗ, ತೆರಿಗೆದಾರರು ಸೆಕ್ಷನ್ 80C, ಸೆಕ್ಷನ್ 80D, ಇತ್ಯಾದಿಗಳ ಅಡಿಯಲ್ಲಿ ಲಭ್ಯವಿರುವ ಎಲ್ಲಾ ಕಡಿತಗಳು ಮತ್ತು ವಿನಾಯಿತಿಗಳನ್ನು ಕ್ಲೈಮ್ ಮಾಡುತ್ತಿದ್ದಾರೆ ಎಂದು ಖಚಿತಪಡಿಸಿಕೊಳ್ಳಬೇಕು. ಇದು ನಿಮ್ಮ ತೆರಿಗೆಯ ಆದಾಯವನ್ನು ಕಡಿಮೆ ಮಾಡಲು ಮತ್ತು ತೆರಿಗೆ ಹೊಣೆಗಾರಿಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.



# ಆರ್‌ಬಿಐ ಸ್ಥಾಪನೆ ಹಿಂದಿನ ಮೆದುಳು ಅಂಬೇಡ್ಕರ್ ಅರ್ಥಶಾಸ್ತ್ರದಲ್ಲೂ ಬಲಭೀಮ!

**ಮನೆ ಮತ್ತು ದೇಶದ ನಿರ್ವಹಣೆ ಬೇರೆ ಬೇರೆ ಅಲ್ಲ. ಮನೆ ಯಜಮಾನ/ಯಜಮಾನ್ತಿ ಹೇಗೆ ಆದಾಯ ನೋಡಿಕೊಂಡು ಖರ್ಚು ಮಾಡುತ್ತಾರೋ ಅದೇ ರೀತಿ ದೇಶವನ್ನೂ ಮುನ್ನಡೆಸಬೇಕಾಗುತ್ತದೆ. ವಿಪರೀತ ನೋಟು ಮುದ್ರಿಸಬಾರದು, ನಾಣ್ಯ ಟಂಕಿಸಬಾರದು. ಅದರ ಬೆಲೆ ಅದನ್ನು ಮುದ್ರಿಸಿದ ಕಾಗದಕ್ಕಿಂತ ಕಡಿಮೆಯಾಗಬಹುದು. ಬೆಲೆ ಸ್ಥಿರತೆ ಇರಬೇಕು. ನೋಟಿನ ಬೆಲೆ ಏರುಪೇರುಗಳನ್ನು ಗಮನಿಸಿದರೆ ಅಂಬೇಡ್ಕರ್ ಪಾಠ ಇವತ್ತಿಗೂ ಮಾನ್ಯ.**

ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ರಾಜಕೀಯ – ಸಾಮಾಜಿಕ ಚಿಂತಕರಾಗಿದ್ದರು. ಅವರು ಸಂವಿಧಾನ ಕರಡು ರಚಿಸುವ ಮೊದಲು ಆರ್ಥಿಕ ತಜ್ಞರೂ ಆಗಿದ್ದರು. ಆ ದಿನಗಳಲ್ಲಿ ಹೆಮ್ಮರವಾಗಿದ್ದ ಜಾತಿ ವ್ಯವಸ್ಥೆ ಶ್ರಮ ವಿಭಜನೆಯನ್ನು ಆಧರಿಸಿತ್ತು. ಇದು ವೃತ್ತಿಗಳನ್ನಲ್ಲ ಮನುಷ್ಯರನ್ನೂ ವ್ಯವಸ್ಥಿತವಾಗಿ ದೂರ, ಹತ್ತಿರ ಮಾಡುತ್ತಿತ್ತು. ವೃತ್ತಿ ಆಯ್ಕೆ ಅಂತೂ ನನಸಾಗದ ಕನಸು. ಅರ್ಥವ್ಯವಸ್ಥೆಯ ಈ ಡಿಎನ್‌ಎ ಬದಲಿಸಲು ಅಂದು ಅಂಬೇಡ್ಕರ್ ಪಟ್ಟ ಪರಿಶ್ರಮ ಅಪಾರ.

ಅಂಬೇಡ್ಕರ್ ಅವರು ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯ ಹಾಗೂ ಲಂಡನ್ನಿನ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅವರು ಸಂಶೋಧನೆ ನಡೆಸಿ ಅರ್ಥಶಾಸ್ತ್ರದಲ್ಲಿ ಪ್ರೌಢ ಪ್ರಬಂಧಗಳನ್ನು ಬರೆದು ಸಲ್ಲಿಸಿದ್ದರು. ಅದಕ್ಕೆ ಮಾನ್ಯತೆಯನ್ನೂ ಗಳಿಸಿದ್ದರು. 'ರೂಪಾಯಿಯ ಸಮಸ್ಯೆಗಳು: ಇದರ ಉಗಮ ಮತ್ತು ಪರಿಹಾರ' (The Problem of the Rupee: Its Origin and Its Solution) ಕೃತಿಯು ಈಗಲೂ ಕೈಮರದಂತಿದೆ.



ಡಾ. ಅಂಬೇಡ್ಕರ್ ಅವರು ಅರ್ಥಶಾಸ್ತ್ರದಲ್ಲಿ ನನಗೆ ತಂದೆ ಇದ್ದಂತೆ. ಅವರು ಕಡೆಗಣಿಸಲ್ಪಟ್ಟ ಜನತೆಯ ದಿಟ್ಟ ಹೋರಾಟಗಾರ. ಅವರಿಗೆ ಇನ್ನೂ ಹೆಚ್ಚಿನ ಕೀರ್ತಿ ಲಭಿಸಬೇಕಾಗಿತ್ತು. ಅರ್ಥಶಾಸ್ತ್ರಕ್ಕೆ ಅವರ ಕೊಡುಗೆ ಅನನ್ಯ ಮತ್ತು ಅವಿಸ್ಮರಣೀಯ.

**– ಅಮರ್ತ್ಯ ಸೇನ್,**
**ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ**



ಭಾರತದಲ್ಲಿ ಕರೆನ್ಸಿಯಾಗಿ ಕಾಗದದ ನೋಟು ಇರಬೇಕೋ ಚಿನ್ನದ ನಾಣ್ಯ ಇರಬೇಕೋ ಎಂಬುದು 1920ರಲ್ಲಿ ದೊಡ್ಡ ಚರ್ಚೆಯಾಗಿತ್ತು. ಬಡ ದೇಶಗಳು ಮಾತ್ರ ಕಾಗದವನ್ನು ಮಡಚಿ, ಜೇಬಿನಲ್ಲಿಟ್ಟುಕೊಂಡು ಖರೀದಿ ವ್ಯವಹಾರ ಮಾಡಬಹುದು ಎನ್ನುವುದು ಚಾಲ್ತಿಯಲ್ಲಿದ್ದ ನೀತಿ.

ಅಭಿವೃದ್ಧಿ ಹೊಂದಿದ ದೇಶಗಳಾದ ಬ್ರಿಟನ್, ಫ್ರಾನ್ಸ್, ಸ್ಪೇನ್ ಚಿನ್ನದ ನಾಣ್ಯಗಳನ್ನು ಬಳಸುತ್ತಿದ್ದವು. ವಸಾಹತು ದೇಶಗಳಲ್ಲಿ ಕಾಗದ ಕರೆನ್ಸಿಯಾಗಿ ಚಲಾವಣೆಯಲ್ಲಿತ್ತು. ಅರ್ಥಶಾಸ್ತ್ರದ ಪಿತಾಮಹ ಕೇನ್ಸ್ ಭಾರತಕ್ಕೆ 'ಪೇಪರ್ ಸೂಪರ್' ಎಂದಿದ್ದರು. ಆದರೆ, ಅಂಬೇಡ್ಕರ್, 'ಕಾಗದದ ನೋಟಿನ ಬೆಲೆಯನ್ನು ಸರಕಾರ ಕಟ್ಟುತ್ತದೆ. ಆದರೆ ಚಿನ್ನದ ನಾಣ್ಯದ ಬೆಲೆಯನ್ನು ಜನ ಕಟ್ಟುತ್ತಾರೆ. ಆಡಳಿತ ಮಾಡುವವರು ಕಾಗದದ ನೋಟಿನ ಬೆಲೆಯನ್ನು ತಮ್ಮ ಮನಸ್ಸಿಗೆ ಬಂದಂತೆ, ಅವೈಜ್ಞಾನಿಕವಾಗಿ ಹೆಚ್ಚು–ಕಮ್ಮಿ ಮಾಡಬಹುದು. ನೋಟುಗಳನ್ನು ಇದ್ದಕ್ಕಿದ್ದಂತೆ ಅಮಾನ್ಯಗೊಳಿಸಬಹುದು. ಇದು ನಿಸರ್ಗ ತತ್ವಕ್ಕೆ ವಿರುದ್ಧ, ಜನತೆಗೆ ವಿರುದ್ಧ. ಜನತೆಯೇ ಸುಪ್ರೀಂ. ಹೀಗಾಗಿ ಚಿನ್ನದ ನಾಣ್ಯ ಬಳಕೆಯಾಗಬೇಕು," ಎಂದಿದ್ದರು.

**ವಹಿವಾಟು ನಡೆಸುವ ದಾರಿ :** ಮನೆ ಮತ್ತು ದೇಶದ ನಿರ್ವಹಣೆ ಬೇರೆ ಬೇರೆ ಅಲ್ಲ. ಮನೆ ಯಜಮಾನ/ಯಜಮಾನ್ತಿ ಹೇಗೆ ಆದಾಯ ನೋಡಿಕೊಂಡು ಖರ್ಚು ಮಾಡುತ್ತಾರೋ ಅದೇ ರೀತಿ ದೇಶವನ್ನೂ ಮುನ್ನಡೆಸಬೇಕಾಗುತ್ತದೆ. ವಿಪರೀತ ನೋಟು ಮುದ್ರಿಸಬಾರದು, ನಾಣ್ಯ ಟಂಕಿಸಬಾರದು. ಅದರ ಬೆಲೆ ಅದನ್ನು ಮುದ್ರಿಸಿದ ಕಾಗದಕ್ಕಿಂತ ಕಡಿಮೆಯಾಗಬಹುದು.






ಬೆಲೆ ಸ್ಥಿರತೆ ಇರಬೇಕು. ನೋಟಿನ ಬೆಲೆ ಏರುಪೇರುಗಳನ್ನು ಗಮನಿಸಿದರೆ ಅಂಬೇಡ್ಕರ್ ಪಾಠ ಇವತ್ತಿಗೂ ಮಾನ್ಯ.

**ಆರ್‌ಬಿಐ ರೂವಾರಿ :** ಮೊದಲ ಮಹಾಯುದ್ಧದಿಂದ ಆರ್ಥಿಕ ಸಂಕಷ್ಟ ಉಂಟಾಯಿತು. ಇಂಥ ಸಂದರ್ಭದಲ್ಲಿ ಏಪ್ರಿಲ್ 1, 1935ರಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾವನ್ನು ಕೋಲ್ಕೊತಾದಲ್ಲಿ ಸ್ಥಾಪನೆ ಮಾಡಲಾಯಿತು. ಇದನ್ನು ಶಿಫಾರಸು ಮಾಡಿದ್ದು ಹಿಲ್ಟನ್ ಯಂಗ್ ಕಮಿಷನ್. ಇದಕ್ಕೆ ಬೇಕಾದ ಮಾರ್ಗದರ್ಶನ ಪಡೆದಿದ್ದು ಅಂಬೇಡ್ಕರ್ ಅವರಿಂದ ಎಂಬುದು ಹೆಚ್ಚು ಮಂದಿಗೆ ತಿಳಿದಿಲ್ಲ. ಈ ಆಯೋಗ ನೇಮಕ ಮಾಡಿದ್ದು 1926ರಲ್ಲಿ.

**ಬ್ರಿಟಿಷರಿಗೆ ಬ್ಯಾಂಕ್ ಪಾಠ :** "ಅರ್ಥ ವ್ಯವಸ್ಥೆಯ ಕೀಲಿ ಕೈ ಸ್ವಾಯತ್ತ ಸಂಸ್ಥೆಯೊಂದರ ಕೈಯಲ್ಲಿರಬೇಕು. ರಾಜಕೀಯ ನಾಯಕರ ಕೀ ಬಂಚ್‌ನಂತಿರಬಾರದು. ಜನ ಕಲ್ಯಾಣಕ್ಕೆ ವಿಶಾಲ ತಳಹದಿ ಇರಬೇಕು," ಎಂಬ ಅಂಬೇಡ್ಕರ್ ಮಾತನ್ನು ಒಪ್ಪಿದ ಬ್ರಿಟನ್ ಸರಕಾರ, ಭಾರತದಲ್ಲಿ ಆರ್‌ಬಿಐ ಸ್ಥಾಪನೆಗೆ ಒಪ್ಪಿಗೆ ನೀಡಿತು.

**ಸಣ್ಣ ಹಿಡುವಳಿದಾರರಿಗೆ ಜೀವ :** ಅಂಬೇಡ್ಕರ್ 1918ರಲ್ಲಿ ಭಾರತೀಯ ಅರ್ಥಶಾಸ್ತ್ರ ಸೊಸೈಟಿಗೆ 'ಭಾರತದ ಸಣ್ಣ ಹಿಡುವಳಿಗಳ ಸಮಸ್ಯೆ ಹಾಗೂ ಪರಿಹಾರ' ಎನ್ನುವ ಪ್ರಬಂಧ ಮಂಡಿಸಿದ್ದರು. "ದೊಡ್ಡ ಹಿಡುವಳಿದಾರರು ಮಿತಿ ಇಲ್ಲದೆ ಭೂಮಿ ಖರೀದಿಸಲು ಅನುಕೂಲ ಮಾಡಿ ಕೊಡುವ ಬಾಂಬೆ ಭೂಮಿ ಸುಧಾರಣೆ ಕಾಯಿದೆಯನ್ನು ಜಾರಿಗೆ ತರಬಾರದು. ಇದರಿಂದ ಇರುವವರು ಮತ್ತು ಇಲ್ಲದವರ ನಡುವೆ ಅಂತರ ಹೆಚ್ಚುತ್ತದೆ. ಕೂಲಿ ಕಾರ್ಮಿಕರ ಬವಣೆಗಳಿಗೆ ಮುಕ್ತಿಯೇ ಇರುವುದಿಲ್ಲ," ಎಂದಿದ್ದರು. ಕಾರ್ಮಿಕರ ವಲಸೆಯನ್ನು ಬೆಂಬಲಿಸಿದರು. ಹಳ್ಳಿಗಳಿಂದ ಕೆಲಸಗಾರರು ನಗರಕ್ಕೆ ಬರಬೇಕು ಎಂದಿದ್ದರು.

**ಕಾರ್ಮಿಕ ರಕ್ಷಣೆ ಕಾನೂನು :** ಉದ್ಯಮಿಗಳು, ಉದ್ಯೋಗಿಗಳನ್ನು ಶೋಷಿಸಬಾರದು. ಇದನ್ನು ತಪ್ಪಿಸಲು ಕಠಿಣ ಕಾನೂನುಗಳನ್ನು ಸರಕಾರ ರೂಪಿಸಬೇಕು. ಆಗಿನ ಕಾಲದಲ್ಲಿ ಎಸ್ಸಿಗಳಿಗೆ ರೈಲ್ವೆ ಇಲಾಖೆ ವರದಾನವಾಗಿತ್ತು. ಸರಕು ತುಂಬುವ ಕಠಿಣ ಪರಿಶ್ರಮದ ಕೆಲಸಗಳಿಗೆ ಹೆಚ್ಚು ನೇಮಿಸಿಕೊಂಡರು. ವಸತಿ ವ್ಯವಸ್ಥೆಯನ್ನೂ ಕಲ್ಪಿಸಿದ್ದರು. ಅಸ್ಪೃಶ್ಯತೆಯ ಮೊದಲ ಬಿಡುಗಡೆ ಅಲ್ಲೇ ಆಯಿತು. ಅದು ಅವರಿಗೆ ಶಿಕ್ಷಣಕ್ಕೂ ಹಾದಿ ತೋರಿಸಿತು.

# ಕ್ಲೀನ್ ನೋಟ್ ಪಾಲಿಸಿ ನಿಯಮದಂತೆ ರೂ. 2000 ಮುಖಬೆಲೆ ನೋಟು ಹಿಂಪಡೆಯಲು ಆರ್‌ಬಿಐ ನಿರ್ಧಾರ ಹೊಸ ಅವತಾರದಲ್ಲಿ ಮತ್ತೆ ರೂ 1000 ನೋಟು?

**ನವದೆಹಲಿ :** ಆರ್‌ಬಿಐ 2,000 ರೂ. ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯಲು ನಿರ್ಧರಿಸಿದ್ದು, ಚಲಾವಣೆಗೆ ಬಂದ ಕೇವಲ ಎರಡೇ ವರ್ಷಗಳ ಅವಧಿಯಲ್ಲಿ ಈ ನೋಟು ಹಿಂಪಡೆಯಲು ಕಾರಣವೇನು? ಇಲ್ಲಿದೆ ಉತ್ತರ.

ಆರ್‌ಬಿಐ ನೀಡಿರುವ ಮಾಹಿತಿಯಂತೆ ಇದು ನೋಟ್ ಬ್ಯಾನ್ ಅಲ್ಲ.. ಆದರೆ ನಿಗದಿತ ಸಮಯದವರೆಗೂ 2,000 ರೂ. ನೋಟುಗಳು ಕಾನೂನು ಬದ್ಧವಾಗಿ ಮುಂದುವರಿಯುತ್ತವೆ. ಸೆಪ್ಟೆಂಬರ್ 30ರ ಒಳಗೆ ಎಲ್ಲರೂ ನೋಟುಗಳ ಬದಲಾವಣೆ ಇಲ್ಲವೇ ಠೇವಣಿ ಇಡುವಂತೆ ತಿಳಿಸಿದೆ.

ನವೆಂಬರ್ 2016 ರಲ್ಲಿ ಆರ್‌ಬಿಐ ಕಾಯಿದೆ, 1934ರ ಸೆಕ್ಷನ್ 24 (1)ರ ಅಡಿಯಲ್ಲಿ ರೂ. 500 ಮತ್ತು 1000 ನೋಟುಗಳನ್ನು ಅಮಾನ್ಯಗೊಳಿಸಿದ ನಂತರ, ಆರ್ಥಿಕತೆಯ ಕರೆನ್ಸಿ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ರೂ.2000 ನೋಟನ್ನು ಪರಿಚಯಿಸಿತು. 2018-19ನೇ ಸಾಲಿನಲ್ಲಿ 2000 ನೋಟುಗಳ ಮುದ್ರಣವನ್ನು ಕೇಂದ್ರವು ಸ್ಥಗಿತಗೊಳಿಸಿದ್ದು, ನಿಗದಿತ ಗುರಿ ತಲುಪಿದ್ದು, ಅಗತ್ಯಕ್ಕೆ ತಕ್ಕಂತೆ ಇತರೆ ಮುಖಬೆಲೆಯ ನೋಟುಗಳು ಲಭ್ಯವಿವೆ.

ಕಳೆದ ಐದು ವರ್ಷಗಳಲ್ಲಿ, ಆರ್‌ಬಿಐ ಒಂದೇ ಒಂದು ಸಣ್ಣ ಮಾಹಿತಿ ಕೂಡ ಇಲ್ಲದೆ ವ್ಯವಸ್ಥೆಯಿಂದ 3 ಲಕ್ಷ ಕೋಟಿ ರೂಪಾಯಿ ಮೌಲ್ಯದ 2,000 ನೋಟುಗಳನ್ನು ಚಲಾವಣೆಯಿಂದ ಹೊರಹಾಕಿದೆ. ಚಲಾವಣೆಯಲ್ಲಿರುವ ಒಟ್ಟು ಕರೆನ್ಸಿಯ ಶೇಕಡಾವಾರು



ಪ್ರಮಾಣದಲ್ಲಿ, ಅದರ (2000ರೂ ಮುಖಬೆಲೆಯ ನೋಟು) ಪಾಲು FY17 ರಲ್ಲಿ ಶೇ.50.2% ರಿಂದ FY 23ರಲ್ಲಿ 10.8%ಕ್ಕೆ ಕಡಿಮೆಯಾಗಿದೆ. ಇದು ಇದೇ ರೀತಿ ಮುಂದುವರೆದಿದ್ದರೆ ಇನ್ನು ಕೆಲವೇ ತಿಂಗಳುಗಳಲ್ಲಿ 2000 ರೂ ಮುಖಬೆಲೆಯ ನೋಟುಗಳ ಬಳಕೆ ತಾನೇ ತಾನಾಗಿ ಶೂನ್ಯವಾಗಿರುತ್ತಿತ್ತು. ಆದರೆ ಆರ್‌ಬಿಐನ ಈ ಘೋಷಣೆ ಅಚ್ಚರಿ ಮೂಡಿಸಿದೆ.

**ಕ್ಲೀನ್ ನೋಟ್ ಪಾಲಿಸಿ ನಿಯಮದಂತೆ ಆರ್‌ಬಿಐ ನಿರ್ಧಾರ :** 2000 ರೂ ಮುಖಬೆಲೆಯ ನೋಟುಗಳಲ್ಲಿ ಹೆಚ್ಚಿನವು ಮಾರ್ಚ್ 2017ಕ್ಕಿಂತ ಮೊದಲು ಬಿಡುಗಡೆಯಾಗಿದೆ. ಇತರ ಮುಖಬೆಲೆಯ ನೋಟುಗಳು ಪ್ರಸ್ತುತ ದೇಶದ ಜನರ ಕರೆನ್ಸಿ ಅಗತ್ಯಗಳನ್ನು ಪೂರೈಸಲು ಸಾಕಾಗುತ್ತದೆ. ಈ ಕಾರಣಕ್ಕಾಗಿಯೇ 2000 ರೂಪಾಯಿ ಮುಖಬೆಲೆಯ ನೋಟುಗಳನ್ನು "ಕ್ಲೀನ್ ನೋಟ್ ಪಾಲಿಸಿ" ಪ್ರಕಾರ ಚಲಾವಣೆಯಿಂದ ಹಿಂಪಡೆಯಲಾಗುತ್ತಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟಪಡಿಸಿದೆ.

**ಹಾಗಾದರೆ ಏನಿದು ಕ್ಲೀನ್ ನೋಟ್ ನೀತಿ? :** ಗುಣಮಟ್ಟದ ನೋಟುಗಳನ್ನು ಚಲಾವಣೆಯಲ್ಲಿಡಲು RBI ಅನುಸರಿಸುವ ನೀತಿಯೇ ಕ್ಲೀನ್ ನೋಟ್ ಪಾಲಿಸಿ. ಸದ್ಯಕ್ಕೆ 2000 ರೂಪಾಯಿ ನೋಟಿನ ವಹಿವಾಟಿನ ವಿಚಾರದಲ್ಲಿ ಯಥಾಸ್ಥಿತಿ ಮುಂದುವರಿಯಲಿದೆ. ಜನರು ತಮ್ಮ ವಹಿವಾಟಿಗೆ 2000 ರೂಪಾಯಿ ನೋಟುಗಳನ್ನು ಬಳಸಬಹುದು. ಅಲ್ಲದೆ ಅವುಗಳನ್ನು ಪಾವತಿಯ ರೂಪದಲ್ಲಿ ಪಡೆಯಬಹುದು. ಇಲ್ಲದಿದ್ದರೆ, ನೋಟುಗಳನ್ನು ಸೆಪ್ಟೆಂಬರ್ 30, 2023 ರಂದು ಅಥವಾ ಮೊದಲು ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಾಗುತ್ತದೆ.

**2024ರ ಚುನಾವಣಾ ಅಕ್ರಮಕ್ಕೆ ಬ್ರೇಕ್ ಹಾಕಲು ಈ ನಿರ್ಧಾರವೇ? :** ಒಂದು ಮೂಲದ ಪ್ರಕಾರ 2024ರ ಸಾರ್ವತ್ರಿಕ ಚುನಾವಣೆಗೆ ರಾಜಕೀಯ ಪಕ್ಷಗಳು ಸಿದ್ಧತೆಗಳನ್ನು ಆರಂಭಿಸಿದ್ದು, ಹೆಚ್ಚಿನ ಮುಖಬೆಲೆಯ ನೋಟುಗಳ

ಸಂಗ್ರಹಣೆ ಮುಂದಾಗಿವೆ ಎಂದು ಹೇಳಲಾಗಿದೆ. ಅನುಮಾನಾಸ್ಪದವಾಗಿ ಹೆಚ್ಚಿನ ಮುಖಬೆಲೆಯ ನೋಟುಗಳ ಸಂಗ್ರಹಣೆ ಮತ್ತು ದುರುಪಯೋಗವನ್ನು ತಪ್ಪಿಸಲು ಆರ್‌ಬಿಐನ ಈ ನಿರ್ಧಾರ ಸಹಾಯ ಮಾಡುತ್ತದೆ ಎನ್ನಲಾಗಿದೆ.

ಈ ಬಗ್ಗೆ ಮಾತನಾಡಿರುವ ವಿತ್ತೀಯ ತಜ್ಞ, ಹಣಕಾಸು ವಲಯದ ರೇಟಿಂಗ್ ವಿಭಾಗದ ಮುಖ್ಯಸ್ಥ ಅನಿಲ್ ಗುಪ್ತಾ ಅವರು, 'ಸೆಪ್ಟೆಂಬರ್, 30ರ ನಂತರ 3.6 ಲಕ್ಷ ಕೋಟಿ ರೂಪಾಯಿ ಮೌಲ್ಯದ ರೂ 2,000 ರೂ ಮುಖಬೆಲೆಯ ನೋಟುಗಳ ಪ್ರಸ್ತುತ ಚಲಾವಣೆಯಲ್ಲಿಲ್ಲ.. ಹಾಲಿ ವಿದ್ಯಮಾನದಿಂದ ಬಹುಶಃ ಎರಡು ವಿಷಯಗಳು ಸಂಭವಿಸಬಹುದು.. ಒಂದು, ಕೇಂದ್ರ ಬ್ಯಾಂಕ್ (ಆರ್‌ಬಿಐ) ಕೊರತೆಯನ್ನು ಸರಿದೂಗಿಸಲು ಹೆಚ್ಚು ರೂ 100, ರೂ 200 ಮತ್ತು ರೂ 500 ನೋಟುಗಳನ್ನು ಮುದ್ರಿಸಬಹುದು. ಎರಡು, ನಾವು ಚಲಾವಣೆಯಲ್ಲಿರುವ ಒಟ್ಟು ಕರೆನ್ಸಿ (ಪ್ರಸ್ತುತ ಸುಮಾರು 34.8 ಲಕ್ಷ ಕೋಟಿ)ಯಲ್ಲಿ ಕಡಿತವನ್ನು ನೋಡಬಹುದು.

ಅಲ್ಲದೆ 2000 ರೂ ಮುಖಬೆಲೆಯ 3.6 ಲಕ್ಷ ಕೋಟಿ ರೂಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳುತ್ತಿರುವುದರಿಂದ ಅಲ್ಪಾವಧಿಗಾದರೂ ಬಡ್ಡಿದರಗಳಲ್ಲಿ ಇಳಿಕೆ ಕಾಣಬಹುದು. ಇದು ಮತ್ತೊಂದು ಉಪಯೋಗವಾಗಿದೆ ಎಂದು ಹೇಳಿದ್ದಾರೆ.

ಇದೇ ವಾದಕ್ಕೆ ಇಂಬು ನೀಡುವಂತೆ ಐಸಿಆರ್‌ಎ ರೇಟಿಂಗ್ಸ್‌ನ ಹಣಕಾಸು ವಲಯದ ರೇಟಿಂಗ್ ವಿಭಾಗದ ಹಿರಿಯ ಉಪ ಮುಖ್ಯಸ್ಥ ಕಾರ್ತಿಕ್ ಶ್ರೀನಿವಾಸನ್ ಅವರು ಮಾತನಾಡಿದ್ದು, 'ನೋಟು ಅಮಾನ್ಯೀಕರಣದ ಸಮಯದಲ್ಲಿ ಕಂಡುಬಂದಂತೆ, ಬ್ಯಾಂಕ್‌ಗಳ ಠೇವಣಿ ಸಂಗ್ರಹವು ಸಮೀಪದ ಅವಧಿಯಲ್ಲಿ ಸ್ವಲ್ಪಮಟ್ಟಿಗೆ ಸುಧಾರಿಸಬಹುದು ಎಂದು ನಾವು ನಿರೀಕ್ಷಿಸುತ್ತೇವೆ. ಇದು ಠೇವಣಿ ದರಗಳ ಹೆಚ್ಚಳದ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಅಲ್ಪಾವಧಿಯ ಬಡ್ಡಿದರಗಳಲ್ಲಿ ಮಿತಗೊಳಿಸುವಿಕೆಗೆ ಕಾರಣವಾಗಬಹುದು ಎಂದು ಹೇಳಿದ್ದಾರೆ.

**ಹೊಸ ಅವತಾರದಲ್ಲಿ 1000 ರೂ ಮುಖಬೆಲೆಯ ನೋಟು ಮತ್ತೆ ಚಲಾವಣೆಗೆ? :** ಪಿಂಕ್ ನೋಟುಗಳ (2000 ರೂ) ಯೋಜಿತ ಅವಸಾನವು ಭಾರತದ ಆದರ್ಶ ಕರೆನ್ಸಿ ಮಿಶ್ರಣದ ಬಗ್ಗೆ ಒಂದು ಸೂಕ್ತವಾದ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ ಮತ್ತು ರೂ 500 ದೇಶದ ಅತ್ಯುನ್ನತ ಮುಖಬೆಲೆಯಾಗಿ ಉಳಿಯುತ್ತದೆಯೇ? ಎಂಬ ಪ್ರಶ್ನೆಯನ್ನು ಹುಟ್ಟು ಹಾಕಿದೆ. 2016 ರವರೆಗೆ ಚಲಾವಣೆಯಲ್ಲಿದ್ದ ರೂ 500-ರೂ. 1,000 ನೋಟುಗಳಿಗೆ ಹೊಸ ರೂ 500-ರೂ 2000 ನೋಟುಗಳನ್ನು ಪರ್ಯಾಯವಾಗಿ ಚಾಲ್ತಿಗೆ ತರಲಾಗಿತ್ತು. ಹಳೆಯ 500 ರೂ ಮತ್ತು 1000 ಮುಖ ಬೆಲೆಯ ನೋಟುಗಳು ಅಂದು ಚಲಾವಣೆಯಲ್ಲಿದ್ದ ಒಟ್ಟು ಕರೆನ್ಸಿಯ ಶೇ.80% ಕ್ಕಿಂತ ಹೆಚ್ಚು ಪಾಲು ಹೊಂದಿತ್ತು. ಆದರೆ ಈಗಿರುವ ರೂ 500 ಮುಖಬೆಲೆಯ ನೋಟುಗಳು ಕೇವಲ ಶೇ.70% ಕ್ಕಿಂತ ಹೆಚ್ಚು ಪಾಲು ಹೊಂದಿದ್ದು, ಈಗ ಮತ್ತೆ ಆರ್‌ಬಿಐ ಹೊಸ ಅವತಾರದಲ್ಲಿ 1000 ರೂ ಮುಖಬೆಲೆಯ ನೋಟುಗಳನ್ನು ಚಲಾವಣೆಗೆ ತರಲಿದೆಯೇ ಎಂಬ ಪ್ರಶ್ನೆ ಮೂಡುತ್ತಿದೆ.

2018ರಿಂದಲೇ ಆರ್‌ಬಿಐ ಈ ಬಗ್ಗೆ ಗಂಭೀರ ಚಿಂತನೆ ಮಾಡಿರುವ ಸಾಧ್ಯತೆ ಇದೆ. ಇದೇ ಕಾರಣಕ್ಕೆ 2018ರಿಂದಲೇ ಆರ್‌ಬಿಐ 2000 ರೂ ಮುಖಬೆಲೆಯ ನೋಟುಗಳ ಮುದ್ರಣ ಸ್ಥಗಿತ ಮಾಡಿದ್ದು ಮಾತ್ರವಲ್ಲದೇ ಕ್ರಮೇಣ ಎಟಿಎಂಗಳಲ್ಲೂ ಪಿಂಕ್ ನೋಟುಗಳು ಸಿಗದಂತೆ ಮಾಡಿತ್ತು. ವಿತ್ತೀಯ ವರ್ಷ 2018ರಲ್ಲಿ ಕಡಿಮೆ ಅಥವಾ ಯಾವುದೇ ಹೊಸ ಪಿಂಕ್ ನೋಟುಗಳನ್ನು ಆರ್‌ಬಿಐ ಮುದ್ರಿಸಿಲ್ಲ, ಏಕೆಂದರೆ ಒಟ್ಟು ಕರೆನ್ಸಿ ಮಿಶ್ರಣವು ಶೇ3.3%ರಲ್ಲಿ ಬದಲಾಗದೆ ಹಾಗೆಯೇ ಉಳಿದಿದೆ. ಅತ್ಯಧಿಕ ಮುಖಬೆಲೆಯ ನೋಟುಗಳ ಇಂತಹ ಸಮತಟ್ಟಾದ ಬೆಳವಣಿಗೆ ದರವು ಕನಿಷ್ಠ 20 ವರ್ಷಗಳಲ್ಲಿ ಇದೇ ಮೊದಲನೆಯದು! 2016 ರವರೆಗೆ ಅತ್ಯಧಿಕ ಮುಖಬೆಲೆಯಾಗಿದ್ದ ರೂ. 1,000 ನೋಟು, 2001 ರಿಂದ ಮರು-ಪರಿಚಯಿಸಿದ ನಂತರ ಪರಿಮಾಣ ಅಥವಾ ಮೌಲ್ಯದಲ್ಲಿ ಎಂದಿಗೂ ಕಳಪೆ ಬೆಳವಣಿಗೆ ದಾಖಲಿಸಿಲ್ಲ.

ಮೌಲ್ಯದ ಪ್ರಕಾರ, ಚಲಾವಣೆಯಲ್ಲಿರುವ ಒಟ್ಟು ಕರೆನ್ಸಿಯಲ್ಲಿ ರೂ. 2,000 ನೋಟುಗಳ ಪಾಲು FY17 (ವಿತ್ತೀಯ ವರ್ಷ)ರಲ್ಲಿ ಶೇ.50.2% ರಿಂದ FY18 ರಲ್ಲಿ 37.3%ಕ್ಕೆ ಇಳಿದಿದೆ. ತರುವಾಯ, FY18 ರಲ್ಲಿ, ಇದು FY19 ರಲ್ಲಿ 31.2%, FY20 ರಲ್ಲಿ 22.6%, FY21 ರಲ್ಲಿ 17.3% ಮತ್ತು FY22 ರಲ್ಲಿ 13.8%ಕ್ಕೆ ಇಳಿಯಿತು. FY23 ಡೇಟಾವನ್ನು ಮುಂದಿನ ವಾರ ಪ್ರಕಟಿಸಲಾಗುವುದು, ಆದರೆ RBI ಸೂಚಿಸಿದಂತೆ, ಅದರ ಪಾಲು ಈಗ 10.8% ರಷ್ಟಿದೆ.

FY17 ರಲ್ಲಿ, 6.6 ಲಕ್ಷ ಕೋಟಿ ಮೌಲ್ಯದ ಪಿಂಕ್ ನೋಟುಗಳಿದ್ದವು. FY18 ರಲ್ಲಿ ಅದು 6.7 ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿತು.. ಆ ಬಳಿಕ ಈ ಪಿಂಕ್ ನೋಟುಗಳ ಕುಸಿತವು ಪ್ರಾರಂಭವಾಯಿತು. ಇದರ ಮೌಲ್ಯವು FY19 ರಲ್ಲಿ 6.5 ಲಕ್ಷ ಕೋಟಿಗೆ ಕ್ರಮೇಣ ಕಡಿಮೆಯಾಯಿತು, FY20 ರಲ್ಲಿ 5.5 ಲಕ್ಷ ಕೋಟಿ ರೂ., FY21 ರಲ್ಲಿ 4.9 ಲಕ್ಷ ಕೋಟಿ, FY22 ರಲ್ಲಿ 4.3 ಲಕ್ಷ ಕೋಟಿ ಮತ್ತು ಅಂತಿಮವಾಗಿ FY23 ರಲ್ಲಿ 3.62 ಲಕ್ಷ ಕೋಟಿ ರೂ.ಗೆ ಕುಸಿಯಿತು. ಇದಕ್ಕೆ ತದ್ವಿರುದ್ಧ ಎಂಬಂತೆ 500 ರೂ ಮುಖಬೆಲೆಯ ನೋಟುಗಳು ತಮ್ಮ ಆರೋಹಣ ಪ್ರಾರಂಭಿಸಿದವು. FY17 ರಲ್ಲಿ ಇವುಗಳ ಪ್ರಮಾಣ ಶೇ.22.5% ರಿಂದ ಕ್ರಮೇಣ ಏರಿಕೆಯಾಗ ತೊಡಗಿತು. ಇದು FY22 ರಲ್ಲಿ 73.3% ಕ್ಕೆ ಏರಿಕೆಯಾಗುವ ಮೂಲಕ ಮೂರು ಪಟ್ಟು ಹೆಚ್ಚಾಗಿದೆ, ಇದು ರೂ 500 ನಮ್ಮ ಕರೆನ್ಸಿ ಮಿಶ್ರಣದ ಮೂಲಾಧಾರವಾಗಿರಬಹುದು ಎಂದು ಸೂಚಿಸುತ್ತದೆ. ಮೌಲ್ಯದ ಪ್ರಕಾರ, ಇದು FY17 ರಲ್ಲಿ ಸುಮಾರು 500 ರೂ. ಮುಖಬೆಲೆಯ ನೋಟುಗಳು 3 ಲಕ್ಷ ಕೋಟಿಯಿಂದ FY22 ರಲ್ಲಿ 22.8 ಲಕ್ಷ ಕೋಟಿಗೆ ಏರಿಕೆಯಾಗಿದೆ.

# ಒಂದು ಸಾವಿರ ರೂ ಮುಖಬೆಲೆಯ ನೋಟಿನ ಮರು ಪರಿಚಯ ಇಲ್ಲ, ಪೋಸ್ಟ್ ಆಫೀಸ್‌ನಲ್ಲಿ ನೋಟು ಬದಲಾವಣೆ ಇಲ್ಲ : ಆರ್‌ಬಿಐ ಸ್ಪಷ್ಟನೆ

**2000 ರೂ ಮುಖಬೆಲೆಯ ನೋಟುಗಳ ವಿನಿಮಯ ಸೌಲಭ್ಯವು ಬ್ಯಾಂಕ್ ಶಾಖೆಗಳಲ್ಲಿ ಮಾತ್ರ ಲಭ್ಯವಿರುತ್ತದೆ ಮತ್ತು ಅಂಚೆ ಕಚೇರಿಗಳ ಮೂಲಕ ಮಾಡಲಾಗುವುದಿಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ. "ಬ್ಯಾಂಕ್‌ಗಳಲ್ಲಿ ಮಾತ್ರ ನೋಟು ವಿನಿಮಯ ಸೌಲಭ್ಯ ಲಭ್ಯವಿದೆ. 2000 ರೂಪಾಯಿ ನೋಟು ಕಾನೂನುಬದ್ಧ ಟೆಂಡರ್ ಆಗಿರುವುದರಿಂದ ಗ್ರಾಹಕರು ಠೇವಣಿ ಮಾಡಬಹುದು. ಸಾರ್ವಜನಿಕರು ಇಂದಿನಿಂದ ತಮ್ಮ 2000 ರೂಪಾಯಿಗಳನ್ನು ವಿನಿಮಯ ಮಾಡಿಕೊಳ್ಳಲು ಅಥವಾ ಠೇವಣಿ ಮಾಡಲು ಪ್ರಾರಂಭಿಸಬಹುದು.**




**ಮುಂಬೈ :** ದೇಶದಲ್ಲಿ 2 ಸಾವಿರ ಮುಖಬೆಲೆಯ ಗರಿಷ್ಠ ನೋಟು ಚಲಾವಣೆ ಹಿಂಪಡೆದ ಹಿನ್ನೆಲೆಯಲ್ಲಿ ಮತ್ತೆ 1 ಸಾವಿರ ರೂ ಮುಖಬೆಲೆಯ ನೋಟುಗಳನ್ನು ಪರಿಚಯಿಸುವ ವಿಚಾರದ ಕುರಿತು ಇದೇ ಮೊದಲ ಬಾರಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಮಹತ್ವದ ಹೇಳಿಕೆ ನೀಡಿದೆ.

2 ಸಾವಿರ ಮುಖಬೆಲೆಯ ಗರಿಷ್ಠ ನೋಟು ಚಲಾವಣೆ ಹಿಂಪಡೆದ ಹಿನ್ನೆಲೆಯಲ್ಲಿ ಇಂದಿನಿಂದ ಬ್ಯಾಂಕುಗಳಲ್ಲಿ ನೋಟುಗಳ ಬದಲಾವಣೆಗೆ ಆರಂಭವಾಗಿದೆ. ಈ ಹಿನ್ನಲೆಯಲ್ಲಿ ಆರ್‌ಬಿಐ ಮುಖ್ಯಸ್ಥ ಶಕ್ತಿಕಾಂತ್ ದಾಸ್ ಕೆಲ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. '2000 ರೂಪಾಯಿ ಬೆಲೆಯ ನೋಟು ಹಿಂಪಡೆದ ನಿರ್ಧಾರದಿಂದ ದೇಶದ ಆರ್ಥಿಕತೆ ಮೇಲೆ "ಅತ್ಯಂತ ಕನಿಷ್ಠ ಪರಿಣಾಮ" ಬೀರುತ್ತದೆ. ಭಾರತೀಯ ಕರೆನ್ಸಿ ನಿರ್ವಹಣಾ ವ್ಯವಸ್ಥೆ ತುಂಬಾ ದೃಢವಾಗಿದೆ. ಡಾಲರ್ ವಿರುದ್ಧ ನಮ್ಮ ವಿನಿಮಯ ದರ ಬಲಿಷ್ಠವಾಗಿದೆ. ಚಲಾವಣೆಯಲ್ಲಿರುವ ನೋಟುಗಳಲ್ಲಿ ಕೇವಲ ಶೇ. 10 ಕ್ಕಿಂತ ಹೆಚ್ಚು ಮತ್ತು ವಹಿವಾಟುಗಳಲ್ಲಿ ಅವುಗಳನ್ನು ವ್ಯಾಪಕವಾಗಿ ಬಳಸಲಾಗಿಲ್ಲ ಎಂದು ಹೇಳಿದರು.

**ಸಾವಿರ ರೂ ಮುಖ ಬೆಲೆಯ ನೋಟಿನ ಮರು ಪರಿಚಯ ಇಲ್ಲ :** ಅಂತೆಯೇ ಹೆಚ್ಚಿನ ಮೌಲ್ಯದ ನೋಟು ಚಲಾವಣೆ ಹಿಂತೆಗೆದುಕೊಳ್ಳುವ ನಿರ್ಧಾರ ಆರ್‌ಬಿಐ ನೀತಿಯ ಭಾಗವಾಗಿದ್ದು, 2016ರ ನೋಟು ಅಮಾನ್ಯೀಕರಣದ ನಂತರ 1 ಸಾವಿರ ಬೆಲೆಯ ನೋಟು ಮರು ಪರಿಚಯ ಮಾಡುವ ಉದ್ದೇಶ ಇಲ್ಲ. ಸಾಮಾನ್ಯ ನಗದು ಠೇವಣಿ ನಿಯಮ ಅನುಸರಿಸಬೇಕು ಮತ್ತು ಠೇವಣಿ ನಿರ್ಣಯಿಸುವುದು ಇತರ ಏಜೆನ್ಸಿಗಳಿಗೆ ಬಿಟ್ಟದ್ದು ಎಂದು ಹೇಳಿದ ಅವರು ಬೇಡಿಕೆಯ ಟ್ರೆಂಡ್‌ಗಳ ಆಧಾರದ ಮೇಲೆ ಹೆಚ್ಚಿನ ಬ್ಯಾಂಕ್‌ಗಳು ತಮ್ಮ ಎಟಿಎಂಗಳನ್ನು ಮಾರ್ಪಡಿಸಿವೆ ಮತ್ತು 2000 ರೂಪಾಯಿಗಳ ನೋಟುಗಳನ್ನು ಹೆಚ್ಚು ನೀಡುತ್ತಿಲ್ಲ ಹೀಗಾಗಿ ಹಿಂಪಡೆಯಲಾಗಿದೆ ಎಂದರು.

**ನೋಟುಗಳ ಸಾಕಷ್ಟು ದಾಸ್ತಾನಿದೆ :** ಬ್ಯಾಂಕ್‌ಗಳು ಮತ್ತು ಆರ್‌ಬಿಐನಲ್ಲಿ ಲಭ್ಯವಿರುವ ಇತರ ಮುಖಬೆಲೆಯ ನೋಟುಗಳ "ಸಾಕಷ್ಟು ಹೆಚ್ಚು" ದಾಸ್ತಾನು ಇದೆ. 2000 ರೂ. ನೋಟುಗಳ ಸಂಗ್ರಹವನ್ನು ಮರುಪೂರ್ಣ ಮಾಡಲು ಬಳಸಬಹುದು. ಇಲ್ಲಿಯವರೆಗೆ, ವ್ಯವಸ್ಥೆಯಲ್ಲಿನ ನಗದು ವ್ಯವಹಾರಕ್ಕೆ ಸಂಬಂಧಿಸಿದಂತೆ ಆರ್‌ಬಿಐ ವ್ಯವಸ್ಥೆಯಲ್ಲಿನ ಲಿಕ್ವಿಡಿಟಿಯನ್ನು ಮೇಲ್ವಿಚಾರಣೆ ಮಾಡುತ್ತದೆ ಎಂದು ಅವರು ಮಾಹಿತಿ ಹಂಚಿಕೊಂಡಿದ್ದಾರೆ.

**ಅಂಚೆ ಕಚೇರಿಗಳ ಮೂಲಕ ನೋಟು ಬದಲಾವಣೆ ಇಲ್ಲ :** 2000 ರೂ ಮುಖಬೆಲೆಯ ನೋಟುಗಳ ವಿನಿಮಯ ಸೌಲಭ್ಯವು ಬ್ಯಾಂಕ್ ಶಾಖೆಗಳಲ್ಲಿ ಮಾತ್ರ ಲಭ್ಯವಿರುತ್ತದೆ ಮತ್ತು ಅಂಚೆ ಕಚೇರಿಗಳ ಮೂಲಕ ಮಾಡಲಾಗುವುದಿಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ. "ಬ್ಯಾಂಕ್‌ಗಳಲ್ಲಿ ಮಾತ್ರ ನೋಟು ವಿನಿಮಯ ಸೌಲಭ್ಯ ಲಭ್ಯವಿದೆ. 2000 ರೂಪಾಯಿ ನೋಟು ಕಾನೂನುಬದ್ಧ ಟೆಂಡರ್ ಆಗಿರುವುದರಿಂದ ಗ್ರಾಹಕರು ಠೇವಣಿ ಮಾಡಬಹುದು. ಸಾರ್ವಜನಿಕರು ಇಂದಿನಿಂದ ತಮ್ಮ 2000 ರೂಪಾಯಿಗಳನ್ನು ವಿನಿಮಯ ಮಾಡಿಕೊಳ್ಳಲು ಅಥವಾ ಠೇವಣಿ ಮಾಡಲು ಪ್ರಾರಂಭಿಸಬಹುದು. ಯಾವುದೇ ಬ್ಯಾಂಕ್‌ನಲ್ಲಿ ರೂ. 2000 ಬ್ಯಾಂಕ್ ನೋಟುಗಳನ್ನು ಇತರ ಮುಖಬೆಲೆಯ ನೋಟುಗಳಾಗಿ ವಿನಿಮಯ ಮಾಡಿಕೊಳ್ಳಬಹುದು. ಎಂದು ಆರ್‌ಬಿಐ ಹೇಳಿದೆ.

ಸೆಪ್ಟೆಂಬರ್ 30 ರಂದು 2000 ರೂಪಾಯಿ ನೋಟುಗಳ ವಿನಿಮಯದ ಅಂತಿಮ ದಿನಾಂಕದ ಕುರಿತು ಮಾತನಾಡಿದ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, ಜನರು ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಲು ದಿನಾಂಕವನ್ನು ನಿರ್ಧರಿಸಲಾಗಿದೆ ಎಂದು ಹೇಳಿದರು.

# ಕಡಿಮೆ ಪ್ರಮಾಣದ ಆರ್ಥಿಕ ಬೆಳವಣಿಗೆ ಇಂದಿನ ವಾಸ್ತವ

ಜಗತ್ತಿನ ಹಾಗೂ ಭಾರತದ ಆರ್ಥಿಕ ಬೆಳವಣಿಗೆ ಮುನ್ನೋಟದ ಕುರಿತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಈಚೆಗೆ ಪ್ರಕಟಿಸಿರುವ ವರದಿಯು ಈ ಹಿಂದಿನ ಕೆಲವು ವರದಿಗಳಿಗೆ ಹೋಲಿಸಿದರೆ ಅಷ್ಟೇನೂ ಆಶಾದಾಯಕವಲ್ಲದ ಚಿತ್ರಣವೊಂದನ್ನು ನೀಡಿದೆ. ಐಎಂಎಫ್ ಅಂದಾಜಿನ ಪ್ರಕಾರ, ವಿಶ್ವದ ಆರ್ಥಿಕ ಬೆಳವಣಿಗೆ ದರ 2023ರಲ್ಲಿ ಶೇಕಡ 2.8ಕ್ಕೆ ಕುಸಿಯುವ ಸಾಧ್ಯತೆ ಇದೆ. 2022ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ದರ ಶೇ.3.4ರಷ್ಟು ಇತ್ತು. ಅರ್ಥ ವ್ಯವಸ್ಥೆಯಲ್ಲಿನ ಮಂದಗತಿಯು ಮುಂದುವರಿದ ದೇಶಗಳ ಅರ್ಥ ವ್ಯವಸ್ಥೆ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡಲಿದೆ. ಈ ದೇಶಗಳ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಈ ವರ್ಷದಲ್ಲಿ ಶೇ.1.3ಕ್ಕೆ ಇಳಿಕೆ ಕಾಣಬಹುದು. ಇದು 2022ರಲ್ಲಿ ಶೇ.2.7ರಷ್ಟು ಇತ್ತು.

ಬ್ರಿಟನ್ ಮತ್ತು ಐರೋಪ್ಯ ವಲಯದ ಅರ್ಥ ವ್ಯವಸ್ಥೆಗಳು ಹೆಚ್ಚಿನ ಪರಿಣಾಮ ಎದುರಿಸಲಿವೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅರ್ಥ ವ್ಯವಸ್ಥೆಗಳು ತುಸು ಉತ್ತಮ ಸ್ಥಿತಿಯಲ್ಲಿ ಇರಲಿವೆ. ಇಲ್ಲಿ ಶೇ 3.9ರಷ್ಟು ಆರ್ಥಿಕ ಬೆಳವಣಿಗೆ ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಈ ಪ್ರಮಾಣವು ಕಳೆದ ವರ್ಷದಲ್ಲಿ ಆಗಿದ್ದ ಬೆಳವಣಿಗೆಗೆ ಹೋಲಿಸಿದರೆ ಅಲ್ಪಮಟ್ಟಿಗೆ ಕಡಿಮೆ. ಅಭಿವೃದ್ಧಿ ಹೊಂದಿರುವ ದೇಶಗಳ ಆರ್ಥಿಕ ಬೆಳವಣಿಗೆ ದರ, ಅಂದಾಜು ಮಾಡಿರುವುದಕ್ಕಿಂತ ಕೆಟ್ಟದಾಗಿಯೂ ಇರುವ ಸಾಧ್ಯತೆ ಇದೆ ಎಂದು ಐಎಂಎಫ್ ವರದಿ ಹೇಳಿದೆ. ಅಂದರೆ, ವರದಿಯಲ್ಲಿನ ಕೆಲವು ಅಂದಾಜುಗಳು ತಪ್ಪಾಗುವ ಸಾಧ್ಯತೆ ಇರುತ್ತದೆ.

ಉದಾಹರಣೆಗೆ, ಕೆಲವು ಪ್ರಮುಖ ಬ್ಯಾಂಕ್‌ಗಳು ದಿವಾಳಿ ಎದ್ದ ನಂತರದಲ್ಲಿ ಹಣಕಾಸು ವ್ಯವಸ್ಥೆಯಲ್ಲಿ ಉಂಟಾಗಿದ್ದ ಸಮಸ್ಯೆಗಳು ಒಂದಿಷ್ಟು ಬಗೆಹರಿದಿವೆ ಎಂದು ಭಾವಿಸಲಾಗಿದೆಯಾದರೂ, ಮುಂದಿನ ದಿನಗಳಲ್ಲಿ ಈ ವಲಯದಲ್ಲಿ ಇನ್ನಷ್ಟು ಬಿಕ್ಕಟ್ಟುಗಳು ಎದುರಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಜಗತ್ತಿನ ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಕೈಗೊಂಡ ಕ್ರಮದ ಪರಿಣಾಮವಾಗಿ ಹಣದುಬ್ಬರ ದರವು ಮುಂದಿನ ದಿನಗಳಲ್ಲಿ ಕಡಿಮೆ ಆಗುವ ನಿರೀಕ್ಷೆ ಇದೆಯಾದರೂ, ಹಣದುಬ್ಬರದ ಕುರಿತು ಒಂದಿಷ್ಟು ಕಳವಳ ಇದ್ದೇ ಇದೆ.

ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮಗಳು ಹಾಗೂ ಅಮೆರಿಕ – ಚೀನಾ ನಡುವಿನ ವಾಣಿಜ್ಯ ಸಮರದ ಪರಿಣಾಮಗಳು ಇನ್ನೂ ಕೆಲ ಕಾಲದವರೆಗೆ ಆರ್ಥಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತ ಇರಲಿವೆ. 2023–24ರಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇ.6.1ರಷ್ಟು ಬೆಳವಣಿಗೆ ಕಾಣಲಿದೆ ಎಂದು ಈ ಮೊದಲು ಅಂದಾಜು ಮಾಡಿದ್ದ ಐಎಂಎಫ್ ಈಗ ಅದನ್ನು ತಗ್ಗಿಸಿದೆ. ದೇಶದ ಅರ್ಥ ವ್ಯವಸ್ಥೆಯು ಶೇ.5.9ರಷ್ಟು ಮಾತ್ರ ಬೆಳೆಯಲಿದೆ ಎಂದು ಅದು ಹೇಳಿದೆ. ಬೇಡಿಕೆ ಕಡಿಮೆ ಆಗಿರುವುದು ಹಾಗೂ ಇತರ ಕೆಲವು ನಕಾರಾತ್ಮಕ ದತ್ತಾಂಶಗಳನ್ನು




ಆಧರಿಸಿ, ಬೆಳವಣಿಗೆಯ ಅಂದಾಜನ್ನು ತಗ್ಗಿಸಲಾಗಿದೆ.

ಐಎಂಎಫ್ ಪ್ರಕಾರ, ಈಗ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಪ್ರಮುಖ ಚಾಲಕ ಶಕ್ತಿಗಳು ಎಂದರೆ ಹೂಡಿಕೆ ಮತ್ತು ವ್ಯಾಪಾರ. ಈಗಿನ ಪರಿಸ್ಥಿತಿಯಲ್ಲಿ ಹೂಡಿಕೆಯು ಸರ್ಕಾರಗಳ ಕಡೆಯಿಂದ ಬರಬೇಕಿದೆ. ಸರ್ಕಾರಗಳು ಬಂಡವಾಳ ಹೂಡಿಕೆ ವಿಚಾರವಾಗಿ ಕೆಲವು ಪ್ರಮುಖ ಯೋಜನೆಗಳನ್ನು ಸಿದ್ಧಪಡಿಸಿವೆಯಾದರೂ, ಅವು ಅನುಷ್ಠಾನಕ್ಕೆ ಬರುತ್ತವೆಯೇ ಎಂಬುದರಲ್ಲಿ ಅನುಮಾನ ಇದೆ. ವ್ಯಾಪಾರ ವಹಿವಾಟಿನ ವಿಚಾರಕ್ಕೆ ಬರುವುದಾದರೆ, ಸೇವಾ ವಲಯದಲ್ಲಿನ ರಫ್ತು ಪ್ರಮಾಣ ಚೆನ್ನಾಗಿ ಇದೆ. ಆದರೆ ಸರಕುಗಳ ರಫ್ತು ಅಷ್ಟೇನೂ ದೊಡ್ಡ ಪ್ರಮಾಣದಲ್ಲಿ ಆಗಿಲ್ಲ.

ಪ್ರಸಕ್ತ ವರ್ಷದಲ್ಲಿ ಜಾಗತಿಕ ಮಟ್ಟದಲ್ಲಿ ವ್ಯಾಪಾರ ವಹಿವಾಟು ಕಡಿಮೆ ಆಗುವ ಸಾಧ್ಯತೆ ಇದೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆ ಕಡಿಮೆ ಇರುವ ಕಾಲಘಟ್ಟದಲ್ಲಿ ಭಾರತವು ತಾನು ಮಾತ್ರ ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಸಾಧನೆ ಮಾಡಲು ಸಾಧ್ಯ ಎಂದು ನಿರೀಕ್ಷಿಸಲಾಗದು. ಐಎಂಎಫ್, ಭಾರತದ ಆರ್ಥಿಕ ಬೆಳವಣಿಗೆ ವಿಚಾರವಾಗಿ ಮಾಡಿರುವ ಅಂದಾಜು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾಡಿರುವ ಶೇ 6.5ರ ಅಂದಾಜಿಗಿಂತ ಬಹಳ ಕಡಿಮೆ ಇದೆ ಎಂಬುದು ಗಮನಾರ್ಹ. ಆರ್‌ಬಿಐ ಮತ್ತು ಐಎಂಎಫ್ ಮಾತ್ರವೇ ಅಲ್ಲದೆ, ಇತರ ಕೆಲವು ಸಂಸ್ಥೆಗಳು ಕೂಡ ತಮ್ಮದೇ ಆದ ಮುನ್ನೋಟವನ್ನು ನೀಡಿವೆ. ಕೆಲವು ಅಂದಾಜುಗಳು ಹೆಚ್ಚು ಬೆಳವಣಿಗೆಯನ್ನು, ಇನ್ನು ಕೆಲವು ಅಂದಾಜುಗಳು ಕಡಿಮೆ ಬೆಳವಣಿಗೆಯನ್ನು ಹೇಳುತ್ತಿವೆ. ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಪ್ರಕಾರ, ಬೆಳವಣಿಗೆ ದರ ಶೇ.6.4ರಷ್ಟು ಇರಲಿದೆ. ಕ್ರಿಸಿಲ್ ಸಂಸ್ಥೆಯು ಶೇ.6ರ ಬೆಳವಣಿಗೆ ದರದ ನಿರೀಕ್ಷೆ ಹೊಂದಿದೆ. ಅವೇನೇ ಇದ್ದರೂ, ಈಗಿನ ಜಾಗತಿಕ ವಿದ್ಯಮಾನಗಳನ್ನು ಅವಲೋಕಿಸಿದರೆ, ಆರ್ಥಿಕ ಬೆಳವಣಿಗೆ ದರ ದೊಡ್ಡ ಮಟ್ಟದಲ್ಲಿ ಇರಲಿದೆ ಎಂದು ನಿರೀಕ್ಷೆ ಮಾಡುವುದು ಅವಾಸ್ತವಿಕ ಆಗಬಹುದು.

**12.05.2023 ರಂದು ಭಾರತೀಯ ರಿಜರ್ವ್ ಬ್ಯಾಂಕಿನ ಗವರ್ನರ್‌ರವರಾದ ಶ್ರೀ ಶಕ್ತಿಕಾಂತ ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದ ರಾಷ್ಟ್ರೀಯ ಹಾಗೂ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಪ್ರತಿನಿಧಿಗಳೊಂದಿಗೆ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.**

प्रेस प्रकाशनी **PRESS RELEASE**

भारतीय रिज़र्व बैंक
**RESERVE BANK OF INDIA**

वेबसाइट : www.rbi.org.in/hindi
Website : www.rbi.org.in
ई-मेल/email : helpdoc@rbi.org.in

Azadi Ka Amrit Mahotsav

**संचार विभाग,** केंद्रीय कार्यालय, शहीद भगत सिंह मार्ग, फोर्ट, मुंबई-400001
**Department of Communication**, Central Office, Shahid Bhagat Singh Marg, Fort, Mumbai-400001 फोन/Phone: 022- 22660502

May 12, 2023

## Governor, Reserve Bank of India meets heads of Federations of UCBs of States and CEOs of Primary (Urban) Co-operative Banks (UCBs)

The Governor, Reserve Bank of India (RBI) today held a meeting with the National Federation of Urban Co-operative Banks and Credit Societies Limited (NAFCUB), select Federations of UCBs from various States and the CEOs of select UCBs. The meeting was also attended by Shri M Rajeshwar Rao, Deputy Governor, Executive Directors Shri S C Murmu, Shri Saurav Sinha, Shri Jayant Kumar Dash, Shri Neeraj Nigam along with a few senior officials of the RBI.

The Governor, in his introductory remarks acknowledged the important role played by UCBs in furthering financial inclusion and supporting economic growth by providing banking services at the grassroot level. He further stated that RBI is committed to have a strong, robust and resilient UCB sector and for that there is a need of all the stakeholders to work together in the spirit of cooperation. He advised UCBs and their Federations to strengthen governance and risk management, adopt appropriate business strategies and explore suitable technology solutions to enable them to sustain and grow their business and serve their customers, keeping in mind the interest of the depositors.

The participants shared their inputs and suggestions regarding regulatory and supervisory matters applicable to urban co-operative banks. It was decided that the Standing Advisory Committee (SAC) meetings will henceforth be held once in six months instead of once in a year. It was also decided that RBI will nominate a senior officer who will be the single point of contact for all issues related to UCBs and a formal interaction with the designated senior officer would be held quarterly.

**(Yogesh Dayal)**
Chief General Manager

**Press Release: 2023-2024/225**

## ನೋಟಿನ ಬದಿಯಲ್ಲಿ ಈ ನಾಲ್ಕು 'ಗೆರೆ' ಯಾಕಿರುತ್ತೆ ಗೊತ್ತಾ? ಆಸಕ್ತಿಕರ ಮಾಹಿತಿ ಇಲ್ಲಿದೆ!




ನಮ್ಮ ಜೀವನದಲ್ಲಿ ಹಣವು ಪ್ರಮುಖ ಪಾತ್ರ ವಹಿಸುತ್ತದೆ. ಅದು ಏನು ಬೇಕಾದರೂ ಮಾಡುತ್ತದೆ. ಜಗತ್ತಿನಲ್ಲಿ ಹಣದ ಅಗತ್ಯವಿಲ್ಲದವರು ಯಾರೂ ಇಲ್ಲ. ಎಲ್ಲರೂ ಹಣಕ್ಕಾಗಿ ಶ್ರಮಿಸುತ್ತಾರೆ. ಜೀವನದಲ್ಲಿ ಮುನ್ನಡೆಯಲು ಹಣ ಬಹಳ ಮುಖ್ಯ.

ಆದ್ರೆ, ಭಾರತೀಯ ಕರೆನ್ಸಿ ನೋಟುಗಳಲ್ಲಿ ಹಲವು ರೀತಿಯ ಮಾಹಿತಿಗಳಿವೆ. ಆರ್‌ಬಿಐ ಗವರ್ನರ್ ಸಹಿಯಿಂದ ವಿವಿಧ ರೀತಿಯ ಕೋಡ್‌ಗಳು ಮತ್ತು ಭಾಷೆಗಳವರೆಗೆ ಹಲವು ರೀತಿಯ ಮಾಹಿತಿಗಳಿವೆ. ಆದರೆ ನೋಟುಗಳಲ್ಲಿರುವ ಮಾಹಿತಿ ಯಾರಿಗಾದರೂ ತಿಳಿದಿದೆಯೇ..? ಟಿಪ್ಪಣಿಗಳು ನಾಲ್ಕು ಗೆರೆಗಳನ್ನ ಹೊಂದಿರುತ್ತವೆ. ಅದನ್ನ ಎಂದಾದರೂ ಗಮನಿಸಿದ್ದೀರಾ? ಆ ಸಾಲುಗಳು ಏಕೆ ಅಸ್ತಿತ್ವದಲ್ಲಿವೆ ಎಂದು ನೀವು ಎಂದಾದರೂ ಯೋಚಿಸಿದ್ದೀರಾ? ಆ ಸಾಲುಗಳು ಏಕೆ ಅಸ್ತಿತ್ವದಲ್ಲಿವೆ ಎಂದು ಕಂಡುಹಿಡಿಯೋಣ.

ಭಾರತೀಯ ಕರೆನ್ಸಿಯ ಮೇಲಿನ ನಾಲ್ಕು ಸಾಲುಗಳನ್ನ ಬ್ಲೀಡ್ ಮಾರ್ಕ್ ಎಂದು ಕರೆಯಲಾಗುತ್ತದೆ. ದೃಷ್ಟಿ ವಿಕಲಚೇತನರಿಗಾಗಿ ನೋಟುಗಳಲ್ಲಿ ಇವುಗಳನ್ನ ವಿಶೇಷವಾಗಿ ಮುದ್ರಿಸಲಾಗುತ್ತದೆ.

ಯಾಕಂದ್ರೆ, ಈ ಸಾಲನ್ನ ಮುಟ್ಟಿದರೆ ಅದು ಎಷ್ಟರ ನೋಟು ಎಂದು ಹೇಳಬಹುದು. ಅದ್ರಂತೆ, 100, 200, 500, 2000 ನೋಟುಗಳು ವಿವಿಧ ರೀತಿಯ ಗೆರೆಗಳನ್ನ ಹೊಂದಿವೆ. ನೂರು ರೂಪಾಯಿ ನೋಟಿನ ಎರಡೂ ಬದಿಯಲ್ಲಿ ನಾಲ್ಕು ಗೆರೆಗಳಿವೆ. 200 ನೋಟು ಕೂಡ ಹಾಗೆಯೇ ಇರುತ್ತದೆ. ಆದ್ರೆ, ಅದಕ್ಕೆ ಎರಡು ಸೊನ್ನೆಗಳೂ ಸೇರಿಕೊಂಡಿವೆ. ಇನ್ನು 500 ನೋಟು ಐದು ಗೆರೆಗಳನ್ನ ಹೊಂದಿದ್ದು, 2000 ನೋಟು 7 ಗೆರೆಗಳನ್ನ ಹೊಂದಿದೆ. ಈ ಸಾಲುಗಳ ಸಹಾಯದಿಂದ ನೋಟಿನ ಮೌಲ್ಯವನ್ನ ಅರ್ಥಮಾಡಿಕೊಳ್ಳಬಹುದು ಎಂದು ಬ್ಯಾಂಕ್ ಅಧಿಕಾರಿಗಳು ಮಾಹಿತಿ ನೀಡಿದರು.

## ರೂ. 1.57 ಲಕ್ಷ ದಾಟಿದ ಜಿಎಸ್‌ಟಿ ಆದಾಯ, ತೆರಿಗೆ ಸಂಗ್ರಹದಲ್ಲಿ ಕರ್ನಾಟಕ ಮತ್ತೆ ನಂ.2

**ಹೊಸದಿಲ್ಲಿ :** ಸರಕು ಮತ್ತು ಸೇವಾ ತೆರಿಗೆ ಸಂಗ್ರಹವು ಸತತ ಮೂರನೇ ತಿಂಗಳಾದ ಮೇನಲ್ಲೂ 1.50 ಲಕ್ಷ ಕೋಟಿ ರೂಪಾಯಿಗಳನ್ನು ದಾಟಿದೆ. ಮೇ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹವು ಶೇ. 12ರಷ್ಟು ಏರಿಕೆಯಾಗಿ, 1.57 ಲಕ್ಷ ಕೋಟಿ ರೂ.ಗಿಂತ ಅಧಿಕ ಮಟ್ಟದಲ್ಲಿದೆ.

ಜುಲೈ 1, 2017ರಂದು ಜಿಎಸ್‌ಟಿ ಜಾರಿಯಾದ ನಂತರ 5ನೇ ಬಾರಿಗೆ ಜಿಎಸ್‌ಟಿ ಮಾಸಿಕ ಆದಾಯವು 1.5 ಲಕ್ಷ ಕೋಟಿ ರೂಪಾಯಿಗಳನ್ನು ದಾಟಿದೆ. ಆರ್ಥಿಕ ಚಟುವಟಿಕೆಗಳ ಮುಂದುವರಿಕೆಯನ್ನು ಜಿಎಸ್‌ಟಿ ಸಂಗ್ರಹವು ಪ್ರತಿಬಿಂಬಿಸುತ್ತಿದೆ ಎಂದು ತೆರಿಗೆ ತಜ್ಞರು ಹೇಳಿದ್ದಾರೆ.

ಏಪ್ರಿಲ್‌ನಲ್ಲಿ ಜಿಎಸ್‌ಟಿ ಆದಾಯ ದಾಖಲೆಯ ಗರಿಷ್ಠ 1.87 ಲಕ್ಷ ಕೋಟಿ ರೂ.ಗೆ ತಲುಪಿದ್ದರೆ, ಮಾರ್ಚ್‌ನಲ್ಲಿ 1.60 ಲಕ್ಷ ಕೋಟಿ ರೂ. ಸಂಗ್ರಹವಾಗಿತ್ತು.

2023ರ ಮೇ ತಿಂಗಳಿನಲ್ಲಿ ಸಂಗ್ರಹಿಸಲಾದ ಒಟ್ಟು ಜಿಎಸ್‌ಟಿ ಆದಾಯವು 1,57,090 ಕೋಟಿ ರೂ.ಗಳಷ್ಟಿದೆ. ಕೇಂದ್ರ ಜಿಎಸ್‌ಟಿ 28,411 ಕೋಟಿ ರೂ., ರಾಜ್ಯ ಜಿಎಸ್‌ಟಿ 35,828 ಕೋಟಿ ರೂ. ಮತ್ತು ಇಂಟಿಗ್ರೇಟೆಡ್ ಜಿಎಸ್‌ಟಿ 81,363 ಕೋಟಿ ರೂ. ಮತ್ತು ಸೆಸ್ 11,489 ಕೋಟಿ ರೂ. ಸಂಗ್ರಹವಾಗಿದೆ.

ಸರಕುಗಳ ಆಮದು ಆದಾಯವು ಶೇ.12ರಷ್ಟು ಹೆಚ್ಚಾಗಿದೆ ಮತ್ತು ದೇಶೀಯ ವಹಿವಾಟುಗಳಿಂದ (ಸೇವೆಗಳ ಆಮದು ಸೇರಿದಂತೆ) ಆದಾಯವು ಕಳೆದ ವರ್ಷದ ಇದೇ ತಿಂಗಳಿನಲ್ಲಿ ಈ ಮೂಲಗಳಿಂದ ಬಂದ ಆದಾಯಕ್ಕಿಂತ ಶೇ. 11ರಷ್ಟು ಹೆಚ್ಚಾಗಿದೆ ಎಂದು ಹಣಕಾಸು ಸಚಿವಾಲಯ ಬಿಡುಗಡೆಗೊಳಿಸಿದ ಅಂಕಿ-ಅಂಶಗಳು ತಿಳಿಸಿದೆ. ಹಣಕಾಸು ವರ್ಷ 2024ರಲ್ಲಿನ ನಿರೀಕ್ಷಿತ ಜಿಡಿಪಿ ಬೆಳವಣಿಗೆಗೆ ಅನುಗುಣವಾಗಿ ಮುಂದಿನ ಕೆಲವು ತಿಂಗಳುಗಳಲ್ಲಿ 1.55-1.65 ಲಕ್ಷ ಕೋಟಿ ರೂ.ಗಳ ಜಿಎಸ್‌ಟಿ ಆದಾಯ ಸಂಗ್ರಹವಾಗಲಿದೆ, ಎಂದು ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

- 1,57,090 ಕೋಟಿ ರೂ.-ಸರಕಾರಕ್ಕೆ ಮೇನಲ್ಲಿ ಬಂದ ಜಿಎಸ್‌ಟಿ ಆದಾಯ
- 1.4 ಲಕ್ಷ ಕೋಟಿ ರೂ. - ಕಳೆದ 14 ತಿಂಗಳಲ್ಲಿ ಸರಾಸರಿ ಸಂಗ್ರಹವಾದ ಜಿಎಸ್‌ಟಿ

### ತೆರಿಗೆ ಸಂಗ್ರಹದಲ್ಲಿ ಕರ್ನಾಟಕ ಮತ್ತೆ ನಂ.2

- ದೇಶದಲ್ಲಿ ಹೆಚ್ಚು ಜಿಎಸ್‌ಟಿ ಸಂಗ್ರಹವಾಗುವ ರಾಜ್ಯಗಳಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ 2023ರ ಮೇನಲ್ಲಿ 10,317 ಕೋಟಿ ರೂ. ಜಿಎಸ್‌ಟಿ ಸಂಗ್ರಹವಾಗಿದೆ. ಏಪ್ರಿಲ್‌ನಲ್ಲಿ 9,232 ಕೋಟಿ ರೂ. ಸಂಗ್ರಹವಾಗಿತ್ತು.
- ಮೊದಲ ಸ್ಥಾನದಲ್ಲಿರುವ ಮಹಾರಾಷ್ಟ್ರದಲ್ಲಿ ಮೇನಲ್ಲಿ 23,536 ಕೋಟಿ ರೂ. ಜಿಎಸ್‌ಟಿ ಸಂಗ್ರಹವಾಗಿದೆ.
- ತಮಿಳುನಾಡಿನಲ್ಲಿ 8,953 ಕೋಟಿ ರೂ., ಕೇರಳದಲ್ಲಿ 2,297 ಕೋಟಿ ರೂ., ಪಶ್ಚಿಮ ಬಂಗಾಳದಲ್ಲಿ 5,162 ಕೋಟಿ ರೂ., ಗುಜರಾತ್‌ನಲ್ಲಿ 9,800 ಕೋಟಿ ರೂ., ಉತ್ತರ ಪ್ರದೇಶದಲ್ಲಿ 7,468 ಕೋಟಿ ರೂ. ಜಿಎಸ್‌ಟಿ ಸಂಗ್ರಹವಾಗಿದೆ.

# CHRONOLOGY OF MAJOR POLICY ANNOUNCEMENTS BY RESERVE BANK OF INDIA RELATING TO URBAN CO-OPERATIVE BANKS DURING THE FINANCIAL YEAR 2022-23

| Date of Announcement | Policy initiates |
|---|---|
| April 21, 2022 | With a view to prevent any conflict of interest and parallel/shadow authority, urban co-operative banks (UCBs) were directed not to create any honorary positions/titles or confer any such titles, such as chairman emeritus, group chairman, etc., that are non-statutory in nature. UCBs have been provided time of one year to comply with these instructions.<br>• In November 2017, legal entity identifier (LEI) was mandated for all entities having total exposure of Rs 50 crore and above. On a review, it was decided to extend LEI requirement to all non-individual borrowers of SCBs, UCBs, All India Financial Institutions (AIFIs), SFBs and NBFCs with a total fund and non-fund based exposure of Rs 5 crore and above, to be obtained in a phased manner. |
| May 24, 2022 | The ceiling on loans extended by UCBs to individuals for carrying out repairs/additions/ alterations to their dwelling units was aligned with the limits prescribed under the extant priority sector guidelines. |
| June 8, 2022 | The ceiling on the amount of housing loans that can be extended by tier-I and tier-II UCBs was increased from `30 lakh and `70 lakh to `60 lakh and `140 lakh, respectively. Subsequently, on implementation of the four-tier structure for UCBs, the limit of `60 lakh and `140 lakh was made applicable to UCBs in tier-1 and tier- 2 to 4, respectively, vide circular dated December 30, 2022. Guidelines have been issued in terms of Section 23 of Banking Regulation Act, 1949 [as applicable to co-operative societies (AACS)] to UCBs for offering doorstep banking services to the customers, on a voluntary basis, at par with SCBs. Financially sound and well managed (FSWM) UCBs can offer the service under automatic route, whereas nonFSWM UCBs would require prior approval of the Reserve Bank. UCBs have been also advised to review the scheme by their boards on a half-yearly basis, during the first year of its operation and subsequently on an annual basis. |
| June 10, 2022 | As per the Punjab and Maharashtra Co-operative Bank Limited (Amalgamation with Unity Small Finance Bank Limited) Scheme, 2022, 80 per cent of uninsured deposits of institutional depositors with erstwhile PMC bank will be converted into perpetual non-cumulative preference shares (PNCPS) and remaining 20 per cent will be converted into equity warrants. The circular clarified that UCBs shall make full provisions for their investment in PNCPS, and no provisions are required for investment in equity warrants. The resulting provisions may be spread equally over two financial years such that the entire loss is fully provided for by March 31, 2024. Further, investment in PNCPS and equity warrants shall be classified as non-SLR investments and shall be exempt from the prudential limits applicable on investment in non-SLR securities. |

| | |
|---|---|
| July 26, 2022 | UCBs were advised that the loan policy of the bank shall be reviewed by the board at least once in a financial year to ensure that it remains in alignment with the extant regulations. |
| September 7, 2022 | In terms of extant regulations on capital adequacy, bank loans guaranteed under various credit guarantee schemes attract a zero per cent risk weight to the extent of guarantee cover. It was observed that some of the schemes launched by the aforesaid trust funds have certain features which essentially restrict the effective guarantee coverage and stand counter to the requisite prudential requirements to permit concessional capital treatment. In order to have a consistent approach, a circular was issued clarifying the broad principles for applying zero per cent risk weight for exposures guaranteed under any existing or future schemes launched by the relevant trust funds. Further, the zero per cent risk weight relaxation till now was confined only to SCBs. To have a harmonised regulatory approach, the above relaxation was also extended to other member lending institutions (MLIs), including NBFCs and UCBs, to the extent these entities are recognised as eligible MLIs under the respective schemes. |
| September 19, 2022 | Certain principles, standards and procedures for compliance function in tier 3 and tier 4 UCBs 8, keeping in view the principles of proportionality, were introduced which included, inter alia, to have an independent compliance function, a board approved compliance policy and a chief compliance officer (CCO). Tier 4 and tier 3 UCBs were given time till April 1, 2023 and October 1, 2023, respectively, to comply with the provisions of the circular |
| October 11, 2022 | To strengthen compliance with income recognition, asset classification and provisioning norms, the thresholds for disclosure of divergences have been revised downwards and disclosure requirements have also been introduced for primary (urban) co-operative banks (UCBs). |
| December 1, 2022 | On July 19, 2022, the Reserve Bank issued a revised regulatory framework for UCBs under which a simple four-tiered approach was adopted with differentiated regulatory prescriptions aimed at strengthening their financial soundness. Accordingly, regulations were realigned as under: (i) a circular containing the new definition of tier 1, tier 2, tier 3 and tier 4 UCBs was issued, which will be adopted for all regulatory purposes, in supersession of the earlier instructions (May 6, 2009); (ii) Financially Sound and Well Managed (FSWM) criteria was revised to make them more objective and can be adopted by UCBs on self-assessment basis based on the assessed financials and findings of the Reserve Bank inspection report or audited financial statements whichever is latest; and (iii) minimum capital adequacy and net worth requirements as also permission to include revaluation reserves in tier-I capital, subject to conditions, were stipulated for all tiers of UCBs. UCBs which do not meet the requirements have been provided with a glide path to facilitate smooth transition. |
| March 28, 2023 | The instructions on 'Revised Regulatory Framework for Urban Co-operative Banks (UCBs) – Net Worth and Capital Adequacy' issued to all Primary (Urban) Co-operative Banks was made effective from March 31, 2023. |

Curtesy -RBI Annual Report -2023. Complied by -Sudhakara Bhat, Banking Advisor

# ಬ್ಯಾಂಕ್ ಉದ್ಯೋಗವೂ ಸೇಫ್ ಅಲ್ಲ! 'ಎಐ' ಪ್ರವೇಶದಿಂದ ಬ್ಯಾಂಕಿಂಗ್ ವಲಯದಲ್ಲಿ ಮಹತ್ವದ ಬದಲಾವಣೆ

ಹ.ಚ. ನಟೇಶ ಬಾಬು ಬೆಂಗಳೂರು

**ಈಗಾಗಲೇ ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್‌ನಿಂದಾಗಿ ಬ್ಯಾಂಕಿಗೆ ಹೋಗುವ ಅಗತ್ಯವೇ ಕಡಿಮೆಯಾಗಿದ್ದು, ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು ಬ್ಯಾಂಕಿಂಗ್ ಸೇವೆಗಳನ್ನು ಮತ್ತಷ್ಟು ಸರಳ ಮತ್ತು ಪರಿಣಾಮಕಾರಿಯಾಗಿಸಲಿದೆ. ಒಂದೆಡೆ ಗ್ರಾಹಕರಿಗೆ ಮತ್ತು ಬ್ಯಾಂಕ್ ಉದ್ಯೋಗಿಗಳಿಗೆ ಎಐನಿಂದ ಕೆಲಸ ಕಾರ್ಯಗಳು ಸುಲಭವಾಗಲಿದ್ದರೆ, ಇನ್ನೊಂದೆಡೆ ಪರಿಸ್ಥಿತಿ ಇದೇ ವೇಗದಲ್ಲಿ ಮುಂದುವರಿದರೆ ಮುಂದೆ ಬ್ಯಾಂಕ್ ಶಾಖೆಗಳ ಅಗತ್ಯವೇ ಗ್ರಾಹಕರಿಗೆ ಬರಲಿಕ್ಕಿಲ್ಲ! ಹಾಗಾದಲ್ಲಿ ಸಾವಿರಾರು ಬ್ಯಾಂಕ್ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುವ ಪರಿಸ್ಥಿತಿಯೂ ಸೃಷ್ಟಿಯಾಗುವ ಸಾಧ್ಯತೆ ಇದೆ.**

ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿನಿಂದಾಗಿ ನೀವು ಬ್ಯಾಂಕಿಗೆ ಹೋಗುವ ಅಗತ್ಯವೇ ಕಡಿಮೆಯಾಗಿವೆ. ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು (ಎಐ) ಬ್ಯಾಂಕಿಂಗ್ ಸೇವೆಗಳನ್ನು ಮತ್ತಷ್ಟು ಸರಳ ಮತ್ತು ಪರಿಣಾಮಕಾರಿಯಾಗಿಸಲಿದೆ. ಗ್ರಾಹಕರಿಗೆ ಮತ್ತು ಬ್ಯಾಂಕ್ ಉದ್ಯೋಗಿಗಳಿಗೆ ಎಐನಿಂದ ಕೆಲಸ ಕಾರ್ಯಗಳು ಸುಲಭವಾಗಿವೆ. ಇವೆಲ್ಲವೂ ಸಕಾರಾತ್ಮಕ ಸಂಗತಿಗಳೇ ಆಗಿವೆ. ಆದರೆ, ಪರಿಸ್ಥಿತಿ ಇದೇ ವೇಗದಲ್ಲಿ ಮುಂದುವರಿದರೆ, ಬ್ಯಾಂಕ್ ಶಾಖೆಗಳ ಅಗತ್ಯವೇ ಗ್ರಾಹಕರಿಗೆ ಬರಲಿಕ್ಕಿಲ್ಲ! ಇದರಿಂದಾಗಿ ಸಾವಿರಾರು ಉದ್ಯೋಗಿಗಳು ಕೆಲಸ ಕಳೆದುಕೊಳ್ಳಬೇಕಾಗಬಹುದು.

ಬ್ಯಾಂಕಿಂಗ್ ವಲಯದ ಸಿಬ್ಬಂದಿಯು ತಮ್ಮ ಉದ್ಯೋಗಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗ್ರಹಿಸಬೇಕು. ಎಐ ನಿರ್ವಹಣೆಗೆ ಪೂರಕವಾದ ಕೌಶಲಗಳಿದ್ದರೆ ವೃತ್ತಿಬದುಕು ಸುಧಾರಿಸುತ್ತದೆ. ಬ್ಯಾಂಕ್ ಉದ್ಯೋಗಿಗಳು ಮತ್ತು ಗ್ರಾಹಕರ ಮೇಲೆ ಎಐ ಪರಿಣಾಮಗಳು ಹೀಗಿವೆ.

**1. ದೈನಂದಿನ ಕಾರ್ಯಗಳ ಆಟೋಮೇಷನ್ :** ಎಐ ತಂತ್ರಜ್ಞಾನವು ಬ್ಯಾಂಕಿಂಗ್ ವಲಯದಲ್ಲಿ ಡೇಟಾ ಎಂಟ್ರಿ, ರೆಕಾರ್ಡ್-ಕೀಪಿಂಗ್ ಮತ್ತು ವಹಿವಾಟು ಪ್ರಕ್ರಿಯೆಯಂತಹ ಅನೇಕ ದಿನನಿತ್ಯದ ಕಾರ್ಯಗಳನ್ನು ಸ್ವಯಂಚಾಲಿತಗೊಳಿಸಿದೆ. ಈ ಹಿಂದೆ ಈ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ನೌಕರರ ಕೆಲಸದ ಹೊರೆ ಕಡಿಮೆಯಾಗಿದೆ.

**2. ಸುಧಾರಿತ ಗ್ರಾಹಕ ಸೇವೆ :** ಎಐ ಚಾಲಿತ ಚಾಟ್‌ಬಾಟ್‌ಗಳು ಮತ್ತು ವರ್ಚುವಲ್ ಸಹಾಯಕರು ಗ್ರಾಹಕರ ಪ್ರಶ್ನೆಗಳಿಗೆ ತ್ವರಿತ ಮತ್ತು ನಿಖರವಾದ ಸಮಾಧಾನಗಳನ್ನು ಒದಗಿಸುತ್ತಿವೆ. ಈ ಮೂಲಕ ಗ್ರಾಹಕ ಸೇವೆಯನ್ನು



ಸುಧಾರಿಸಲಾಗಿದೆ. ಎಐ ಬಳಕೆಯಿಂದಾಗಿ ಗ್ರಾಹಕ ಸೇವಾ ಪ್ರತಿನಿಧಿಗಳ ಕೆಲಸದ ಹೊರೆ ಗಣನೀಯವಾಗಿ ಕಡಿಮೆಯಾಗಿದೆ. ಬ್ಯಾಂಕ್ ಸೇವೆಯ ಕುಂದುಕೊರತೆ ಬಗ್ಗೆ ನೀವು ಗ್ರಾಹಕ ಸೇವಾ ನಂಬರ್‌ಗೆ ಕರೆ ಮಾಡಿದರೆ ಅಥವಾ ಚಾಟ್ ಮಾಡಿದರೆ, ಮೊದಲು ಕಸ್ಟಮರ್ ಸರ್ವೀಸ್ ಏಜೆಂಟರು ಮಾತನಾಡುತ್ತಿದ್ದರು. ಈಗ ಬಹುತೇಕ ಬ್ಯಾಂಕ್‌ಗಳಲ್ಲಿ ಈ ಸೇವೆಗಳು ಆಟೋಮೇಷನ್ ಆಗಿವೆ. ಟೆಕ್ ರೀಸರ್ಚ್ ಕಂಪನಿ ಗಾರ್ಟ್ನರ್ ಪ್ರಕಾರ, 2027ರ ಹೊತ್ತಿಗೆ ಕಸ್ಟಮರ್ ಸರ್ವೀಸ್ ವಿಭಾಗದಲ್ಲಿನ ಕೆಲಸಗಳಲ್ಲಿ ಶೇ.25ರಷ್ಟನ್ನು ಚಾಟ್‌ಬಾಟ್‌ಗಳೇ ಆಕ್ರಮಿಸಿಕೊಳ್ಳಲಿವೆ.

### ಕೌಶಲವುಳ್ಳವರಿಗೆ ಅವಕಾಶ ಸೃಷ್ಟಿ

**3. ಹೆಚ್ಚಿದ ನಿಖರತೆ ಮತ್ತು ದಕ್ಷತೆ :** ಬ್ಯಾಂಕಿಂಗ್ ವಲಯದಲ್ಲಿ ವಂಚನೆ ಪತ್ತೆ ಮತ್ತು ಅಪಾಯದ ಮೌಲ್ಯಮಾಪನಕ್ಕೆ ಎಐ ತಂತ್ರಜ್ಞಾನಗಳು ನೆರವಾಗಿವೆ.

ಅನೇಕ ಬ್ಯಾಂಕಿಂಗ್ ಪ್ರಕ್ರಿಯೆಗಳಲ್ಲಿ ನಿಖರತೆ ಮತ್ತು ದಕ್ಷತೆಯನ್ನು ಸುಧಾರಿಸಿದೆ. ಇದು ಮನುಷ್ಯನ ಹಸ್ತಕ್ಷೇಪದ ಅಗತ್ಯವನ್ನು ಕಡಿಮೆ ಮಾಡಿದ್ದು, ಕೆಲಸದ ಒಟ್ಟಾರೆ ಗುಣಮಟ್ಟವನ್ನು ಸುಧಾರಿಸಿದೆ.

**4.ಉದ್ಯೋಗಸ್ಥಳಾಂತರ:** ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಉದ್ಯೋಗಾವಕಾಶಗಳನ್ನೂ ಎಐ ಸೃಷ್ಟಿಸಿದೆ. ಇದು ಕೆಲವು ಉದ್ಯೋಗಗಳ ಸ್ಥಳಾಂತರಕ್ಕೂ ಕಾರಣವಾಗಿದೆ. ಉದಾಹರಣೆಗೆ, ಈ ಹಿಂದೆ ಮನುಷ್ಯರು ನಿರ್ವಹಿಸುತ್ತಿದ್ದ ಕೆಲವು ದಿನನಿತ್ಯದ ಕಾರ್ಯಗಳನ್ನು ಈಗ 'ಎಐ'ನಿಂದ ಸ್ವಯಂಚಾಲಿತಗೊಳಿಸಲಾಗಿದೆ. ಇದರಿಂದಾಗಿ ಉದ್ಯೋಗಿಗಳಿಗೆ ಬೇಡಿಕೆ ತಗ್ಗುತ್ತಿದೆ.

**ಫೈನಾನ್ಸ್ ವಲಯಕ್ಕೂ ಲಗ್ಗೆ :** Market Research Analysts, Financial Analysts, Personnel Financial Advisors, Account Agent, Costomer Service Agents ಸೇರಿದಂತೆ ಹಣಕಾಸು ವಲಯದಲ್ಲಿನ ಉದ್ಯೋಗಿಗಳಿಗೂ ಎಐ ಬಿಸಿ ತಟ್ಟುತ್ತಿದೆ. ಮಾರುಕಟ್ಟೆಯ ಟ್ರೆಂಡ್‌ಗಳನ್ನು ಎಐ ಗುರುತಿಸಲಿದೆ. ಅವುಗಳನ್ನು ಹೈಲೈಟ್ ಮಾಡಿ ಹೂಡಿಕೆಯ ಮಾದರಿಯನ್ನು ಸಲಹೆ ನೀಡಬಲ್ಲದು. ಟ್ರೇಡರ್ಸ್‌ಗಳಿಗೂ ಎಐನಿಂದ ಅಪಾಯ ತಪ್ಪಿದ್ದಲ್ಲ. ವಾಲ್ ಸ್ಟ್ರೀಟ್‌ನಲ್ಲಿನ ಬಹುತೇಕ ನೌಕರರ ಕೆಲಸಕ್ಕೂ ಎಐನಿಂದ ಕುತ್ತು ತಪ್ಪಿದ್ದಲ್ಲ ಎಂದು ರೋಚೆಸ್ಟರ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ಮಾಡಿದೆ.




ಅಕೌಟೆಂಟ್ ವೃತ್ತಿಯನ್ನು ಉತ್ತಮವೆಂಬುದಾಗಿ ಸಾಮಾನ್ಯವಾಗಿ ಪರಿಗಣಿಸಲಾಗಿದೆ. ಆದರೆ, ಈ ವಲಯದ ಉದ್ಯೋಗಿಗಳಿಗೂ ಎಐ ನಿಂದ ಅಪಾಯವಿದೆ. ತಾರ್ಕಿಕ, ತೌಲನಿಕ ಮತ್ತು ಬೌದ್ಧಿಕ ಶ್ರಮದ ಕೆಲಸಗಳನ್ನೂ ಎಐ ನಿಭಾಯಿಸಬಲ್ಲದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

### 10 ರಿಂದ 15 ಪರ್ಸೆಂಟ್ ಬ್ಯಾಂಕ್ ಉದ್ಯೋಗಿಗಳಿಗೆ ಕುತ್ತು

ಬ್ಯಾಂಕಿಂಗ್ ವಲಯದಲ್ಲಿ ಎಐ ಯಾವ ಬದಲಾವಣೆಗಳನ್ನು ತರಲಿದೆ ಎನ್ನುವ ಬಗ್ಗೆ ನಿವೃತ್ತ ಬ್ಯಾಂಕ್ ಎಜಿಎಂ ಬಿ.ಎನ್. ಭರತ್ ಅವರಿಂದ ವಿವರಣೆ.

**ಬ್ಯಾಂಕ್‌ಗಳಲ್ಲಿ ಹೇಗಿದೆ ಎಐ ಪರಿಣಾಮ? :** ಜನಸಾಮಾನ್ಯರ ಹಣಕಾಸಿನ ವ್ಯವಹಾರಗಳಲ್ಲಿ ಬ್ಯಾಂಕುಗಳು ಅವಿಭಾಜ್ಯ ಅಂಗಗಳಾಗಿವೆ. ಗ್ರಾಹಕರಿಗೆ ತ್ವರಿತ ಸೇವೆ ಹಾಗು ಹೊಸ ಆವಿಷ್ಕಾರಗಳನ್ನು ಒದಗಿಸಿಕೊಡಲು ಸಾಧಕ ಬಾಧಕಗಳನ್ನು ವಿಶ್ಲೇಷಿಸಿ ಬ್ಯಾಂಕುಗಳೂ 'ಎಐ'ಯನ್ನು ಅಳವಡಿಸಿಕೊಳ್ಳುತ್ತಿವೆ. ಬ್ಯಾಂಕುಗಳಲ್ಲಿ ಸಾಕಷ್ಟು ವ್ಯವಹಾರಗಳು ಮೊಬೈಲ್, ದೂರವಾಣಿ, ಅಂತರ್ಜಾಲ ಬ್ಯಾಂಕಿಂಗ್ ಮುಂತಾದ ಡಿಜಿಟಲ್ ಮಾಧ್ಯಮದ ಮೂಲಕ ನಡೆಯುತ್ತವೆ. ಆದಾಗ್ಯೂ, ಸಿಬ್ಬಂದಿಯಿಂದಲೇ ನಡೆಯಬೇಕಾದ ಕೆಲಸಗಳಿರುತ್ತವೆ. ಕಾಗದ ಪತ್ರಗಳ ಮೂಲಕ ಹಲವು ಕೆಲಸಗಳು ನಡೆಯುವುದರಿಂದ ಬ್ಯಾಂಕುಗಳಿಗೆ ವೆಚ್ಚ ಅಧಿಕ. ಪೂರ್ಣ ಪ್ರಮಾಣದಲ್ಲಿ ಎಐ ಬಂದ ಬಳಿಕ ವೆಚ್ಚದಲ್ಲಿ ಭಾರೀ ಕಡಿತ ಉಂಟಾಗಲಿದೆ.

ಎಐ ತಂತ್ರಜ್ಞಾನ ಆಧಾರಿತ ಸಾಧನಗಳು ವರ್ಷವಿಡೀ ಹಗಲು ರಾತ್ರಿ ಎನ್ನದೆ ಕಾರ್ಯ ನಿರ್ವಹಿಸುತ್ತವೆ. ಹೀಗಾಗಿ ರಜಾ ದಿನಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಮಸ್ಯೆಗಳುಂಟಾದರೆ ಗ್ರಾಹಕರಿಗೆ ಅಗತ್ಯ ಪರಿಹಾರ ದೊರಕಬಲ್ಲದು. ಬ್ಯಾಂಕುಗಳು ಕೇಂದ್ರೀಯ ಬ್ಯಾಂಕಾದ ರಿಸರ್ವ್ ಬ್ಯಾಂಕಿನ ಕಾಯಿದೆಗಳನ್ನು ಪಾಲಿಸಬೇಕು. ಅವುಗಳನ್ನು ಕಾಲಕಾಲಕ್ಕೆ ಅನುಷ್ಠಾನಗೊಳಿಸಲು ಎಐ ನೆರವಾಗಲಿದೆ.

**ಉದ್ಯೋಗಿಗಳ ಕೆಲಸಕ್ಕೆ ಕುತ್ತು ಬರಬಹುದೇ? :** ಕೆಲವೆಲ್ಲ ಶಾಖೆಗಳನ್ನು ಮುಚ್ಚಬೇಕಾಗಿ ಬರಬಹುದು. ಕೆಲವೆಲ್ಲ ಕೆಲಸಗಳನ್ನು ಎಐ ಇನ್ನಷ್ಟು ಕಾರ್ಯಕ್ಷಮತೆಯಿಂದ ಮಾಡುವ ಸಾಧ್ಯತೆ ಇದೆ. ಹಲವಾರು ಉದ್ಯೋಗಿಗಳ ಅವಶ್ಯಕತೆಯೇ ಬೀಳಲಾರದು. ಈಗಿರುವ ಸಿಬ್ಬಂದಿ ಸಂಖ್ಯೆಯಲ್ಲಿ ಶೇಕಡ 10ರಿಂದ 15ರಷ್ಟನ್ನು ಕಡಿತಗೊಳಿಸಬೇಕಾದೀತು ಎಂದು ಸಂಶೋಧನೆಗಳು ತಿಳಿಸಿವೆ.

**ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಬಹುದೇ? :** 'ಎಐ' ಅಳವಡಿಸಿ ಗ್ರಾಹಕ ಸೇವೆಯಲ್ಲಿ ಹೊಸ ಮಜಲಿಗೇರುವ ಬ್ಯಾಂಕುಗಳಲ್ಲಿ ಹೊಸ ಉದ್ಯೋಗಾವಕಾಶಗಳೂ ಒದಗಲಿವೆ. ಎಐ ಬಳಸಿ ಅದರಿಂದ ಯಾವ ರೀತಿಯಲ್ಲಿ ಪ್ರಯೋಜನ ಪಡೆಯಬಹುದು ಎಂದು ನಿರಂತರ ಅಧ್ಯಯನ ನಡೆಸುವ ವಿಶಿಷ್ಟ ಉದ್ಯೋಗಿಗಳಿಗೆ ಬೇಡಿಕೆ ಉಂಟಾದೀತು.

# ಬ್ಯಾಂಕುಗಳಲ್ಲಿನ 35,000 ಕೋಟಿ ರೂ.ಗೆ ವಾರಸುದಾರರೇ ಇಲ್ಲ, ತಮ್ಮದೇ ಹಣ ಮರೆತ ಜನ!

▸▸ ಕೀರ್ತಿ ಕೋಲ್ಗಾರ್

35 ಸಾವಿರ ಕೋಟಿ ರೂ.ಗಳನ್ನು ಎಲ್ಲಿಯೋ ಇಟ್ಟು, ನಾವು ಮರೆತು ಕೂರಲು ಸಾಧ್ಯವೇ? ನಮ್ಮ ದೇಶದಲ್ಲಿ ಅನೇಕರು ಮಾಡುತ್ತಿರುವುದು ಇದನ್ನೇ! ಬ್ಯಾಂಕ್ ಖಾತೆಗಳಲ್ಲಿ ಹಣವಿಟ್ಟಿರುತ್ತಾರೆ. ಆದರೆ, ಹತ್ತಾರು ವರ್ಷಗಳಿಂದ ಆ ಖಾತೆಯಿಂದ ಒಂದು ಪೈಸೆಯನ್ನೂ ವಿತ್‌ಡ್ರಾ ಮಾಡಿಲ್ಲ. ಠೇವಣಿ ರೂಪದಲ್ಲಿ ಇಟ್ಟಿರುವ ಹಣ ಏನಾಗಿದೆ? ನನ್ನ ಬ್ಯಾಂಕಿನ ಖಾತೆಯಲ್ಲಿ ಎಷ್ಟು ಮೊತ್ತವಿದೆ? ಕನಿಷ್ಠ ಇದನ್ನು ವಿಚಾರಿಸಿಕೊಳ್ಳಲೂ ಖಾತೆದಾರ ಬ್ಯಾಂಕ್‌ನತ್ತ ಮುಖ ಹಾಕಿಲ್ಲ!

ಆರ್‌ಬಿಐ ಇದನ್ನೆ ವಾರಸುದಾರರಿಲ್ಲದ ಖಾತೆ ಹಣ ಅಥವಾ ಅನ್‌ಕ್ಲೈಮ್ಡ್ ಠೇವಣಿ ಎಂದು ಗುರುತಿಸಿದೆ. ಉಳಿತಾಯ ಅಥವಾ ಚಾಲ್ತಿ ಖಾತೆಯಲ್ಲಿನ ಹಣವನ್ನು 10 ವರ್ಷಗಳವರೆಗೆ ನಿರ್ವಹಿಸದಿದ್ದರೆ ಅದು 'ನಿಷ್ಕ್ರಿಯ ಖಾತೆ' ಎಂದು ಕರೆಸಿಕೊಳ್ಳುತ್ತದೆ. ಕೆಲವು ಗ್ರಾಹಕರು ಆರ್‌ಡಿ ಅಥವಾ ಇನ್ಯಾವುದೇ ಉಳಿತಾಯ ಯೋಜನೆಯಲ್ಲಿ ಹಣ ಹೂಡಿ, ಮೆಚ್ಯೂರಿಟಿ ಅವಧಿ ಮುಗಿದು ಹತ್ತಾರು ವರ್ಷಗಳಾದರೂ ಖಾತೆಯಲ್ಲಿನ ಹಣವನ್ನು ಮರೆತರೆ ಅದು ಕೂಡ ಅನ್‌ಕ್ಲೈಮ್ಡ್ ಠೇವಣಿ ಎಂದೆನ್ನಿಸಿಕೊಳ್ಳುತ್ತದೆ. ಪ್ರಸ್ತುತ ದೇಶದ 12 ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ 35 ಸಾವಿರ ಕೋಟಿ ರೂ. ಹಣಕ್ಕೆ ಯಾರೂ ಹಕ್ಕುದಾರರೇ ಇಲ್ಲ!

ಗ್ರಾಹಕರಿಗೆ ಈ ಹಣ ತಲುಪಿಸುವ ಸಲುವಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಜೂನ್ 1ರಿಂದ '100 ದಿನ 100 ಪಾವತಿ' (100 days 100 pays) ಅಭಿಯಾನ ಆರಂಭಿಸುತ್ತಿದೆ.

ಖಾತೆಗಳಲ್ಲಿನ ಹಣಕ್ಕೆ ಯಾರೂ ದಿಕ್ಕಿಲ್ಲ ಎಂದು ತಿಳಿದಾಗ ಬ್ಯಾಂಕ್‌ಗಳು ಆರ್‌ಬಿಐನ 'ಠೇವಣಿದಾರರ ಅರಿವು ಮತ್ತು ಜಾಗೃತಿ ನಿಧಿ'ಗೆ (DEAF) ವರ್ಗಾಯಿಸುತ್ತವೆ. ಈ ನಿಧಿಯ ನಿರ್ವಹಣೆಯ ಜವಾಬ್ದಾರಿ ಆರ್‌ಬಿಐ ಹೆಗಲಿಗೆ ಬೀಳುತ್ತದೆ. ಇಂಥ ಹಣವನ್ನು ಠೇವಣಿದಾರ ಅಥವಾ ಹೂಡಿಕೆದಾರರಿಗೆ ಹೂಡಿಕೆಯ ಬಗ್ಗೆ ಅರಿವು ಮೂಡಿಸಲು ಮತ್ತು ಅವರಿಗೆ ಬ್ಯಾಂಕಿಂಗ್ ವ್ಯವಹಾರಗಳ ಕುರಿತು ಅರಿವು ಹೆಚ್ಚಿಸುವ ಕಾರ್ಯಕ್ರಮಗಳಿಗೆ ಬಳಸಲಾಗುತ್ತದೆ.

### ಏನಿದು 100 ದಿನ 100 ಪಾವತಿ?

ಖಾತೆಗಳಲ್ಲಿನ ಅನ್‌ಕ್ಲೈಮ್ಡ್ ಠೇವಣಿ ಹಣವನ್ನು ಬ್ಯಾಂಕಿಂಗ್ ಸೇವೆಗಳಿಗೆ ಬಳಸುವುದಕ್ಕಿಂತ, ಸಂಬಂಧಪಟ್ಟ ಖಾತೆದಾರರಿಗೆ ತಲುಪಿಸುವ ಪ್ರಯತ್ನವನ್ನು ಆರ್‌ಬಿಐ ಕಳೆದ ವರ್ಷ ಮೊಟ್ಟ ಮೊದಲ ಬಾರಿಗೆ ಯೋಜಿಸಿತ್ತು. ಇದಕ್ಕಾಗಿ ರೂಪಿಸಿದ ಅಭಿಯಾನವೇ '100 ದಿನ 100 ಪಾವತಿ'. ಇದು ತಕ್ಕಮಟ್ಟಿಗೆ ಯಶಸ್ವಿಯೂ ಆಯಿತು.

| ಯಾವ ವರ್ಷ | ಎಷ್ಟು ಹಣ ಅನಾಥ? |
|---|---|
| ವರ್ಷ | ವಾರಸುದಾರರಿಲ್ಲದ ಠೇವಣಿ |
| 2014–15 | 7,875 ಕೋಟಿ ರೂ. |
| 2015–16 | 10,585 ಕೋಟಿ ರೂ. |
| 2020–21 | 39,264 ಕೋಟಿ ರೂ. |
| 2021–22 | 48,263 ಕೋಟಿ ರೂ. |
| 2022–23 | 30,000 ಕೋಟಿ ರೂ. |

| ಯಾವ ಬ್ಯಾಂಕ್‌ನಲ್ಲಿ ಎಷ್ಟಿದೆ ಅನಾಥ ಹಣ? | | |
|---|---|---|
| ಬ್ಯಾಂಕ್‌ಗಳು | ಖಾತೆಗಳು | ಹಣ |
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 2,17,80,757 | 8,086 ಕೋಟಿ ರೂ. |
| ಪಂಜಾಬ್ ನ್ಯಾಷನಲ್ ಬ್ಯಾಂಕ್ | 1,50,48,156 | 5,340 ಕೋಟಿ ರೂ. |
| ಕೆನರಾ ಬ್ಯಾಂಕ್ | 1,56,22,262 | 4,558 ಕೋಟಿ ರೂ. |
| ಬ್ಯಾಂಕ್ ಆಫ್ ಬರೋಡಾ | 89,30,915 | 3,904 ಕೋಟಿ ರೂ. |
| ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | 1,09,40,247 | 3,177 ಕೋಟಿ ರೂ. |

- ಈ ಅಭಿಯಾನ ಕೈಗೊಂಡಿದ್ದರಿಂದಾಗಿ 2021–22ರಲ್ಲಿ 48,263 ಕೋಟಿ ರೂ. ಇದ್ದ ಅನ್‌ಕ್ಲೈಮ್ಡ್ ಠೇವಣಿ 2022–23ರ ವೇಳೆಗೆ 30,000 ಕೋಟಿ ರೂ.ಗೆ ಇಳಿಕೆಯಾಯಿತು.
- 100 ದಿನಗಳಲ್ಲಿ ಪ್ರತಿ ಜಿಲ್ಲೆಯಲ್ಲಿನ ಟಾಪ್ 100 ಕ್ಲೈಮ್ ಮಾಡದ ಠೇವಣಿಗಳನ್ನು ಗುರುತಿಸಿ ಮತ್ತು ಇತ್ಯರ್ಥಪಡಿಸುವಂತೆ ಆರ್‌ಬಿಐ ಎಲ್ಲ ಬ್ಯಾಂಕುಗಳಿಗೂ ನಿರ್ದೇಶಿಸಿತ್ತು. ಈ ವರ್ಷವೂ ಇದೇ ಸೂಚನೆಯನ್ನೇ ನೀಡಿದೆ.

### ಅನ್‌ಕ್ಲೈಮ್ಡ್ ಠೇವಣಿ ಪತ್ತೆ ಹೇಗೆ?

- ಪ್ರತಿ ಬ್ಯಾಂಕ್ ನಿಷ್ಕ್ರಿಯ ಖಾತೆಗಳು ಮತ್ತು ಹಕ್ಕು ಪಡೆಯದ ಠೇವಣಿಗಳ ಪಟ್ಟಿಯನ್ನು ಪ್ರಕಟಿಸಬೇಕಾಗುತ್ತದೆ. ಖಾತೆದಾರರ ಹೆಸರು ಮತ್ತು

ವಿಳಾಸಗಳನ್ನೂ ನೀಡಲಾಗುತ್ತದೆ. ಸಂಬಂಧಪಟ್ಟ ಬ್ಯಾಂಕ್‌ನ ವೆಬ್‌ಸೈಟ್ ಪರಿಶೀಲಿಸಿ, ಆ ಪಟ್ಟಿಯಲ್ಲಿ ನಿಮ್ಮ ಅಥವಾ ನಿಮ್ಮ ಸಂಬಂಧಿಕರ ಹೆಸರು ಇದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬಹುದು.

- ಇಂಥ ಖಾತೆಗಳು ತೀರಾ ಹಳೆಯದಾಗಿದ್ದರೆ ಖಂಡಿತವಾಗಿಯೂ ಅವು ಡಿಜಿಟಲ್ ಬ್ಯಾಂಕಿಂಗ್‌ಗೆ ಒಳಪಟ್ಟಿರುವುದಿಲ್ಲ. ಈ ಪಟ್ಟಿಯಲ್ಲಿಯೂ ಖಾತೆದಾರನ ಹೆಸರು ಕಾಣಿಸದೆ ಇರಬಹುದು. ಇಂಥ ಸಂದರ್ಭಗಳಲ್ಲಿ ಬ್ಯಾಂಕ್‌ಗೆ ತೆರಳಿಯೇ ವಿಚಾರಿಸಬೇಕಾಗುತ್ತದೆ.
- ಆರ್‌ಬಿಐ ಇಂಥ ಸಮಸ್ಯೆಗಳನ್ನು ನಿವಾರಿಸಲು ವೆಬ್‌ಪೋರ್ಟಲ್ ರಚಿಸುವುದಾಗಿ ಹೇಳಿತ್ತು. ಇದು ಕೈಗೂಡಿದರೆ ಅನೇಕ ಬ್ಯಾಂಕ್ಗಳಲ್ಲಿನ ಕ್ಲೈಮ್ ಮಾಡದ ಠೇವಣಿಗಳ ಖಾತೆದಾರರನ್ನು ಪತ್ತೆಹಚ್ಚುವುದು ಸುಲಭ.

**ನಿಷ್ಕ್ರಿಯ ಖಾತೆದಾರರನ್ನು ಬ್ಯಾಂಕ್‌ಗಳು ಸಂಪರ್ಕಿಸುವುದಿಲ್ಲವೇ?**

ಖಾತೆಯು 2 ವರ್ಷಕ್ಕಿಂತ ಹೆಚ್ಚು ಕಾಲ ನಿಷ್ಕ್ರಿಯವಾಗಿದ್ದರೆ ಅಥವಾ ಬಳಕೆಯಾಗದಿದ್ದರೆ, ಬ್ಯಾಂಕ್ ಗ್ರಾಹಕರನ್ನು ಇಮೇಲ್ ಅಥವಾ ಫೋನ್ ಮೂಲಕ ಸಂಪರ್ಕಿಸುವ ಪ್ರಯತ್ನ ಮಾಡುತ್ತದೆ. ಆದರೆ, ಅನೇಕ ಬಾರಿ ಅವರು ಸಂಪರ್ಕಿಸಲು ಸಾಧ್ಯವಾಗದ ಸಂದರ್ಭಗಳೇ ಹೆಚ್ಚು. ಗ್ರಾಹಕರ ಸಂಪರ್ಕ ಸಂಖ್ಯೆ ಅಥವಾ ವಿಳಾಸ ಬದಲಾವಣೆಯಾಗುವುದೇ ಇದಕ್ಕೆ ಕಾರಣ. ಕೆಲವು ಸಂದರ್ಭಗಳಲ್ಲಿ ಖಾತೆದಾರ ಸಾವನ್ನಪ್ಪಿ, ಆತನಿಗೆ ಸಂಬಂಧಿಸಿದ ಹಣಕಾಸಿನ ಹೂಡಿಕೆಗಳ ಬಗ್ಗೆ ಯಾರಿಗೂ ಮಾಹಿತಿಯೇ ಇಲ್ಲದಿದ್ದಾಗ ನಾಮಿನಿಗಳನ್ನು ಸಂಪರ್ಕಿಸುವುದು ನಿಜಕ್ಕೂ ಸರ್ಕಸ್. ಬ್ಯಾಂಕ್‌ನವರು ನೋಡುವಷ್ಟು ನೋಡಿ, 10 ವರ್ಷಗಳ ನಂತರ ಆ ಮೊತ್ತವನ್ನು DEAF ಖಾತೆಗೆ ವರ್ಗಾಯಿಸುತ್ತಾರೆ. ನೀವೇ ನಾಮಿನಿಯಾಗಿದ್ದರೆ ಹೀಗೆ ಮಾಡಿ...

ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ನಿಮ್ಮ ಅಥವಾ ನಿಮ್ಮ ಸಂಬಂಧಿಕರ ಹೆಸರು ಪತ್ತೆಯಾದರೆ, ಕ್ಲೇಮ್ ಫಾರ್ಮ್ ಭರ್ತಿ ಮಾಡಬೇಕು. ಈ ಅರ್ಜಿಗಳು ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕ್‌ಗೆ ಭಿನ್ನವಾಗಿರುತ್ತದೆ. ಈ ಅರ್ಜಿಯ ಜತೆಗೆ ನೀವು 'ಕೆವೈಸಿ' ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಗತ್ಯ ದಾಖಲೆಗಳನ್ನೂ ಒದಗಿಸಬೇಕು. ಅಲ್ಲದೆ, ಖಾತೆದಾರರ ಮರಣ ಪ್ರಮಾಣಪತ್ರ ಮತ್ತು ಅವರ ಗುರುತಿನ ಚೀಟಿ ದಾಖಲೆಗಳನ್ನು ಸಲ್ಲಿಸುವುದು ಮುಖ್ಯ. ಬ್ಯಾಂಕ್ಗಳು ದಾಖಲೆಗಳನ್ನು ಪರಿಶೀಲಿಸಿ, 15 ದಿನಗಳಲ್ಲಿ ಕ್ಲೇಮ್‌ಗಳನ್ನು ಇತ್ಯರ್ಥಪಡಿಸುತ್ತವೆ.

**ಹಳೇ ಖಾತೆಗಳ ದಾಖಲೆ ಮುಖ್ಯ**

'ಹಳೇ ಖಾತೆಗಳ ಸಂಬಂಧಿತ ದಾಖಲೆಗಳನ್ನು ಪೂರೈಸಿದರೆ, ಅನ್‌ಕ್ಲೈಮ್ಡ್ ಠೇವಣಿಯನ್ನು ಸುಲಭವಾಗಿ ಪಡೆಯಬಹುದು," ಎನ್ನುತ್ತಾರೆ ನಿವೃತ್ತ ಬ್ಯಾಂಕ್ ಅಧಿಕಾರಿ ಬಿ.ಎನ್. ಭರತ್. ಅವರ ಪ್ರಕಾರ

- ನಿಧನರಾದ ವ್ಯಕ್ತಿಗಳ ಹಳೇ ಖಾತೆಗಳ ಬಗ್ಗೆ ಮನೆಯಲ್ಲಿ ಏನಾದರೂ ವಿವರ ಅಂದರೆ ಪಾಸ್ ಪುಸ್ತಕದ ಪ್ರತಿ ಅಥವಾ ಎಲ್ಲಿಯಾದರೂ



ಬರೆದಿಟ್ಟಿದ್ದ ಖಾತೆಯ ಸಂಖ್ಯೆ ಅಥವಾ ಠೇವಣಿಯ ರಶೀದಿಯ ಪ್ರತಿ ಅಥವಾ ಗುರುತಿನ ಚೀಟಿ ವಿವರಗಳು ಸಿಕ್ಕರೆ ಅದನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ನೀಡಬೇಕು. ಠೇವಣಿಯ ಮೊತ್ತವನ್ನು ಹಿಂಪಡೆಯುವ ಪ್ರಕ್ರಿಯೆ ಇದರಿಂದ ಆರಂಭಿಸಬಹುದು.
- ತೀರಾ ಹಳೇ ಖಾತೆಗಳಲ್ಲಿ ಖಾತೆದಾರರ ಗುರುತಿನ ಸಂಖ್ಯೆಗಳು ದಾಖಲಾಗಿರುವುದಿಲ್ಲ. ಮನೆಯ ಹತ್ತಿರ ಅಥವಾ ಸ್ವಂತ ಊರಿನ ಹತ್ತಿರವಿರುವ ಅಥವಾ ಕೆಲಸ ಮಾಡುವ ಸ್ಥಳದ ಸಮೀಪದ ಬ್ಯಾಂಕು ಶಾಖೆಗಳನ್ನು ಸಂಪರ್ಕಿಸಿ ಮೃತಪಟ್ಟ ವ್ಯಕ್ತಿಯ ಹೆಸರು ಮತ್ತು ವಿಳಾಸ ನೀಡಿ ಯಾವುದಾದರೂ ಖಾತೆಗಳಿವೆಯೇ ಎಂದು ಹುಡುಕಿಸಬಹುದು.
- ಮೇಲೆ ಹೇಳಿದ ವಿವರಗಳನ್ನು ಸಮೀಪದ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಚೇರಿಗಳಿಗೆ ನೀಡಿ ಅಲ್ಲಿಯೂ ಖಾತೆಗಳ ಬಗ್ಗೆ ವಿಚಾರಿಸಬಹುದು. ಅವರು ಅದನ್ನು ಸಂಬಂಧಪಟ್ಟ ಬ್ಯಾಂಕುಗಳಲ್ಲಿ ಪರಿಶೀಲಿಸುತ್ತಾರೆ.

**ಎಲ್‌ಐಸಿಯ 21,500 ಕೋಟಿ ಹಣಕ್ಕೆ ದಿಕ್ಕೇ ಇಲ್ಲ!**

ಸರಕಾರಿ ವಿಮಾ ಕಂಪನಿ ಎಲ್‌ಸಿಯಲ್ಲಿ ಯಾವುದೇ ಹಕ್ಕುದಾರರಿಲ್ಲದ ಸುಮಾರು 21,500 ಕೋಟಿ ರೂ. ಹಣವಿದೆ ಎಂದು ಭಾರತೀಯ ಜೀವ ವಿಮಾ ನಿಗಮ ತಿಳಿಸಿದೆ. ನಿಗಮವು ಐಪಿಒ ಪ್ರವೇಶಿಸಿದ್ದ ಸಂದರ್ಭದಲ್ಲಿ ಈ ಮಾಹಿತಿಯನ್ನು ಬಹಿರಂಗಪಡಿಸಿತ್ತು. ಮೆಚ್ಯೂರಿಟಿಯಾಗಿ 10 ವರ್ಷಗಳ ನಂತರವೂ ಈ ಹಣ ಪಡೆಯಲು ಯಾರೂ ಮುಂದೆ ಬಂದಿಲ್ಲ. ಕಂತುಗಳನ್ನು ಕಟ್ಟಲಾಗದೆ, ಅರ್ಧಕ್ಕೆ ವಿಮಾ ಪಾಲಿಸಿ ನಿಲ್ಲಿಸಿದವರ ಹಣವೂ ಒಳಗೊಂಡಿದೆ. ಆದರೆ, ಈ ಹಣ ಸುರಕ್ಷಿತವಾಗಿದೆ. ಪಾಲಿಸಿ ಐಡಿ ಸಂಖ್ಯೆ ಇದ್ದರೆ ಪಾಲಿಸಿದಾರರ ಕ್ಲೈಮ್ ಮಾಡದ ಮೊತ್ತವನ್ನು ಎಲ್‌ಸಿಯ ವೆಬ್‌ಸೈಟ್‌ನಲ್ಲಿ ಪತ್ತೆಹಚ್ಚಬಹುದು.

# ಪ್ರಗತಿ ಪಥದಲ್ಲಿ ಸಾಗುತ್ತಿರುವ ಮರ್ಚಂಟ್ಸ ಲಿಬರಲ್ ಕೊ–ಆಪ್ ಬ್ಯಾಂಕ ಲಿ., ಗದಗ

## ಎಪ್ರಿಲ್ 20, 2023 ರಂದು ಬ್ಯಾಂಕು 58 ವಸಂತಗಳನ್ನು ಪೂರೈಸಿದೆ (ಬ್ಯಾಂಕಿನ ಸಂಸ್ಥಾಪನಾ ದಿನದ ನಿಮಿತ್ಯ ಲೇಖನ)

▸▸ ರಾಜು ಎಲ್.ಕೋಟಿ, ಪ್ರಧಾನ ವ್ಯವಸ್ಥಾಪಕರು, ಮರ್ಚಂಟ್ಸ ಲಿಬರಲ್ ಕೋ–ಆಪ್ ಬ್ಯಾಂಕ ಲಿ., ಗದಗ

ಸಹಕಾರೀ ರಂಗದಲ್ಲಿ ಏಶಿಯಾದಲ್ಲಿಯೇ ಪ್ರಥಮ ಸಹಕಾರಿ ಸಂಘ ನಿರ್ಮಾಣದ ಖ್ಯಾತಿಗೆ ಹೆಸರಾದ ಗದಗ ಜಿಲ್ಲೆಯಲ್ಲಿ 1965 ರಲ್ಲಿ ಗದುಗಿನ ಲಿಂ. ಚನಬಸಪ್ಪ ವಿರುಪಾಕ್ಷಪ್ಪ ಕತ್ತಿ ಹಾಗೂ ಲಿಂ. ಬಸವಣ್ಣೆಪ್ಪ ಗುರಪ್ಪ ಅಂಗಡಿ ಇವರ ಕನಸಿನ ಹಸುಗೂಸಾಗಿ ಮರ್ಚಂಟ್ಸ ಲಿಬರಲ್ ಕೊ–ಆಪ್ ಸೊಸಾಯಿಟಿ ನಿ ಗದಗ ಇದು ನನಸಾಗಿ ಹೊರಹೊಮ್ಮಿತು. ಇವರಿಬ್ಬರು ಮಹಾನುಭಾವರು ವೈಯುಕ್ತಿಕವಾಗಿ ವ್ಯಾಪಾರಿ ರಂಗದಲ್ಲಿ ಹೆಸರುವಾಸಿಯಾಗಿದ್ದು ಕೇವಲ ತಮ್ಮ ವೈಯಕ್ತಿಕ ವ್ಯವಹಾರದಲ್ಲಿ ಮುಂದುವರೆಯದೇ, ಚಿಕ್ಕಪುಟ್ಟ ವ್ಯಾಪಾರಸ್ಥರು ಅನುಭವಿಸುತ್ತಿರುವ ಆರ್ಥಿಕ ಹಣಕಾಸಿನ ಮುಗ್ಗಟ್ಟು ಮತ್ತು ಆ ದಿಶೆಯಲ್ಲಿ ಅವರು ಮುಂದುವರೆಯಬೇಕು, ಆರ್ಥಿಕ ಪ್ರಭಲತೆಯೊಂದಿಗೆ ವ್ಯಾಪಾರ ಅಭಿವೃದ್ಧಿಯಾಗಬೇಕು ಎಂಬ ಹಲವಾರು ಧೇಯೋಧ್ಯೇಶಗಳ ಅಡಿಯಲ್ಲಿ ಸಮಾನ ಮನಸ್ಕ ಸ್ನೇಹಿತರ ಸಹಕಾರದೊಂದಿಗೆ ದಿನಾಂಕ 20.04.1965 ರಂದು ಮೈಸೂರು ಸಹಕಾರಿ ಸಂಘಗಳ ಕಾಯ್ದೆಗಳ ಮೇರೆಗೆ ನೋಂದಾಯಿಸಲ್ಪಟ್ಟು ದಿನಾಂಕ 01–07–1965 ರಿಂದ ತಮ್ಮ ಕನಸಿನ ಕೂಸಿಗೆ ಜೀವ ನೀಡಿದರು. ಅದರ ಫಲಶ್ರುತಿಯಾಗಿ ಮರ್ಚಂಟ್ಸ ಲಿಬರಲ್ ಕೊ–ಆಪ್ ಸೊಸಾಯಿಟಿ ನಿ ಗದಗ ಇದು ಕೇವಲ 101 ಸದಸ್ಯರನ್ನು ಹೊಂದಿ ಕೇವಲ ರೂ.5,000/– ಗಳ ಮೂಲ ಬಂಡವಾಳದೊಂದಿಗೆ ಗದುಗಿನ ವಿಠ್ಠಲ ಮಂದಿರದ ಅಟ್ಟದ ಮೇಲೆ ಕಾರ್ಯಾರಂಭ ಮಾಡಿತು. ಪ್ರಥಮ ವ್ಯವಸ್ಥಾಪಕರಾಗಿ ವೀರಪ್ಪ ಜಿ. ಮಂಟೂರ ಇವರು ಸೇವೆಗೈದರು.

ಸಂಸ್ಥಾಪಕರ ಅಪಾರ ಆಸಕ್ತಿ, ನಿರ್ದೇಶಕ ಮಂಡಳಿಯ ಪ್ರೋತ್ಸಾಹ, ಶೇರುದಾರರ ಪ್ರೊತ್ಸಾಹ, ಠೇವುದಾರರ ಸಹಕಾರ, ಗ್ರಾಹಕರ ಸಂಪೂರ್ಣ ಬೆಂಬಲದೊಂದಿಗೆ ಕೇವಲ ಹತ್ತು ವರ್ಷಗಳಲ್ಲಿ ಅಪಾರವಾದ ಪ್ರಗತಿಯನ್ನು ಈ ಸಂಸ್ಥೆ ಸಾಧಿಸಿತು. ಇದರ ಪರಿಣಾಮವಾಗಿ ಭಾರತೀಯ ರಿಜರ್ವ ಬ್ಯಾಂಕಿನ ಕಕ್ಷೆಯಲ್ಲಿ 1976ನೇ ಎಪ್ರಿಲ್ 1 ರಿಂದ ದಿ ಮರ್ಚಂಟ್ಸ ಲಿಬರಲ್ ಕೋ–ಆಪ್ ಬ್ಯಾಂಕ ಲಿ., ಗದಗ ಆಗಿ ಪರಿವರ್ತನೆಗೊಂಡು ಅಂದಿನಿಂದ ಇಂದಿನವರೆಗೆ ಬ್ಯಾಂಕು ಹಿಂದಿರುಗಿ ನೋಡಿದ್ದೇ ಇಲ್ಲ. ಅಲ್ಲಿಂದ ಬ್ಯಾಂಕಿನ ಕಾರ್ಯ ಕಲಾಪಗಳು ದಾಪುಗಾಲು ಹಾಕುತ್ತಾ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದ್ದು ಈ ಬ್ಯಾಂಕಿನ ವಿಶೇಷತೆ. ಅಧಿಕ ಪ್ರಮಾಣದ ಶೇರು ಸಂಗ್ರಹಣೆ, ಮಧ್ಯಮ ಹಾಗೂ ಚಿಕ್ಕ ಪ್ರಮಾಣದ ವ್ಯಾಪಾರಸ್ಥರಿಗೆ ಆದ್ಯತಾ ವಲಯಗಳಿಗೆ ಸಾಲ ಸೌಲಭ್ಯ ಇವೆಲ್ಲವುಗಳನ್ನು ಗಮನಿಸಿ, ಭಾರತೀಯ ರಿಜರ್ವ ಬ್ಯಾಂಕ 1986ರ ಡಿಸೆಂಬರ್ 10 ರಂದು ಬ್ಯಾಂಕಿಂಗ ಲೈಸೆನ್ಸ್ ನೀಡಿತು. ತನ್ಮೂಲಕ ಸಹಕಾರಿ ಸಂಘಗಳ ಕಾಯ್ದೆ



ಹಾಗೂ ಭಾರತೀಯ ರಿಜರ್ವ ಬ್ಯಾಂಕಿನ ಕಾನೂನುಗಳಿಗೆ ಒಳಪಟ್ಟಿತು.

ಗ್ರಾಹಕರ ಅನುಕೂಲಕ್ಕಾಗಿ ಶ್ರೀ ವಿಠ್ಠಲ ಮಂದಿರದ ಅಟ್ಟದ ಮೇಲಿದ್ದ ಕಛೇರಿಯನ್ನು ಗದಗ ಗ್ರೇನ ಮಾರ್ಕೆಟ್ಟಿನಲ್ಲಿರುವ ನಗರಸಭೆ ಕಟ್ಟಡಕ್ಕೆ 9–10–1987 ರಂದು ಸ್ಥಳಾಂತರಿಸಲಾಯಿತು.

ಸೇವೆಯ ಹರವು ವಿಶಾಲವಾದಂತೆ, ಗ್ರಾಹಕರ ಜನದಟ್ಟಣೆ ಹೆಚ್ಚಿದಂತೆ, ನಿರ್ದೇಶಕ ಮಂಡಳಿಯವರು ಈಗಿನ ಮಕಾನಗಲ್ಲಿಯಲ್ಲಿರುವ ಕಟ್ಟಡವನ್ನು ಖರೀದಿಸಿ 1995 ಎಪ್ರಿಲ್ 1 ರಿಂದ ಸ್ವಂತ ಕಟ್ಟಡಕ್ಕೆ ಕಛೇರಿ ಸ್ಥಳಾಂತರ ಗೊಂಡಿತು. ಮುಂಬರುವ ದಿನಗಳಲ್ಲಿ ಗ್ರಾಹಕರ ಸೇವೆಗೆ ಈ ಕಟ್ಟಡ ಅಡಚಣಿಯಾಗಬಾರದು ಎಂಬ ಸದುದ್ದೇಶದಿಂದ ಬ್ಯಾಂಕಿನ ಪೂರ್ವ ಭಾಗಕ್ಕಿರುವ ಖಾಲಿ ನಿವೇಶನವನ್ನು ಖರೀದಿಸಲಾಯಿತು. ಅದರೊಂದಿಗೆ ಬ್ಯಾಂಕಿನ ಸೇವಾ ವ್ಯಾಪ್ತಿ ಕೂಡಾ ವಿಸ್ಥರಿಸಲ್ಪಟ್ಟಿತು. ಇದರ ಫಲಶೃತಿಯಾಗಿ, ಗದಗ ಜಿಲ್ಲೆಯಾದ ನಂತರ ಬ್ಯಾಂಕಿನ ವ್ಯವಹಾರ ಇಮ್ಮಡಿಯಾಗಿ ನಗರದಲ್ಲಿ ಎಲ್ಲಾ ಬಡಾವಣೆಗಳಲ್ಲಿ ವಾಸವಾಗಿರುವ ಗ್ರಾಹಕರಿಗೆ ತೊಂದರೆಯಾಗಬಾರದು ಎಂಬ ಸದುದ್ದೇಶದಿಂದ ನಿರ್ದೇಶಕ ಮಂಡಳಿಯವರು ಗದುಗಿನ ಎ.ಪಿ.ಎಂ.ಸಿ ಯಾರ್ಡಿನಲ್ಲಿ ಒಂದು ಹಾಗೂ ಬೆಟಗೇರಿಯ ಗ್ರಾಹಕರ ಸೇವೆಗಾಗಿ ಬೆಟಗೇರಿಯಲ್ಲಿ ಒಂದು, ಹೀಗೆ ಎರಡು ಶಾಖೆಗಳನ್ನು ತೆರೆಯಬೇಕೆಂದು ನಿರ್ಧರಿಸಿತು. ಅದರಂತೆ ದಿನಾಂಕ 11–08–2002 ರಂದು ಎ.ಪಿ.ಎಂಸಿ ಯಾರ್ಡಿನಲ್ಲಿ ಹಾಗೂ ಬೆಟಗೇರಿ ಪಾಲಾಬದಾಮಿ ರಸ್ತೆಯಲ್ಲಿ ಹೀಗೆ ಎರಡು ಶಾಖೆಗಳನ್ನು ಒಂದೇ ದಿವಸ ಪ್ರಾರಂಭಿಸಲಾಯಿತು.

ಅದೇ ರೀತಿಯಾಗಿ ಫೆಬ್ರುವರಿ 2014 ರಂದು ಹಾಗೂ ಮಾರ್ಚ 2014 ರಂದು ಕ್ರಮವಾಗಿ ಗಜೇಂದ್ರಗಡ ಹಾಗೂ ಲಕ್ಷ್ಮೇಶ್ವರ ನಗರಗಳಲ್ಲಿ ಬ್ಯಾಂಕಿನ 4 ಮತ್ತು 5ನೇ ಶಾಖೆಗಳನ್ನು ಪ್ರಾರಂಭಿಸಲಾಯಿತು. ಈ ಹಿಂದೆ 2001 ರಲ್ಲಿ ಖರೀದಿಸಲಾದ ಎ.ಪಿ.ಎಂ.ಸಿ ಯಾರ್ಡಿನಲ್ಲಿಯ ನಿವೇಶನದಲ್ಲಿ ಬ್ಯಾಂಕಿನ ಸುಸಜ್ಜಿತ ಕಟ್ಟಡವನ್ನು ನಿರ್ದೇಶಕ ಮಂಡಳಿಯ ಸರ್ವರೀತಿಯ ಸಹಕಾರದಿಂದ ನಿರ್ಮಿಸಿ ಅಲ್ಲಿಯೇ ಬ್ಯಾಂಕು ಸ್ವಂತ ಕಟ್ಟಡವನ್ನು ಹೊಂದಿ ಗದುಗಿನ ಎ.ಪಿ.ಎಂ.ಸಿ ಯಾರ್ಡಿನಲ್ಲಿಯ ವ್ಯಾಪಾರಸ್ಥರಿಗೆ ಅನುಕೂಲತೆ ಒದಗಿಸಿತು. ಅದೇ ರೀತಿಯಾಗಿ ಏಪ್ರಿಲ್ 2015 ರಂದು ಬೆಟಗೇರಿಯಲ್ಲಿ ಬ್ಯಾಂಕಿನ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿ ಬೆಟಗೇರಿ ಬಾಗದ ಜನರ ಬಹುದಿನದ ಆಸೆಯನ್ನು ಬ್ಯಾಂಕಿನ ನಿರ್ದೇಶಕ ಮಂಡಳಿಯು ಈಡೇರಿಸಿತು. ಯಾವ ರಾಷ್ಟ್ರೀಕೃತ ಬ್ಯಾಂಕುಗಳಿಗೂ ಕಡಿಮೆ ಇಲ್ಲದಂತೆ ಬ್ಯಾಂಕಿನ ಮುಖ್ಯ ಕಛೇರಿಯನ್ನು ನವೀಕರಿಸಲಾಗಿದೆ.

ರಿಜರ್ವ ಬ್ಯಾಂಕಿನ ಆದೇಶಕ್ಕೆ ಅನುಗುಣವಾಗಿ ಹಾಗೂ ಬ್ಯಾಂಕಿನ ಗ್ರಾಹಕರ ಅವಶ್ಯಕತೆಗಳನ್ನು ಮನಗಂಡು ಬ್ಯಾಂಕು ಜಾಮೀನು ಸಾಲ, ಪಗಾರ ಸಾಲ, ಕ್ಯಾಶ ಕ್ರೆಡಿಟ್ ಸಾಲ, ಯಂತ್ರೋಪರಣ ಖರೀದಿಗಾಗಿ ಸಾಲ, ಗೃಹೋಪಯೋಗಿ ಸರಕುಗಳ ಖರೀದಿಗಾಗಿ ಸಾಲ, ಓವರ ಡ್ರಾಫ್ಟ ಸಾಲ, ಎನ್.ಎಸ್.ಸಿ ಮೇಲಿನ ಸಾಲ, ವಾಹನ ಖರೀದಿಗಾಗಿ ಸಾಲ, ಉಗ್ರಾಣ ರಶೀದಿ ಮೇಲೆ ಸಾಲ, ಆಸ್ತಿ ಭದ್ರತೆಯ ಮೇಲೆ ಸಾಲ, ಮನೆ ಕಟ್ಟುವ ಸಲುವಾಗಿ ಸಾಲ, ಬಂಗಾರದ ಮೇಲೆ ಸಾಲ ಹೀಗೆ ಹತ್ತು ಹಲವಾರು ಉದ್ದೇಶಗಳಿಗಾಗಿ ಸಾಲ ಸೌಲಭ್ಯ ಗಳನ್ನು ಕಲ್ಪಿಸಿದಲ್ಲದೆ ಸದರಿ ಸಾಲದ ಬಡ್ಡಿ ದರಗಳು ಸದಸ್ಯರಿಗೆ, ಗ್ರಾಹಕರಿಗೆ ಹೊರೆಯಾಗಬಾರದೆಂದು ಅತ್ಯಂತ ಕಡಿಮೆ ದರದಲ್ಲಿ ಕೊಡುವುದರ ಮೂಲಕ ಸಾವಿರಾರು ಕುಟುಂಬಗಳಿಗೆ ಚೈತನ್ಯ ನೀಡಿದೆ. ಇದಲ್ಲದೇ ಬ್ಯಾಂಕಿನ ಠೇವುದಾರರಿಗೆ ಬೇರೆ ಯಾವುದೇ ಸಹಕಾರಿ ಬ್ಯಾಂಕುಗಳು ನೀಡುವ ಬಡ್ಡಿಗಿಂತ ಹೆಚ್ಚಿನ ಬಡ್ಡಿಯನ್ನು ಈ ಬ್ಯಾಂಕು ನೀಡುತ್ತಾ ಇರುವುದು ವಿಶೇಷ ಸಂಗತಿಯಾಗಿದೆ.

1965 ರಲ್ಲಿ ಕೇವಲ 101 ಸದಸ್ಯರಿಂದ ಕಾರ್ಯ ಪ್ರಾರಂಭಿಸಿದ ಬ್ಯಾಂಕಿನ ಸದಸ್ಯರ ಸಂಖ್ಯೆ ಇಂದು ಸುಮಾರು 9,310 ಜನ ಸದಸ್ಯರನ್ನು ಹೊಂದಿರುತ್ತದೆ.

ಸಂಸ್ಥಾಪಕರು



ಲಿಂ. ಶ್ರೀ ಚನಬಸಪ್ಪ ವಿರುಪಾಕ್ಷಪ್ಪ ಕತ್ತಿ

ಮುಖ್ಯ ಪ್ರವರ್ತಕರು



ಲಿಂ. ಶ್ರೀ ಬಸವಣ್ಣೆಪ್ಪ ಗುರಪ್ಪ ಅಂಗಡಿ

ದಿನಾಂಕ 31-03-2023 ಕ್ಕೆ ಬ್ಯಾಂಕಿನ ದುಡಿಯುವ ಬಂಡವಾಳ 171 ಕೋಟಿ 77 ಲಕ್ಷ ಇರುತ್ತದೆ. ಬ್ಯಾಂಕಿನ ತೆರಿಗೆ ಮುನ್ನ ಲಾಭ ರೂ. 3.69 ಕೋಟಿ ಆಗಿದ್ದು, ನಿವ್ವಳ ಲಾಭ ರೂ. 2.06 ಕೋಟಿ ಆಗಿರುತ್ತದೆ. ಬ್ಯಾಂಕಿನ ಗ್ರಾಹಕರಿಗೆ ಅತ್ಯಂತ ಆಕರ್ಷಕ ಬಡ್ಡಿದರಗಳನ್ನು ನಿಗದಿಪಡಿಸಿದ್ದು, ವಾಹನಸಾಲ (ಕಾರು, ಸ್ವಂತ ಉಪಯೋಗಕ್ಕೆ) ಮೇಲೆ ಶೇ.8.50 ಹಾಗೂ ಬಂಗಾರ ಆಭರಣ ಸಾಲ ಶೇ. 8.50, ಮನೆ ಕಟ್ಟುವ ಸಾಲ ಶೇ.8.90, ಸಿ.ಸಿ.ಭದ್ರತೆ ಸಾಲ ಶೇ.10 ರಿಂದ 11 ಆಕರ್ಷಕ ಕಡಿಮೆ ಬಡ್ಡಿದರಗಳಿದ್ದು ಗ್ರಾಹಕರು ಇದರ ಸದುಪಯೋಗ ಪಡೆಯಬೇಕು.

ಮರ್ಚಂಟ್ಸ ಲಿಬರಲ್ ಕೊ-ಆಪ್ ಬ್ಯಾಂಕ ಲಿ., ಗದಗ ಇವರ ಸೇವೆ ಕೇವಲ ಬ್ಯಾಂಕಿಂಗ ಕ್ಷೇತ್ರಕ್ಕಾಗಿ ಮಾತ್ರ ಮೀಸಲಾಗಿರದೇ ಸಾಮಾಜಿಕ ಕಳಕಳಿಯಿಂದ ಸಾಮೂಹಿಕ ಕಾರ್ಯಕ್ರಮಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ ಕ್ರೀಡಾ ಕ್ಷೇತ್ರಕ್ಕೆ, ಹಾಗೂ ಧಾರ್ಮಿಕ ಸಂಘ ಸಂಸ್ಥೆಗಳಿಗೆ ದೇಣಿಗೆ ನೀಡುವ ಮೂಲಕ ಸಮಾಜದ ಇತರ ಕ್ಷೇತ್ರಗಳಲ್ಲಿ ಕೂಡಾ ಬ್ಯಾಂಕು ತನ್ನ ಪಾತ್ರವನ್ನು ವಿಸ್ತರಿಸಿಕೊಂಡಿದೆ. ಪ್ರತಿವರ್ಷ ಸಹಕಾರಿ ಸಪ್ತಾಹ ದಿನಾಚರಣೆಯಲ್ಲಿ ಸದಸ್ಯತ್ವ ಪಡೆದು ಒಂದು ವರ್ಷ ಪೂರ್ತಿ ಆದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರತಿಶತ 90% ಮತ್ತು ಅದಕ್ಕಿಂತ ಹೆಚ್ಚಿಗೆ ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ರೂ. 2,000/-ಗಳ ನಗದು ಬಹುಮಾನ, ಪಿ.ಯು.ಸಿ ಪರೀಕ್ಷೆಯಲ್ಲಿ 90% ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ರೂ. 2,500/- ಗಳ ನಗದು ಬಹುಮಾನ, ಹಾಗೂ ಬಿ.ಎ./ಬಿ.ಕಾಂ/ಬಿ.ಎಸ್.ಸಿ.,/ಬಿ..ಸಿ.ಎ.,ಪದವಿ ಹಾಗೂ ಎಂ.ಎ./ಎಂ.ಕಾಂ/ಎಂ.ಎಸ್.ಸಿ./ಎಂ.ಸಿ.ಎ., ಸ್ನಾತಕೋತ್ತರ ಪದವಿಯಲ್ಲಿ 90% ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ರೂ. 3,000/- ಪ್ರೋತ್ಸಾಹ ಧನ ನಿಡಿ ಪುರಸ್ಕರಿಸಲಾಗುತ್ತಾ ಬಂದಿದೆ. ಬ್ಯಾಂಕಿನ ಸದಸ್ಯರು ಮರಣಹೊಂದಿದ ಸಂದರ್ಭಗಳಲ್ಲಿ ಸದಸ್ಯರ ಕಲ್ಯಾಣ ನಿಧಿಯಿಂದ ಅಂತಿಮ ಸಂಸ್ಕಾರಕ್ಕೆ ರೂ. 2,500/- ಗಳನ್ನು ಅವರ ಸಮೀಪದ ಸಂಭಂದಿಗಳಿಗೆ ನೀಡುತ್ತಾ ಬಂದಿದೆ. ಬ್ಯಾಂಕಿನ ಸದಸ್ಯರು ಅಕಾಲಿಕವಾಗಿ ಮರಣ ಹೊಂದಿದಲ್ಲಿ

ಅಂತಹ ಸದಸ್ಯನ ಸಮೀಪದ ಸಂಭಂದಿಗಳಿಗೆ ವಿಮಾ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡ ನಿಯಮಗಳ ಪ್ರಕಾರ ಒಂದು ಲಕ್ಷ ರೂಪಾಯಿ ಪರಿಹಾರ ವಿಮೆ ಕೊಡಲಾಗುವದು ಮತ್ತು ಶಾಶ್ವತವಾಗಿ ಅಂಗವಿಕಲ ಆದಲ್ಲಿ ಒಡಂಬಡಿಕೆ ನಿಯಮಗಳ ಪ್ರಕಾರ ವಿಮಾ ಕಂಪನಿಯಿಂದ ಆರ್ಥಿಕ ಸಹಾಯ ಒದಗಿಸಲಾಗುವದು. ಜಾಗತೀಕರಣದ ಈ ಹೊಸ ಯುಗದಲ್ಲಿ, ನಿರ್ದೇಶಕರ ಇಚ್ಛೆಯಂತೆ ಗ್ರಾಹಕರಿಗೆ ತ್ವರಿತವಾಗಿ ಸೇವೆ ನೀಡುವ ಸದುದ್ದೇಶದಿಂದ ಬ್ಯಾಂಕಿನ ಎಲ್ಲ ಕಾರ್ಯಕಲಾಪಗಳನ್ನು ಗಣಕೀಕರಣಗೊಳಿಸಲಾಗಿದೆ.

1997 ರಲ್ಲಿಯೇ ಬ್ಯಾಂಕಿನ ಎಲ್ಲ ಸಿಬ್ಬಂದಿಗಳಿಗೆ ತರಬೇತಿ ನೀಡಿ, ಗದುಗಿನಲ್ಲಿ ಗಣಕೀಕರಣ ಗೊಂಡ ಪ್ರಥಮ ಪಟ್ಟಣ ಸಹಕಾರಿ ಬ್ಯಾಂಕ ಎಂಬ ಹೆಗ್ಗಳಿಕೆ ಪಾತ್ರವಾಗಿದೆ. ಬೆಟಗೇರಿ ಶಾಖೆಯಲ್ಲಿ ಇ–ಸ್ವಾಂಪಿಂಗ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದು ಆ ಭಾಗದ ಜನರಿಗೆ ಅನುಕೂಲತೆ ಕಲ್ಪಿಸಲಾಗಿದೆ. ಗ್ರಾಹಕರ ಹೆಚ್ಚಿನ ಅನುಕೂಲತೆಗಾಗಿ ಮುಖ್ಯ ಕಛೇರಿ, ಮಸಾರಿ ಶಾಖೆ, ಬೆಟಗೇರಿ, ಗಜೇಂದ್ರಗಡ ಹಾಗೂ ಲಕ್ಷ್ಮೇಶ್ವರ ಶಾಖಾ ಕಛೇರಿಗಳನ್ನೊಳಗೊಂಡಂತೆ ಕೋರ ಬ್ಯಾಂಕಿಂಗ, ಆರ್.ಟಿ.ಜಿ.ಎಸ್. ಸೇವೆ ಹಾಗೂ ಎಸ್.ಎಮ್.ಎಸ್. ಅಲರ್ಟ ಸೇವೆಯನ್ನು ಕಾರ್ಯಗತಗೊಳಿಸಲಾಗಿದೆ. ಅತೀ ಶೀಘ್ರದಲ್ಲಿ ಇಂಟರನೆಟ್, ಹಾಗೂ ಎ.ಟಿ.ಎಮ್ ಸೌಲಭ್ಯ ಒದಗಿಸಲಾಗುವದು. ಈ ದಿಶೆಯಿಂದಾಗಿ ಬ್ಯಾಂಕು ಇಂದು ಪ್ರಾಂತೀಯ ಮಟ್ಟ ಮೀರಿ ಗದಗ ಜಿಲ್ಲೆಯನ್ನೊಳಗೊಂಡು ವಿವಿಧ ಜಿಲ್ಲೆಗಳಾದ ಧಾರವಾಡ, ಹಾವೇರಿ, ಕೊಪ್ಪಳ, ಬಾಗಲಕೋಟೆ, ಬೆಳಗಾವಿ, ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸಲು ರಿಜರ್ವ ಬ್ಯಾಂಕಿನಿಂದ ಅನುಮತಿ ಪಡೆದಿರುವುದು ಪ್ರಗತಿಯ ದ್ಯೋತಕವಾಗಿದೆ.

ಬ್ಯಾಂಕು ಸಲ್ಲಿಸಿದ ಪ್ರಾಮಾಣಿಕ ಸೇವೆಯ ದ್ಯೋತಕವಾಗಿ 2012 ನವೆಂಬರ್ 18 ರಂದು 46 ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಗದುಗಿನಲ್ಲಿ ನಡೆದ ಸಮಾರಂಭದಲ್ಲಿ "ಗದಗ ಜಿಲ್ಲೆಯ ಉತ್ತಮ ಸಹಕಾರಿ ಬ್ಯಾಂಕು" ಎಂದು ಪುರಸ್ಕಾರಗೊಂಡಿದೆ. ಇದಲ್ಲದೇ ರಾಷ್ಟ್ರ ಮಟ್ಟದಲ್ಲಿ ಬ್ಯಾಂಕಿಂಗ್ ಫ್ರಾಂಟಿಯರ್ಸ್ ಮುಂಬೈ ಇವರಿಂದ ಕೊಡಮಾಡಲ್ಪಡುವ "ಎಕ್ಸಲೆನ್ಸಿ ಇನ್ ಕಸ್ಟಮರ ಸರ್ವಿಸ್" ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಹಾಗೂ ರಾಷ್ಟಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿರುವುದು ಹೆಮ್ಮೆಯ ಸಂಗತಿಯಾಗಿದೆ. ಸುವರ್ಣ ವರ್ಷದ ಸಂಭ್ರಮದತ್ತ ಹೆಜ್ಜೆ ಇಡುತ್ತಿರುವ ಈ ಸಂಧರ್ಭದಲ್ಲಿ ಈ ಬ್ಯಾಂಕಿನ ಸರ್ವತೋಮುಖ ಏಳ್ಗೆಗಾಗಿ ಸೇವೆ ಸಲ್ಲಿಸಿದ ಅನೇಕ ಮಹನೀಯರ ಸೇವೆ ಸ್ಮರಣಾರ್ಹ.

ವ್ಯಾಪಾರಿ ರಂಗದಲ್ಲಿ ಅಲ್ಲದೇ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ವಲಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ದಕ್ಷರೂ, ಉತ್ಸಾಹಿಗಳೂ ಸದಾ ಕ್ರೀಯಾಶೀಲ ವ್ಯಕ್ತಿಯಾಗಿರುವ ದಿ. ಶ್ರೀ ಎಸ್.ಬಿ.ಸಂಕಣ್ಣವರ ಇವರ ಅಧ್ಯಕ್ಷತೆಯಲ್ಲಿ ಈ ಬ್ಯಾಂಕು ಹಿಂದೆಂದೂ ಕಂಡರಿಯದಂತಹ ಪ್ರಗತಿಯನ್ನು ಸಾಧಿಸಿರುವುದು ಅವರ ದೂರ ದೃಷ್ಟಿಗೆ ಹಿಡಿದ ಕನ್ನಡಿಯಾಗಿದೆ. ಇವರೊಂದಿಗೆ ಬ್ಯಾಂಕಿನ ಪ್ರಗತಿಗಾಗಿ ಸದಾ ಸ್ಪಂದಿಸುತ್ತಿರುವ ಹಾಲಿ ಅಧ್ಯಕ್ಷರಾದ ಶ್ರೀ ಮೋಹನ ಟಿ. ಕೋಟಿ ಉಪಾಧ್ಯಕ್ಷರಾದ ಶ್ರೀ ಶರಣಬಸಪ್ಪ ಕೆ. ಕುರಡಗಿ, ನಿರ್ದೇಶಕರಾದ ಶ್ರೀ ಎಸ್.ವ್ಹಿ. ಇಟಗಿ, ಶ್ರೀ ವಿಶ್ವನಾಥ ರಾಮನಕೊಪ್ಪ, ಶ್ರೀ ಮಹಾದೇವಯ್ಯ ಸಿ. ಧನ್ನೂರಹಿರೇಮಠ, ಶ್ರೀ ಕುಬೇರಗೌಡ ಎಸ್. ಪರ್ವತಗೌಡ್ರ, ಶ್ರೀ ಸಂತೋಷ ಬಿ. ಅಬ್ಬಿಗೇರಿ, ಶ್ರೀ ಪಂಚಣ್ಣ ಸಿ. ಕತ್ತಿ, ಶ್ರೀ ಚಂದ್ರಕಾಂತ ಎಸ್. ಸಂಕಣ್ಣವರ, ಶ್ರೀಮತಿ ಶಿವವ್ವ ಕೆ. ಕುರಡಗಿ, ಶ್ರೀ ತೋಟೋಸಾ ಆರ್. ಭಾಂಡಗೆ, ಶ್ರೀ ಶಿವಾನಂದ ಎಚ್. ನಡವಲಗುಡ್ಡ, ಶ್ರೀ ಬಿ.ಟಿ.ಆಸಂಗಿ, ವೃತ್ತಿಪರ ನಿರ್ದೇಶಕರಾದ ಸಿ.ಎ. ಶ್ರೀ ಬಸವರಾಜ ಬಳಗೇರಿ ಹಾಗೂ ಶ್ರೀ ಬಸವರಾಜ ಬಂದಕ್ಕನವರ ಇವರ ಸೇವೆ ಸದಾ ಅಭಿನಂದನಾರ್ಹ.

ನಮ್ಮ ಬ್ಯಾಂಕು ಐವತ್ತೆಂಟು ವಸಂತಗಳನ್ನು ಯಶ್ವಸಿಯಾಗಿ ಪೂರೈಸಿ ಮುನ್ನಡೆಯುತ್ತಿರುವ ಈ ಸುಸಂದರ್ಭದಲ್ಲಿ ಬ್ಯಾಂಕಿನ ಸರ್ವತೋಮುಖ ಏಳ್ಗೆಗಾಗಿ ಸೇವೆ ಸಲ್ಲಿಸಿದ ಮಹನೀಯರುಗಳಾದ ಬ್ಯಾಂಕಿನ ಸಂಸ್ಥಾಪಕರು ಹಾಗೂ ಮುಖ್ಯ ಪ್ರವರ್ತಕರಲ್ಲದೆ ದಿ.ಶ್ರೀ ಸಿ.ಎಮ್.ರಾಮನಕೊಪ್ಪ, ದಿ.ಶ್ರೀ ಬಿ.ಜಿ.ಅಂಗಡಿ ದಿ.ಶ್ರೀ ಎಸ್.ಬಿ.ಸಂಕಣ್ಣವರ, ದಿ.ಶ್ರೀ ಎಸ್.ಆರ್. ಪಾಲನಕರ, ದಿ.ಶ್ರೀ.ಎಲ್.ಎಸ್. ಶಿದ್ಲಿಂಗ್, ದಿ. ಶ್ರೀ. ಸಿ.ಎಂ. ಮಂಟೂರ, ದಿ.ಸಿ.ಎಸ್. ಶಾಬಾದಿಮಠ, ಶ್ರೀ ವಿ.ಬಿ. ಅಂಗಡಿ, ದಿ. ಶ್ರೀ. ವ್ಹಿ.ಡಿ. ಮಲ್ಲಾಡದ, ದಿ. ಶ್ರೀ.ವಿ.ಆರ್. ಭಂಡಿವಾಡ, ಶ್ರೀ. ಹೆಚ್.ವಿ. ಶಾನಭೋಗರ, ದಿ. ಶ್ರೀ ಜೆ.ಬಿ. ಕಾತರಕಿ, ದಿ. ಶ್ರೀ. ಶ್ರೀಶೈಲಪ್ಪ ಎಂ. ಬೇಲೇರಿ, ಶ್ರೀ. ವಿ.ಜಿ. ಶೆಟ್ಟರ್, ಶ್ರೀ. ಎಂ.ಎಸ್. ಬೇಲೇರಿ, ದಿ. ಶ್ರೀ. ಎಸ್.ಕೆ. ಅಬ್ಬಿಗೇರಿ ದಿ.ಶ್ರೀ ರಾಜಶೇಖರ ಶಿರೂರ ದಿ. ಶ್ರೀಮತಿ ಕೆ.ಆರ್.ಪಟ್ಟಣಶೆಟ್ಟಿ, ಹಾಗೂ ದಿ.ಶ್ರೀಮತಿ ಸುಮಂಗಲಾ ಎನ್.ಹೊಸಮನಿ ಇವರೆಲ್ಲರ ಸೇವೆ ಸ್ಮರಣಾರ್ಹ.

ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕರುಗಳಾದ ದಿ. ಶ್ರೀ.ವ್ಹಿ.ಜಿ. ಮಂಟೂರ, ಶ್ರೀ.ಜಿ.ಬಿ. ಅಂಗಡಿ, ಶ್ರೀ.ಬಿ.ಆರ್. ಪಾಟೀಲ್, ಶ್ರೀ.ಬಿ.ಸಿ. ಕತ್ತಿ ಶ್ರೀಮತಿ ಮಾಲಾ ಬಿ. ಹೊಸಮನಿ ಹಾಗೂ ಶ್ರೀ ಎಮ್.ಕೆ.ಹೊನಗುಡಿ ಇವರು ತಮ್ಮ ಸೇವಾ ಅವಧಿಯಲ್ಲಿ ಬ್ಯಾಂಕಿನ ಅಭಿವೃದ್ಧಿಗಾಗಿ ಮಾಡಿದ ಸೇವೆಯು ಸದಾ ಸ್ಮರಣೀಯ. ಇದರ ಜೊತೆಗೆ ಗ್ರಾಹಕರೊಂದಿಗೆ ಸ್ನೇಹ ಸಹಕಾರದೊಂದಿಗೆ ಪ್ರಾಮಾಣಿಕವಾಗಿ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿರುವ ಪ್ರಧಾನ ವ್ಯವಸ್ಥಾಪಕರಾದ ರಾಜು ಎಲ್. ಕೋಟಿ ಮುಖ್ಯ ಕಛೇರಿ ವ್ಯವಸ್ಥಾಪಕರಾದ ಪ್ರಭಾಕರ ಸಿ. ಚಳ್ಳಮರದ, ಬೆಟಗೇರಿ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ದೀಪಾ ಬಿ. ಇಂಡಿ, ಎ.ಪಿ.ಎಂ.ಸಿ. ಶಾಖಾ ವ್ಯವಸ್ಥಾಪಕರಾದ ಶ್ರೀ ಮಂಜುನಾಥ ಎ. ಸಂಕಣ್ಣವರ, ಗಜೇಂದ್ರಗಡ ಶಾಖಾ ವ್ಯವಸ್ಥಾಪಕರಾದ ಶ್ರೀ ಅಶೋಕ ವಾಯ್ ಆಸಂಗಿ ಹಾಗೂ ಲಕ್ಷ್ಮೇಶ್ವರ ಶಾಖಾ ವ್ಯವಸ್ಥಾಪಕರಾದ ಮಹಾಂತೇಶ ಎಸ್. ಮಸ್ಕಿ ಹಾಗೂ ಬ್ಯಾಂಕಿನ ಎಲ್ಲ ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಕಾರರು, ಪ್ರಮುಖವಾಗಿ ಗ್ರಾಹಕರು, ಠೇವುದಾರರು, ಶೇರುದಾರರು ಎಲ್ಲರಿಗೂ ಅಭಿನಂದನೆ ಸಲ್ಲಿಸದಿದ್ದರೆ ತಪ್ಪಾದೀತು.

ಮುಂಬರುವ ದಿನಗಳಲ್ಲಿ ಬ್ಯಾಂಕು ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದುತ್ತಾ, ಅನೇಕ ಶಾಖಾ ಕಛೇರಿಗಳನ್ನು ತೆರೆದು ಗ್ರಾಹಕರಿಗೆ ಹೆಚ್ಚಿನ ಸೇವೆ ಒದಗಿಸಲು ಹೆಚ್ಚಿನ ಪ್ರಯತ್ನ ಮಾಡಲಾಗುವುದು.

# ಮರ್ಚಂಟ್ಸ ಲಿಬರಲ್ ಕೋ-ಆಪ್ ಬ್ಯಾಂಕ ಲಿ., ಗದಗ-ಬೆಟಗೇರಿ

ಬಸವೇಶ್ವರ ಸರ್ಕಲ್, ಮಕಾನಗಲ್ಲಿ, ಗದಗ

**ಆದಾಯ ತೆರಿಗೆ ಮುನ್ನ ಲಾಭ ದಿನಾಂಕ : 31.03.2023 ಕ್ಕೆ ಇದ್ದಂತೆ ರೂ.3.69 ಕೋಟಿ**

**ಬ್ಯಾಂಕಿನ ತಾತ್ಪೂರ್ತಿಕ ಆರ್ಥಿಕ ಪಕ್ಷಿನೋಟ ದಿನಾಂಕ : 31.03.2023ಕ್ಕೆ ಇದ್ದಂತೆ (ರೂ.ಲಕ್ಷಗಳಲ್ಲಿ)**

| | | | |
|---|---|---|---|
| ವಸೂಲಾದ ಶೇರು ಬಂಡವಾಳ | 240.85 | ಕಾಯ್ದಿಟ್ಟ ವ, ಇತರ ನಿಧಿಗಳು | 2255.49 |
| ಠೇವುಗಳು | 13783.52 | ಸಾಲಗಳು | 10041.23 |
| ದುಡಿಯುವ ಬಂಡವಾಳ | 17177.13 | ಒಟ್ಟು ವ್ಯವಹಾರ | 352275.37 |
| ಒಟ್ಟು ಲಾಭ (ಆದಾಯ ತೆರಿಗೆ ಮುನ್ನ) | 369.02 | ನಿವ್ವಳ ಅನುತ್ಪಾದಕ ಆಸ್ತಿ (Net NPA) | 0% |

## ಆಡಳಿತ ಮಂಡಳಿ ನಿರ್ದೇಶಕರು


ಮೋಹನ್ ಟಿ. ಕೋಟಿ
ಅಧ್ಯಕ್ಷರು


ಶರಣಬಸಪ್ಪ ಕೆ. ಕುರಡಗಿ
ಉಪಾಧ್ಯಕ್ಷರು


ಎಸ್.ವ್ಹಿ. ಇಟಗಿ
ನಿರ್ದೇಶಕರು


ವಿಶ್ವನಾಥ ಸಿ. ರಾಮನಕೊಪ್ಪ
ನಿರ್ದೇಶಕರು


ಮಹಾದೇವಯ್ಯ ಸಿ. ಧನ್ನೂರಹಿರೇಮಠ
ನಿರ್ದೇಶಕರು


ಕುಬೇರಗೌಡ ಎಸ್.ಪರ್ವತಗೌಡ್ರ
ನಿರ್ದೇಶಕರು


ಸಂತೋಷ ಬಿ. ಅಬ್ಬಿಗೇರಿ
ನಿರ್ದೇಶಕರು


ಪಂಚಣ್ಣ ಸಿ. ಕತ್ತಿ
ನಿರ್ದೇಶಕರು


ಚಂದ್ರಕಾಂತ ಎಸ್. ಸಂಕಣ್ಣವರ
ನಿರ್ದೇಶಕರು


ಶ್ರೀಮತಿ ಶಿವವ್ವಾ ಕೆ. ಕುರಡಗಿ
ನಿರ್ದೇಶಕರು


ತೋಟೋಸಾ ಆರ್. ಭಾಂಡಗೆ
ನಿರ್ದೇಶಕರು


ಶಿವಾನಂದ ಎಚ್. ನಡವಲಗುಡ್ಡ
ನಿರ್ದೇಶಕರು


ಬೈಲಪ್ಪ ಟಿ. ಆಸಂಗಿ
ನಿರ್ದೇಶಕರು


ಸಿಎ ಬಸವರಾಜ ಎಮ್. ಬಳಗೇರಿ
ವಿಶೇಷ ಆಮಂತ್ರಿತ ನಿರ್ದೇಶಕರು


ಬಸವರಾಜ ಎಂ. ಬಂದಕ್ಕನವರ
ವಿಶೇಷ ಆಮಂತ್ರಿತ ನಿರ್ದೇಶಕರು


ರಾಜು ಎಲ್. ಕೋಟಿ
ಪ್ರಧಾನ ವ್ಯವಸ್ಥಾಪಕರು

# ದೇಶದಲ್ಲಿ ಅತಿ ಹೆಚ್ಚು ತೆರಿಗೆ ಕಟ್ಟುವವರು ಯಾರು?

## ಕಾರ್ಪೊರೇಟ್ ತೆರಿಗೆಯಲ್ಲಿ ಭಾರಿ ಪ್ರಮಾಣದ ಕಡಿತ, ಬಡವರ ಮೇಲೆ ಜಿ.ಎಸ್.ಟಿ. ಹೊಡೆತ

**ಆಕ್ಸ್‌ಫಾಮ್ ಅಧ್ಯಯನ ವರದಿಯಲ್ಲಿ ಬಹಿರಂಗ :** ದೇಶದಲ್ಲಿ ಈಗ ಇರುವ ತೆರಿಗೆ ಪದ್ಧತಿಯು ಪ್ರತಿಗಾಮಿ ಸ್ವರೂಪದ್ದು ಎಂದು ಆಕ್ಸ್‌ಫಾಮ್ ಆರೋಪಿಸಿದೆ. ಭಾರತದಲ್ಲಿ ಕಳೆದ ಹಲವು ವರ್ಷಗಳಿಂದ ಕಾರ್ಪೊರೇಟ್ ತೆರಿಗೆಯನ್ನು ಭಾರಿ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಜತೆಗೆ ಕಾರ್ಪೊರೇಟ್ ಕಂಪನಿಗಳಿಗೆ ಹಲವು ಭತ್ಯೆ ಮತ್ತು ವಿನಾಯಿತಿಗಳನ್ನು ಘೋಷಿಸಲಾಗಿದೆ. 2020–21ನೇ ಆರ್ಥಿಕ ವರ್ಷದಲ್ಲಿ ತೆರಿಗೆ ಕಡಿತ ಮತ್ತು ಭತ್ಯೆಗಳ ಕಾರಣ ಸರ್ಕಾರದ ಬೊಕ್ಕಸಕ್ಕೆ 11.03 ಲಕ್ಷ ಕೋಟಿ ಖೋತಾ ಆಗಿದೆ. ನಷ್ಟವಾದ ಈ ಆದಾಯವನ್ನು ತುಂಬಿಸಿಕೊಳ್ಳಲು ಕೇಂದ್ರ ಸರ್ಕಾರವು ಜಿಎಸ್‌ಟಿ ಮತ್ತು ಇಂಧನಗಳ ಮೇಲಿನ ಮೌಲ್ಯವರ್ಧಿತ ತೆರಿಗೆಗಳ ದರವನ್ನು ಏರಿಕೆ ಮಾಡಿದೆ ಎಂದು ಆಕ್ಸ್‌ಫಾಮ್ ವಿಶ್ಲೇಷಿಸಿದೆ.

**ಪ್ರತಿಗಾಮಿ ತೆರಿಗೆ ಪದ್ಧತಿ :** ದೇಶದಲ್ಲಿ ಈಗ ಇರುವ ತೆರಿಗೆ ಪದ್ಧತಿಯು ಪ್ರತಿಗಾಮಿ ಸ್ವರೂಪದ್ದು ಎಂದು ಆಕ್ಸ್‌ಫಾಮ್ ಆರೋಪಿಸಿದೆ. 'ಭಾರತದಲ್ಲಿ ಕಳೆದ ಹಲವು ವರ್ಷಗಳಿಂದ ಕಾರ್ಪೊರೇಟ್ ತೆರಿಗೆಯನ್ನು ಭಾರಿ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಜತೆಗೆ ಕಾರ್ಪೊರೇಟ್ ಕಂಪನಿಗಳಿಗೆ ಹಲವು ಭತ್ಯೆ ಮತ್ತು ವಿನಾಯಿತಿಗಳನ್ನು ಘೋಷಿಸಲಾಗಿದೆ.

2020–21ನೇ ಆರ್ಥಿಕ ವರ್ಷದಲ್ಲಿ ತೆರಿಗೆ ಕಡಿತ ಮತ್ತು ಭತ್ಯೆಗಳ ಕಾರಣ ಸರ್ಕಾರದ ಬೊಕ್ಕಸಕ್ಕೆ 21.03 ಲಕ್ಷ ಕೋಟಿ ಖೋತಾ ಆಗಿದೆ. ನಷ್ಟವಾದ ಈ ಆದಾಯವನ್ನು ತುಂಬಿಸಿಕೊಳ್ಳಲು ಕೇಂದ್ರ ಸರ್ಕಾರವು ಜಿಎಸ್‌ಟಿ ಮತ್ತು ಇಂಧನಗಳ ಮೇಲಿನ ಮೌಲ್ಯವರ್ಧಿತ ತೆರಿಗೆಗಳ ದರವನ್ನು ಏರಿಕೆ ಮಾಡಿದೆ' ಎಂದು ಆಕ್ಸ್‌ಫಾಮ್ ವಿಶ್ಲೇಷಿಸಿದೆ.



ಇಂತಹ ಆರೋಪಗಳನ್ನು ಸರ್ಕಾರ ನಿರಾಕರಿಸುತ್ತಲೇ ಬಂದಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಚೆಗಷ್ಟೇ, ನಾನೂ ಮಧ್ಯಮ ವರ್ಗದಿಂದ ಬಂದವಳು, ಈ ವರ್ಗದ ಕಷ್ಟಗಳನ್ನು ಅರ್ಥಮಾಡಿಕೊಳ್ಳಬಲ್ಲೆ. ಹೀಗಾಗಿಯೇ ಈ ವರ್ಗದ ಮೇಲೆ ನಮ್ಮ ಸರ್ಕಾರವು ಹೊಸ ತೆರಿಗೆಗಳನ್ನು ಹೇರಿಲ್ಲ ಎಂದು ಹೇಳಿದ್ದರು. ಆದಾಯ ತೆರಿಗೆಯನ್ನು ಮಾತ್ರ ಗುರಿಯಾಗಿಸಿಕೊಂಡು ಅವರು ಈ ಮಾತು ಹೇಳಿದ್ದರು. ಆದರೆ, 'ಪರೋಕ್ಷ ತೆರಿಗೆಗಳು ಏರಿಕೆ ಗತಿಯಲ್ಲೇ ಇವೆ' ಎಂದು ಅಕ್ಸ್ ಫಾಮ್ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದೆ.



ಕಾರ್ಪೊರೇಟ್ ತೆರಿಗೆ ಕಡಿತದ ಪರಿಣಾಮವಾಗಿ, 2020–21ನೇ ಸಾಲಿನಲ್ಲಿ ಸಂಗ್ರಹವಾದ ಕಾರ್ಪೊರೇಟ್ ತೆರಿಗೆಯ ಒಟ್ಟು ಮೊತ್ತದಲ್ಲಿ ಶೇ 8ರಷ್ಟು ಇಳಿಕೆಯಾಗಿದೆ. ಅದೇ ವರ್ಷ ಸಂಗ್ರಹವಾದ ನೇರ ತೆರಿಗೆಯ ಒಟ್ಟು ಮೊತ್ತದಲ್ಲಿ ಶೇ. 5ರಷ್ಟು ಇಳಿಕೆಯಾಗಿದೆ. ಆ ವರ್ಷದ ಬಜೆಟ್‌ನ ಒಟ್ಟು ಮೊತ್ತದಲ್ಲಿ ಖೋತಾ ಆದ ತೆರಿಗೆ ಆದಾಯದ ಪ್ರಮಾಣ ಶೇ 2.8ರಷ್ಟು. ಆದರೆ, ಕಾರ್ಪೊರೇಟ್ ತೆರಿಗೆ ಹೆಚ್ಚಿಸುವ ಬಗ್ಗೆ ಸರ್ಕಾರ ಆಸಕ್ತಿ ತೋರುತ್ತಿಲ್ಲ. ಬದಲಿಗೆ ಪರೋಕ್ಷ ತೆರಿಗೆಯನ್ನು ಹೆಚ್ಚಿಸುವ ಮೂಲಕ ತನ್ನ ಆದಾಯವನ್ನು ಭದ್ರಪಡಿಸಿಕೊಳ್ಳುವತ್ತ ಗಮನ ಕೇಂದ್ರೀಕರಿಸಿದೆ ಎಂದು ಆಕ್ಸ್‌ಫಾಮ್ ತನ್ನ ವರದಿಯಲ್ಲಿ ವಿಶ್ಲೇಷಿಸಿದೆ.

ಕಾರ್ಪೊರೇಟ್ ತೆರಿಗೆ ಕಡಿತದಿಂದ ದೇಶದಲ್ಲಿ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ ಹೆಚ್ಚಾಗುತ್ತದೆ. ತೆರಿಗೆಯನ್ನು ವಿಧಿಸಿದರೆ ಅದರಿಂದ ಆರ್ಥಿಕತೆಗೆ ಧಕ್ಕೆಯಾಗುತ್ತದೆ ಎಂಬ ವಾದವನ್ನು ಮುಂದಿಟ್ಟು, ತೆರಿಗೆ ಕಡಿತ ಮಾಡಲಾಗುತ್ತಿದೆ.

ಕಾರ್ಪೊರೇಟ್ ತೆರಿಗೆ ಹೇರದೇ ಇರುವುದಕ್ಕೂ ಇದೇ ವಾದವನ್ನು ಮುಂದಿರಿಸಲಾಗುತ್ತಿದೆ. ಆದರೆ, ಇದೇ ಸಂದರ್ಭದಲ್ಲಿ ಬಡವರು ಮತ್ತು ಕೆಳ ಮಧ್ಯಮ ವರ್ಗದವರು ನಿತ್ಯಬಳಕೆಯ ವಸ್ತು ಮತ್ತು ಪದಾರ್ಥಗಳ ಮೇಲೆ ಹೆಚ್ಚಿನ ದರದ ಜಿಎಸ್‌ಟಿ ತೆರಬೇಕಾಗಿದೆ. ತಮ್ಮ ದುಡಿಮೆಯ ಹೆಚ್ಚಿನ ಭಾಗವನ್ನು ಈ ರೀತಿ ತೆರಿಗೆ ಪಾವತಿಸಲೇ ಈ ವರ್ಗವು ಬಳಸುತ್ತಿದೆ. ಇದರಿಂದ ಈ ಜನರ ವೆಚ್ಚದ ಸಾಮರ್ಥ್ಯ ಇಳಿಕೆಯಾಗಿದೆ. ಪರಿಣಾಮವಾಗಿ ಆರ್ಥಿಕ ಚಟುವಟಿಕೆಗಳಲ್ಲಿ ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ. ಈ ತೆರಿಗೆ ಪದ್ಧತಿಯು ದೇಶದ ಆರ್ಥಿಕತೆಗೆ ಪ್ರತಿಕೂಲವಾಗಿ

ಪರಿಣಮಿಸಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

**ಸಂಪತ್ತಿನ ಅಸಮಾನ ಹಂಚಿಕೆ :** ದೇಶದ ಒಟ್ಟು ಜನಸಂಖ್ಯೆಯ ಶೇ 1ರಷ್ಟಿರುವ ಅತಿಶ್ರೀಮಂತರ ಬಳಿ ದೇಶದ ಒಟ್ಟು ಸಂಪತ್ತಿನ ಶೇ 40ರಷ್ಟು ಸಂಪತ್ತು ಇದೆ. ಆದರೆ, 70 ಕೋಟಿಗೂ ಹೆಚ್ಚು ಜನರಿರುವ ಬಡವ ಮತ್ತು ಕೆಳಮಧ್ಯಮ ವರ್ಗದ ಬಳಿ ಇರುವ ಸಂಪತ್ತು, ದೇಶದ ಒಟ್ಟು ಸಂಪತ್ತಿನ ಶೇ 3ರಷ್ಟಾಗುತ್ತದೆ. ಈಚಿನ ವರ್ಷಗಳಲ್ಲಿ ಈ ಅಂತರ ಹೆಚ್ಚಾಗುತ್ತಲೇ ಬಂದಿದೆ. ದೇಶದ ಒಟ್ಟು ಜನಸಂಖ್ಯೆಯ ಶೇ 50ರಷ್ಟಿರುವ ಬಡವರು ಮತ್ತು ಕೆಳಮಧ್ಯಮ ವರ್ಗದ ಜನರ ವಾರ್ಷಿಕ ಆದಾಯವು 2020–21ರಲ್ಲಿ, ದೇಶದ ಒಟ್ಟು ಆದಾಯದ ಶೇ 13ರಷ್ಟಕ್ಕೆ ಕುಸಿದಿತ್ತು. 2019–20ರಲ್ಲಿ ಈ ಪ್ರಮಾಣವು ಶೇ 16ರಷ್ಟಿತ್ತು. ಅದಕ್ಕೂ ಹಿಂದಿನ ವರ್ಷಗಳಲ್ಲಿ ಈ ಪ್ರಮಾಣವು ಹೆಚ್ಚೇ ಇತ್ತು. ಅತಿಶ್ರೀಮಂತರ ಪರವಾದ ತೆರಿಗೆ ನೀತಿಯ ಪರಿಣಾಮವಾಗಿ ಈ ಜನರ ಆದಾಯ ಇಳಿಕೆಯಾಗುತ್ತಲೇ ಇದೆ. ಪರಿಣಾಮವಾಗಿ ದೇಶದ ಒಟ್ಟು ಸಂಪತ್ತಿನಲ್ಲಿ ಈ ಜನರ ಸಂಪತ್ತಿನ ಪಾಲು ಕುಸಿಯುತ್ತಿದೆ. ಇದೇ ಸಂದರ್ಭದಲ್ಲಿ ಅತಿಶ್ರೀಮಂತರ ಪಾಲು ಏರಿಕೆಯಾಗುತ್ತಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.



**ಜಿಎಸ್‌ಟಿ ಹೊರೆ ಬಡವರ ಮೇಲೆ :** ದೇಶದಲ್ಲಿ ಜಿಎಸ್‌ಟಿ ಸ್ವರೂಪದ ಪರೋಕ್ಷ ತೆರಿಗೆಯಿಂದ ಸಂಗ್ರಹವಾಗುವ ಆದಾಯ ಹೆಚ್ಚು. 2021–22ನೇ ಆರ್ಥಿಕ ವರ್ಷದಲ್ಲಿ ಜಿಎಸ್‌ಟಿಯಿಂದ ಒಟ್ಟು 714.83 ಲಕ್ಷ ಕೋಟಿಯಷ್ಟು ತೆರಿಗೆ ಸಂಗ್ರಹವಾಗಿದೆ. ಆದರೆ, ಇದರಲ್ಲಿ ಹೆಚ್ಚು ತೆರಿಗೆ ಪಾವತಿಸಿರುವುದು ಸಂಪತ್ತಿನ ಹಂಚಿಕೆ ಪಿರಮಿಡ್‌ನಲ್ಲಿ ತಳದಲ್ಲಿರುವ ಶೇ 50ರಷ್ಟು ಮಂದಿ ಕಡಿಮೆ ಸಂಪತ್ತು ಹೊಂದಿರುವ ಮತ್ತು ಕಡಿಮೆ ಆದಾಯ ಹೊಂದಿರುವ ಜನವರ್ಗವು ತನ್ನ ಗಳಿಕೆಯ ದೊಡ್ಡ ಭಾಗವನ್ನು ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಿದೆ.

**ಅಸಮಾನತೆ ಹೆಚ್ಚಳ :** ಭಾರತದಲ್ಲಿ ಅಸಮಾನತೆ ಹೆಚ್ಚುತ್ತಲೇ ಇದೆ ಎಂಬುದನ್ನು



ಸರ್ಕಾರ ಸಿದ್ಧಪಡಿಸಿದ ವರದಿಗಳೇ ಹೇಳಿವೆ. ಪರಿಣತರು ಕೂಡ ಅದನ್ನೇ ಹೇಳಿದ್ದಾರೆ. ಸಮಾಜದ ಶೋಷಿತ ವರ್ಗಗಳ ಮೇಲೆ ಈ ಅಸಮಾನತೆಯ ಪರಿಣಾಮ ಹೆಚ್ಚು. ವಿಶೇಷವಾಗಿ ಪರಿಶಿಷ್ಟ ಪಂಗಡಗಳ ಜನರು ಹೆಚ್ಚು ತೊಂದರೆಗೆ ಒಳಗಾಗಿದ್ದಾರೆ. ಬಡತನವನ್ನು ತೊಡೆದು ಶ್ರೀಮಂತಿಕೆಯತ್ತ ಸಾಗಲು ಇವರಿಗೆ ಸಾಧ್ಯವಾಗುತ್ತಿಲ್ಲ. ಜಾತಿ ವ್ಯವಸ್ಥೆಗೆ ಅನುಗುಣವಾಗಿಯೇ ಸಂಪತ್ತು ಕ್ರೋಡೀಕರಣವಾಗುತ್ತಿದೆ. ಚಾರಿತ್ರಿಕವಾಗಿ ಹಿಂದುಳಿದವರು ಹಿಂದೆಯೇ ಉಳಿಯುವಂತೆ ಆಗಿದೆ ಎಂದು ಆಕ್ಸ್ ಫಾಮ್ ವರದಿಯು ಹೇಳಿದೆ.

- ಸಂಪತ್ತಿನ ಹಂಚಿಕೆಯ ಪಿರಮಿಡ್‌ನ ತಳಭಾಗದಲ್ಲಿರುವ ಶೇ 50ರಷ್ಟು ಮಂದಿ ಕೋವಿಡ್ ಸಾಂಕ್ರಾಮಿಕದ ಬಳಿಕ ಸಂಪತ್ತು ನಷ್ಟ ಮಾಡಿಕೊಂಡಿದ್ದಾರೆ. ದೇಶದಲ್ಲಿನ ಬಡವರ ಸಂಖ್ಯೆ 22.89 ಕೋಟಿ
- ದೇಶದ ಅತಿ ಶ್ರೀಮಂತ 100 ಜನರ ಸಂಪತ್ತಿನ ಮೌಲ್ಯವು 254.12 ಲಕ್ಷ ಕೋಟಿಯಷ್ಟಿದೆ



- ಅತಿ ಶ್ರೀಮಂತ 10 ಜನರ ಸಂಪತ್ತು 227.52 ಕೋಟಿಯಷ್ಟಿದೆ

**ಅತಿ ಶ್ರೀಮಂತರ ಮೇಲೆ ತೆರಿಗೆ ವಿಧಿಸಿ :** ದೇಶದಲ್ಲಿ 2016ರ ನಂತರ ಸಂಪತ್ತು ತೆರಿಗೆಯನ್ನು ಕೈಬಿಡಲಾಗಿದೆ. ಬದಲಿಗೆ ಕೆಲವಾರು ಸ್ವರೂಪದ ಸಂಪತ್ತುಗಳಿಗೆ ಮಾತ್ರ ಅಲ್ಪ ಪ್ರಮಾಣದ ತೆರಿಗೆ ವಿಧಿಸಲಾಗುತ್ತಿದೆ. ದೇಶದ ಅತಿಶ್ರೀಮಂತರ ಸಂಪತ್ತಿನ ಮೇಲೆ ಅಲ್ಪ ಪ್ರಮಾಣದ ತೆರಿಗೆ ವಿಧಿಸಿದರೂ, ಸರ್ಕಾರದ ತೆರಿಗೆ ಆದಾಯ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ ಎಂದು ಆಕ್ಸ್ ಫಾಮ್ ಅಭಿಪ್ರಾಯಪಟ್ಟಿದೆ.

- 2017–2021ರ ನಡುವ ಉದ್ಯಮಿ ಗೌತಮ್ ಅದಾನಿ ಅವರಿಗೆ ದೊರೆತಿರುವ ತೆರಿಗೆ ವಿನಾಯಿತಿ ಮತ್ತು ವಿವಿಧ ನೆರವುಗಳ ಮೊತ್ತ 21.79 ಲಕ್ಷ ಕೋಟಿಯಷ್ಟಾಗುತ್ತದೆ. ಇಷ್ಟು ತೆರಿಗೆ ಸಂಗ್ರಹವಾಗಿದ್ದರೆ, ದೇಶದ ಪ್ರಾಥಮಿಕ ಶಾಲೆಗಳ 50 ಲಕ್ಷಕ್ಕೂ ಹೆಚ್ಚು ಶಿಕ್ಷಕರಿಗೆ ಒಂದು ವರ್ಷದಷ್ಟು ವೇತನ ನೀಡಬಹುದಾಗಿತ್ತು.
- ದೇಶದ ಅತಿಶ್ರೀಮಂತ ಶೇ 10ರಷ್ಟು ಮಂದಿಯ ಸಂಪತ್ತಿನ ಮೇಲೆ ಶೇ 5ರಷ್ಟು ಒಂದು ಬಾರಿಯ ತೆರಿಗೆ ವಿಧಿಸಿದರೆ 21.37 ಲಕ್ಷ ಕೋಟಿ ಸಂಗ್ರಹವಾಗುತ್ತದೆ. ದೇಶದ ಆರೋಗ್ಯ ಸಚಿವಾಲಯದ ವಾರ್ಷಿಕ ಬಜೆಟ್ (286,200 ಕೋಟಿ) ಮತ್ತು ಆಯುಷ್ ಇಲಾಖೆಯ (ಒಟ್ಟು 23,050 ಕೋಟಿ) ಬಜೆಟ್ ಮೊತ್ತವನ್ನು ಭರಿಸಿ, ಇನ್ನೂ ಆರು ತಿಂಗಳ ವೆಚ್ಚವನ್ನು ಪರಿಸಬಹುದಾಗಿದೆ.
- ದೇಶದ ಮೊದಲ 100 ಅತಿ ಶ್ರೀಮಂತರ ಸಂಪತ್ತಿನ ಮೇಲೆ ಶೇ 2.5ರಷ್ಟು ತೆರಿಗೆ ವಿಧಿಸಿದರೆ, ದೇಶದ ಸರ್ವಶಿಕ್ಷಣ ಅಭಿಯಾನಕ್ಕೆ ಅಗತ್ಯವಿರುವ ಒಂದು ವರ್ಷದ ವೆಚ್ಚವನ್ನು ಭರಿಸಬಹುದು
- ದೇಶದ ಎಲ್ಲಾ ಅತಿ ಶ್ರೀಮಂತರ ಸಂಪತ್ತಿನ ಮೇಲೆ ಶೇ 1ರಷ್ಟು ತೆರಿಗೆ ವಿಧಿಸಿದರೆ, ದೇಶದ ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ಐದು ವರ್ಷಗಳಿಗೆ ಅಗತ್ಯವಿರುವಷ್ಟು ಮೊತ್ತವನ್ನು ಸಂಗ್ರಹಿಸಬಹುದು

**ಸಿರಿವಂತಿಕೆ ಏರಿಕೆ ಬಗೆ :** ಭಾರತದಲ್ಲಿ ಸಿರಿವಂತರ ಸಂಖ್ಯೆ ಜಾಸ್ತಿಯಾಗುತ್ತಿದೆ. ಸಿರಿವಂತರೇ ಮತ್ತೆ ಸಿರಿವಂತರಾಗುತ್ತಿದ್ದಾರೆ ಹಾಗೂ ಸಿರಿವಂತರ ಬಳಗಕ್ಕೆ ಇನ್ನಷ್ಟು ಜನ ಸೇರ್ಪಡೆಯಾಗುತ್ತಿದ್ದಾರೆ. 2020ರಲ್ಲಿ 102 ಜನರು 100 ಕೋಟಿ ಡಾಲರ್ ಗಿಂತಲೂ (8,200 ಕೋಟಿ) ಅಧಿಕ ಸಂಪತ್ತು ಹೊಂದಿದ್ದರು. ಇವರ ಸಂಖ್ಯೆ ಕೇವಲ 2 ವರ್ಷಗಳಲ್ಲಿ 162ಕ್ಕೆ ಏರಿಕೆಯಾಗಿದೆ. 60 ಹೊಸ ಶ್ರೀಮಂತರು ಎರಡು ವರ್ಷಗಳ ಅವಧಿಯಲ್ಲಿ ಈ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಕೋವಿಡ್ ನಂತರದ ವರ್ಷಗಳಲ್ಲಿ ಆಗಿರುವ ಈ ಬೆಳವಣಿಗೆಯ ಮೇಲೆ ಆಕ್ಸ್ ಫಾಮ್ ವರದಿ ಬೆಳಕು ಚೆಲ್ಲಿದೆ.

ಭಾರತದ ಅಗ್ರ 100 ಕೋಟ್ಯಧೀಶರ ಒಟ್ಟು ಸಂಪತ್ತಿನ ಮೌಲ್ಯ 254.12 ಲಕ್ಷ ಕೋಟಿಗೆ ತಲುಪಿದೆ. 100 ಶ್ರೀಮಂತರ ಪಟ್ಟಿಯಲ್ಲಿ ಮೊದಲ ಹತ್ತು ಸ್ಥಾನದಲ್ಲಿರುವ ಶ್ರೀಮಂತರ ಒಟ್ಟು ಆಸ್ತಿ ಮೌಲ್ಯವೇ 227.52 ಲಕ್ಷ ಕೋಟಿಯಷ್ಟಿದೆ. 2021ಕ್ಕೆ ಹೋಲಿಸಿದರೆ, ಒಂದು ವರ್ಷದ ಅವಧಿಯಲ್ಲಿ ಈ ಸಂಪತ್ತಿನ ಮೌಲ್ಯ ಶೇ 32.8ರಷ್ಟು ಜಿಗಿದಿದೆ ಎಂದು ವರದಿ ಹೇಳಿದೆ.

ದೇಶದಲ್ಲಿ ಕೋವಿಡ್ ಸಾಂಕ್ರಾಮಿಕ ಬಾಧಿಸಿದ್ದ ಅವಧಿಯಲ್ಲಿ ಜನಸಾಮಾನ್ಯರು ಚಿಕಿತ್ಸೆ, ಔಷಧಿ ಹಾಗೂ ಹೊತ್ತಿನ ಊಟಕ್ಕೂ ಪರದಾಡಿದ್ದರು. ಇದಕ್ಕೆ ವ್ಯತಿರಿಕ್ತವೆಂಬಂತೆ, ಶ್ರೀಮಂತರ ಆಸ್ತಿ ಬೆಟ್ಟದಂತೆ ಬೆಳೆಯುತ್ತಲೇ ಇತ್ತು. ದೇಶದ ಶ್ರೀಮಂತ ಉದ್ಯಮಿಗಳಲ್ಲಿ ಮೊದಲ ಸ್ಥಾನದಲ್ಲಿರುವ, ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಅವರ ಅಸ್ತಿಯ ಪ್ರಮಾಣವು ಕೋವಿಡ್ ಅವಧಿಯಲ್ಲಿ ಎಂಟು ಪಟ್ಟು ಹೆಚ್ಚಳವಾಗಿದೆ. ಒಂದೇ ವರ್ಷದ ಅವಧಿಯಲ್ಲಿ ಇವರ ಅಸ್ತಿ ಮೌಲ್ಯವು ಮತ್ತೆ ಒಂದು ಪಟ್ಟು ಜಿಗಿಯಿತು. 2022ರ ಅಕ್ಟೋಬರ್ ವೇಳೆಗೆ ಅದು 110.96 ಲಕ್ಷ ಕೋಟಿ ತಲುಪಿತು. ಅದುವರೆಗೂ ಶ್ರೀಮಂತರಲ್ಲಿ ಮೊದಲಿಗರಾಗಿದ್ದ ಮುಕೇಶ್ ಅಂಬಾನಿ ಸ್ಥಾನವನ್ನು ಅದಾನಿ ಗಿಟ್ಟಿಸಿಕೊಂಡರು.

ಕೋವಿಡ್ ತಡೆ ಲಸಿಕೆಗಳನ್ನು ಪೂರೈಸಿದ್ದ ಪುಣೆಯ ಸೀರಂ ಇನ್ ಸ್ಟಿಟ್ಯೂಟ್‌ನ ಮುಖ್ಯಸ್ಥ ಸೈರಸ್ ಪೂನಾವಾಲಾ ಅವರ ಅಸ್ತಿ ಮೌಲ್ಯವು 2021ರಿಂದ 2022ರ ನಡುವೆ ಶೇ 91ರಷ್ಟು ಏರಿಕೆ ಕಂಡಿದೆ ಎಂಬುದು ಗಮನಾರ್ಹ. ಕೋಟ್ಯಧೀಶರಾದ ಶಿವ ನಾಡಾ. ರಾಧಾಕೃಷ್ಣದಮಾನಿ, ಕುಮಾರ ಮಂಗಲಂ ಬಿರ್ಲಾ ಅವರು ಆಸ್ತಿಗೆ ಶೇ 20ರಷ್ಟು ಸಂಪತ್ತು ಹರಿದುಬಂದಿದೆ.

**ಕೋಟ್ಯಧೀಶರನ್ನು ಸೃಷ್ಟಿಸಿದ ಕೋವಿಡ್ :** ಕೋವಿಡ್ 19 ಸಾಂಕ್ರಾಮಿಕ ಶುರುವಾದ ಬಳಿಕ ಆರೋಗ್ಯ ಮತ್ತು ಔಷಧ ಕ್ಷೇತ್ರಕ್ಕೆ ಭಾರಿ ಮಹತ್ವ ಬಂದಿತು. ಈ ವಲಯದಲ್ಲಿ ಭಾರಿ ಲಾಭವಿದೆ ಎಂಬ ಕಾರಣಕ್ಕೆ ಸಾಕಷ್ಟು ಹೂಡಿಕೆಯೂ ಆಗಿದೆ. ಈ ವಲಯದಲ್ಲಿ ತೊಡಗಿಸಿಕೊಂಡಿದ್ದ ಉದ್ಯಮಿಗಳು ನಿರೀಕ್ಷೆಯಂತೆ ಕೋಟ್ಯಧೀಶರಾಗಿ ಬದಲಾಗಿದ್ದಾರೆ. 166 ಭಾರತೀಯ ಕೋಟ್ಯಧೀಶರ ಪೈಕಿ ಶೇ 19ರಷ್ಟು ಕೋಟ್ಯಧೀಶರು ಆರೋಗ್ಯ ಮತ್ತು ಔಷಧ ವಲಯದಲ್ಲೇ ಇರುವುದು. ಈ ಕ್ಷೇತ್ರಕ್ಕೆ ಹಣದ ಹೊಳೆ ಹರಿದಿರುವುದನ್ನು ಸೂಚಿಸುತ್ತದೆ. 2021ರಲ್ಲಿ ಒಂದೇ ವರ್ಷದಲ್ಲಿ 7 ಮಂದಿ ಹೊಸ ಕೋಟ್ಯಧೀಶರು ಆರೋಗ್ಯ ಮತ್ತು ಔಷಧ ಕ್ಷೇತ್ರದಿಂದ ಹೊರಹೊಮ್ಮಿದ್ದಾರೆ. ಈ ಏಳು ಜನರ ಒಟ್ಟಾರೆ ಸಂಪತ್ತಿನ ಮೌಲ್ಯ 74.3 ಲಕ್ಷ ಕೋಟಿ ಎಂದು ಆಕ್ಸ್ ಫಾಮ್ ವರದಿ ತಿಳಿಸಿದೆ. 2004–2019ರ ಅವಧಿಯಲ್ಲಿ ದೇಶದ ಆರ್ಥಿಕ ಪ್ರಗತಿಯು ಶೇ. 5.2 ರಿಂದ ಶೇ 8.5ರ ನಡುವೆ ಇತ್ತು. ಈಗಾಗಲೇ ಅಧಿಕ ಶ್ರೀಮಂತರಾಗಿ ಅಗ್ರ ಸ್ಥಾನದಲ್ಲಿರುವ ಗಣ್ಯರ ನಡುವೆಯೇ ಈ ಪ್ರಗತಿಯ ಲಾಭವು ಹಂಚಿಕೆಯಾಗಿದೆ. ಕೋಡ್‌ನಿಂದಾಗಿ ಹೇರಲಾದ ಲಾಕ್‌ಡೌನ್‌ನಿಂದ ಅಗ್ರ ಶ್ರೀಮಂತರ ಗಳಿಕೆಯಲ್ಲಿ ಒಂದಿಷ್ಟು ಇಳಿಕೆಯಾಗಿದ್ದರೂ, ಸಂಪತ್ತಿನ ಸ್ಥಾನ ಭದ್ರವಾಗಿತ್ತು. ಸರ್ಕಾರದ ಹಲವು ನೀತಿಗಳು ಈ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿಸಿವೆ.

ಆರೋಗ್ಯ, ತಯಾರಿಕೆ ವಲಯದಲ್ಲಿ ಹೆಚ್ಚು ಕೋಟ್ಯಧೀಶರು: ಶ್ರೀಮಂತರು ಹೆಚ್ಚಾಗಿ ಕಂಡುಬರುವ ಎರಡು ಮಹತ್ವದ ವಲಯಗಳನ್ನು ಅಕ್ಸ್‌ಫಾಮ್ ಗುರುತಿಸಿದೆ. ಆರೋಗ್ಯ ಹಾಗೂ ತಯಾರಿಕಾ ವಲಯದಲ್ಲೇ ಹೆಚ್ಚು ಶ್ರೀಮಂತರು ಕೇಂದ್ರೀಕೃತವಾಗಿದ್ದಾರೆ. ಸೈರಸ್ ಪೂನಾವಾಲಾ, ದಿಲೀಪ್ ಸಂಘವಿ, ಮುರಳಿ ದಿವಿ ಸೇರಿದಂತೆ 32 ಕೋಟ್ಯಧೀಶರು ಆರೋಗ್ಯ ವಲಯದಲ್ಲಿದ್ದಾರೆ. 31 ಕೋಟ್ಯಧೀಶರು ತಯಾರಿಕೆ ವಲಯದಲ್ಲಿದ್ದಾರೆ.

ಅಶ್ವಿನಿ ದನಿ, ಬೇನು ಗೋಪಾಲ್, ಮಹೇಂದ್ರ ಚೋಕ್ಸಿ ಅವರು ಈ ವಲಯದಲ್ಲಿ ಮೊದಲ ಮೂರು ಸ್ಥಾನಗಳಲ್ಲಿದ್ದಾರೆ. 16 ಮಂದಿ ತಂತ್ರಜ್ಞಾನ, 15 ಮಂದಿ ಫ್ಯಾಷನ್ ಮತ್ತು ರಿಟೇಲ್ ವಲಯ ಹಾಗೂ ಬಹು ವಲಯದ ಉದ್ಯಮಗಳಲ್ಲಿ 16 ಕೋಟ್ಯಧೀಶರು ಗುರುತಿಸಿ ಕೊಂಡಿದ್ದಾರೆ. ಮುಕೇಶ್ ಅಂಬಾನಿ, ಗೌತಮ್ ಅದಾನಿ, ಕುಮಾರ ಮಂಗಲಂ ಬಿರ್ಲಾ, ಬಜಾಜ್ ಸಹೋದರರು ವೈವಿಧ್ಯಮಯ ಉದ್ಯಮಗಳಲ್ಲಿ ತೊಡಗಿಸಿಕೊಂಡಿದ್ದಾರೆ.

# ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217 ಪಿ.ಬಿ. ರಸ್ತೆ, ದಾವಣಗೆರೆ – 577002
ದೂರವಾಣಿ : ಬ್ಯಾಂಕ್ : 272540, 272541, 272545, ಫ್ಯಾಕ್ಸ್ : (08192) 230929
Email : ducbank@yahoo.com | website : www.ducbank.com

ರಾಜ್ಯದಲ್ಲಿಯೇ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲಿ ಹೆಸರು ಪಡೆದಿರುವ ನಮ್ಮ ಬ್ಯಾಂಕು, ದಿನಾಂಕ : 31-03-2023ಕ್ಕೆ ಮುಕ್ತಾಯಗೊಂಡ 2022-23ನೇ ಸಾಲಿನಲ್ಲಿ ರೂ. 12.01 ಕೋಟಿ ಮೀರಿ ಲಾಭ ಗಳಿಸಿದೆ. ಬ್ಯಾಂಕಿನ್ ಒಟ್ಟು ಲಾಭದಲ್ಲಿ ಆದಾಯ ತೆರಿಗೆಗೆ ಮತ್ತು ಇತರೆ ನಿಧಿಗಳಿಗೆ ಅವಕಾಶ ಕಲ್ಪಿಸಿದ ನಂತರ **ರೂ. 7.26 ಕೋಟಿಯಷ್ಟು ನಿವ್ವಳ ಲಾಭಗಳಿಸಿದೆ.** ವಿವರ ಈ ಕೆಳಗಿನಂತಿದೆ.

**ದಿನಾಂಕ : 31-03-2023ಕ್ಕೆ ಇದ್ದಂತೆ ಬ್ಯಾಂಕಿನ ಆರ್ಥಿಕ ಸ್ಥಿತಿ (ಮೊತ್ತ ರೂ. ಕೋಟಿಗಳಲ್ಲಿ)**

| ಶಾಖೆಗಳು | | | | | |
|---|---|---|---|---|---|
| 1. | ಸದಸ್ಯರು | 15345 | 5. | ಠೇವಣಿಗಳು | 494.00 |
| 2. | ಷೇರು ಬಂಡವಾಳ | 13.05 | 6 | ಸಾಲಗಳು | 364.00 |
| 3. | ನಿಧಿಗಳು | 63.00 | 7. | ತೊಡಗಣೆಗಳು | 180.00 |
| 4. | ದುಡಿಯುವ ಬಂಡವಾಳ | 581.72 | 8. | ಎನ್.ಪಿ.ಎ (ಗ್ರಾಸ್) ಶೇಕಡಾ | 1.17% |
| 9. | ನಿವ್ವಳ ಎನ್.ಪಿ.ಎ. | | | | 0.00% |

## ಕಾರ್ಯನಿರ್ವಾಹಕ ಮಂಡಳಿ ಸದಸ್ಯರು

ಶ್ರೀ ಕೋಗುಂಡಿ ಬಕ್ಕೇಶಪ್ಪನವರು
ಅಧ್ಯಕ್ಷರು

ಶ್ರೀ ಅಂದನೂರು ಮುಪ್ಪಣ್ಣ
ಉಪಾಧ್ಯಕ್ಷರು

**ನಿರ್ದೇಶಕರುಗಳು :**

ಶ್ರೀ ಬಿ.ಸಿ. ಉಮಾಪತಿ
ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪ
ಶ್ರೀ ಎಂ. ಚಂದ್ರಶೇಖರ್
ಶ್ರೀ ಟಿ.ಎಸ್. ಜಯರುದ್ರೇಶ್ (ವ್ಯವಸ್ಥಾಪಕ ಮಂಡಳಿ ಅಧ್ಯಕ್ಷರು)
ಶ್ರೀ ದೇವರಮನಿ ಶಿವಕುಮಾರ್ (ವ್ಯವಸ್ಥಾಪಕ ಮಂಡಳಿ ಸದಸ್ಯರು)
ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್
ಶ್ರೀಮತಿ ಸುರೇಖಾ ಎಂ. ಚಿಗಟೇರಿ
ಶ್ರೀ ಕಂಚಿಕೇರಿ ಮಹೇಶ್ (ವ್ಯವಸ್ಥಾಪಕ ಮಂಡಳಿ ಸದಸ್ಯರು)
ಶ್ರೀ ಎಸ್. ರಾಘವೇಂದ್ರ
ಶ್ರೀ ಇ.ಎಂ. ಮಂಜುನಾಥ
ಶ್ರೀ ವಿ. ವಿಕ್ರಮ್
ಶ್ರೀಮತಿ ಎ.ಆರ್. ಅರ್ಚನಾ

**ವೃತ್ತಿಪರ ನಿರ್ದೇಶಕರು :**

ಶ್ರೀ ಮುಂಡಾಸ್ ವೀರೇಂದ್ರ,
ಚಾರ್ಟರ್ಡ್ ಅಕೌಂಟೆಂಟ್

ಶ್ರೀ ಮಲ್ಲಿಕಾರ್ಜುನ ಕಣವಿ
ವಕೀಲರು

**ವ್ಯವಸ್ಥಾಪನಾ ಮಂಡಳಿ ಸದಸ್ಯರು**

ಶ್ರೀ ಬೆಳಗಾವಿ ಬಸವರಾಜಪ್ಪ
ಶ್ರೀ ಜಂಬಗಿ ರಾಧೇಶ್
ಶ್ರೀ ಕೆ. ಕೊಟ್ರೇಶ್

ಶ್ರೀ ಬಿ.ಎಸ್. ಮಲ್ಲೇಶ್
ಪ್ರಧಾನ ವ್ಯವಸ್ಥಾಪಕರು

ಶ್ರೀ ಆರ್.ಎ. ಪ್ರಸನ್ನ
ಉಪಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿನ ಸಿಬ್ಬಂದಿ ವರ್ಗದವರು ಮತ್ತು ಲಕ್ಷ್ಮಿ ಠೇವಣಿ ಸಂಗ್ರಹಗಾರರು



1965–2015



# ಶ್ರೀ ವೀರ ಪುಲಿಕೇಶಿ ಕೋ–ಆಪರೇಟಿವ್ ಬ್ಯಾಂಕ ಲಿ.,

ಪ್ರಧಾನ ಕಛೇರಿ : ಬಾದಾಮಿ–587 201
ಜಿ॥ ಬಾಗಲಕೋಟ, ಕರ್ನಾಟಕ ರಾಜ್ಯ.
ದೂರವಾಣಿ : 08357-220219/220053
email : svpcbank@yahoo.com

ಸಹಕಾರ ಕ್ಷೇತ್ರದ ಇತಿಹಾಸದಲ್ಲಿ
50 ವರ್ಷಗಳನ್ನು ಪೂರೈಸಿ
ಸುವರ್ಣ ಮಹೋತ್ಸವ ಆಚರಿಸಿರುವ
ನಿಮ್ಮ ನೆಚ್ಚಿನ ಬ್ಯಾಂಕ



ಲಿಂ. ಶ್ರೀ ಕೆ. ಎಮ್. ಪಟ್ಟಣಶೆಟ್ಟಿ
ಸಂಸ್ಥಾಪಕ ಚೇರಮನ್ನರು



ಶ್ರೀ ಎಮ್. ಕೆ ಪಟ್ಟಣಶೆಟ್ಟಿ
ಬಿ. ಕಾಂ ಮಾಜಿ ಶಾಸಕರು
ಅಧ್ಯಕ್ಷರು




ಬ್ಯಾಂಕಿನ ಆಡಳಿತ ಕಛೇರಿಯ ನಿಯೋಜಿತ ಕಟ್ಟಡ

(ರೂ. ಲಕ್ಷಗಳಲ್ಲಿ)

| ಯಶೋಗಾಥೆ | ಒಟ್ಟು ಸದಸ್ಯರು | ಶೇರು ಬಂಡವಾಳ | ಠೇವುಗಳು | ಮುಂಗಡ ನೀಡಿಕೆ | ದುಡಿಯುವ ಬಂಡವಾಳ | ಲಾಭ |
|---|---|---|---|---|---|---|
| ರಜತ ಮಹೋತ್ಸವ 1990-91 | 14550 | 29.30 | 583.79 | 532.29 | 683.78 | 8.00 |
| ಸುವರ್ಣ ಮಹೋತ್ಸವ 2015-16 | 21684 | 849.45 | 31540.72 | 17207.42 | 35493.57 | 100.39 |
| ಪ್ರಸಕ್ತ ಸಾಲಿನ ವರ್ಷ 2022-23 | 17300 | 1160.20 | 40729.18 | 21711.04 | 48644.79 | 32.48 |

## ಬ್ಯಾಂಕಿನ ಆಡಳಿತ ಮಂಡಳಿ

| | | | |
|---|---|---|---|
| ಶ್ರೀ ಎಮ್. ಕೆ. ಪಟ್ಟಣಶೆಟ್ಟಿ | ಅಧ್ಯಕ್ಷರು | ಶ್ರೀ ಎನ್. ಎಮ್. ಗೌಡರ | ನಿರ್ದೇಶಕರು |
| ಡಾ॥ ಡಿ. ಎಮ್. ಪೈಲ್ | ಉಪಾಧ್ಯಕ್ಷರು | ಶ್ರೀ ಸಿ. ಯು. ಪಟ್ಟಣದ | ,, |
| ಶ್ರೀ ಎ. ಸಿ. ಪಟ್ಟಣದ | ನಿರ್ದೇಶಕರು | ಶ್ರೀ ಎಮ್. ಎಸ್. ತೆಗ್ಗಿನಮನಿ | ,, |
| ಶ್ರೀ ಆಯ್. ಕೆ. ಪಟ್ಟಣಶೆಟ್ಟಿ | ,, | ಶ್ರೀ ವಿ. ಆರ್. ಪಾಟೀಲ | ,, |
| ಶ್ರೀ ಜಿ. ಎಚ್. ಘಟ್ಟದ | ,, | ಶ್ರೀ ಎಚ್. ಕೆ. ಬೆಳ್ಳಿಗುಂಡಿ | ,, |
| ಶ್ರೀ ವ್ಹಿ. ಕೆ. ಬಾಗಲೇ | ,, | ಶ್ರೀಮತಿ ಕೆ. ಬಿ. ಬಂಗಾರಶೆಟ್ಟರ | ,, |
| ಶ್ರೀ ಬಿ. ಎಮ್. ಟೆಂಗಿನಕಾಯಿ | ,, | ಶ್ರೀಮತಿ ಎಸ್. ಎಮ್. ಪಟ್ಟಣಶೆಟ್ಟಿ | ,, |
| ಶ್ರೀ ಎಸ್. ಬಿ. ಕೊಣ್ಣೂರ | ,, | ಶ್ರೀ ಜೆ. ಬಿ. ಬೂದಿಹಾಳ | ವೃತ್ತಿಪರ ನಿರ್ದೇಶಕರು |
| ಶ್ರೀ ಎಸ್.ಎಚ್. ಹಂಡಿ | ,, | ಶ್ರೀ ಎಮ್. ಎನ್. ತಪಶೆಟ್ಟಿ | ವೃತ್ತಿಪರ ನಿರ್ದೇಶಕರು |
| ಶ್ರೀ ಎಮ್. ಎಸ್. ಹಿರೇಹಾಳ | ,, | ಶ್ರೀಮತಿ ಎಮ್ ಬಿ. ದೇಶಣ್ಣವರ | ಪ್ರಧಾನ ವ್ಯವಸ್ಥಾಪಕರು |

ಹಿರಿಯ ಅಧಿಕಾರಿಗಳು, ಶಾಖಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ


ಸ್ಮಾರ್ಟ್ ಸೆಕ್ಯೂರಿಟಿ ಸೊಲ್ಯೂಷನ್ಸ್ ನಿಂದ ನಿಮ್ಮ ಬ್ಯಾಂಕಿಂಗ್ ವ್ಯವಸ್ಥೆಗೆ ಎಷ್ಟು ಉಪಯೋಗ ?
ನಿಮ್ಮ ಸುರಕ್ಷತೆಗೆ ಮತ್ತು ಭದ್ರತೆಯ ಬಗ್ಗೆ ನಿಮಗೆ ಅರಿವಿದೆಯೇ ?
Surveillance Camera
Security Gates
Security Alarm Systems
Baggage Scanners
Audio Video Door Phone
Biometric Systems
RFID Systems
RFID
Access Control
Electronic Locks
GPS Tracking
Perimeter Intrusion Detection Systems
Anti Theft EAS System
Artificial Intelligence
Sterling
CCTV Solutions
Security Simplicity
Through Innovation
24h Round the Clock
ಸ್ಟರ್ಲಿಂಗ್ CCTV ಸೊಲ್ಯೂಷನ್ಸ್, ರಾಜಾಜಿನಗರ, ಬೆಂಗಳೂರು
7411222222
www.sterlingcctvsolutions.com


Safe Breaker's Nightmare!!
The Mark of Security, Safety
Strength and Durability
KAMMAR UDYOG
MANUFACTURES OF :
• Steel Fire and Burglar Proof Safes
• Steel Safe Deposit Locker Cabinets
• Steel Safe with Safe Deposit Locker Cabinets
• Steel Strong Room Door with Grill Gate
• Steel Dressing Cabinets / Office Cabinets
• Steel Cash Boxes
• Cabins for M/s. BEML, KGF & MYSORE
Siddheshwar Compound, Bankapur Chowk, P.B. Road, HUBBALLI-580 024.
E-mail : kuhubli@gmail.com Website : www.kammarudyog.in
Mob : 9620777726, 9980524275

# ಸಹಕಾರದ ಬಗ್ಗೆ ಗಣ್ಯರ ಅನಿಸಿಕೆ

**ಸಹಕಾರ ಚಳವಳಿ, ಸಹಕಾರ ವ್ಯವಸ್ಥೆ ಇಂದು ಎಲ್ಲ ನಾಗರೀಕರಿಗೂ ಅವಶ್ಯ, ಅನಿವಾರ್ಯ ಎನಿಸಿದೆ. ಸಹಕಾರದ ಬಗ್ಗೆ ಸಮಾಜದ ವಿವಿಧ ಸ್ಥರಗಳ ಪ್ರಮುಖರು ಆಸ್ತೆ ತೋರುತ್ತಿರುವುದು ವಿಶೇಷವೇ ಸರಿ. ಸಹಕಾರದ ಬಗ್ಗೆ ಇಲ್ಲಿ ಕೆಲವು ಗಣ್ಯರ ಅನಿಸಿಕೆಯನ್ನು ಕೊಡಲಾಗಿದೆ.**



ದೇಶದಲ್ಲಿ ಸಹಕಾರ ವಲಯ ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಮತ್ತು ಸಾಮಾಜಿಕ ಜೀವನದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಈ ಮೂಲಕ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡು ಸ್ವಾವಲಂಬಿ ಜೀವನವನ್ನು ಕಟ್ಟಿಕೊಂಡಿದ್ದಾರೆ. ಆದ್ದರಿಂದ ಈ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರಿಗೆ ಉತ್ತಮ ತರಬೇತಿಯನ್ನು ನೀಡಿ ಮಾರ್ಗದರ್ಶನ ನೀಡುವ ಅಗತ್ಯವಿದೆ.

**▸▸ ಶ್ರೀಮತಿ ದ್ರೌಪದಿ ಮುರ್ಮು, ರಾಷ್ಟ್ರಪತಿ**



ಸಹಕಾರ ಸಂಘಟನೆಗಳು ಸಮುದಾಯ ಕಾಳಜಿ ಹೊಂದಿರುವ ಆರ್ಥಿಕ ಸಂಘಟನೆಗಳು. ಆದುದರಿಂದ ಸಮುದಾಯದ ಸಾರ್ವಜನಿಕ ಉಪಯೋಗದ ಯಾವುದೇ ಸೇವೆಯನ್ನು ಸಹಕಾರ ಸಂಘ/ಸಂಸ್ಥೆಗಳು ಸಮರ್ಪಕವಾಗಿ ನಿರ್ವಹಿಸಬಲ್ಲವು.

**▸▸ ಶ್ರೀ ವೀರೇಂದ್ರ ಹೆಗ್ಗಡೆ,**
**ಧರ್ಮಾಧಿಕಾರಿ ಧರ್ಮಸ್ಥಳ**



ಸಹಕಾರ ವಲಯ ಒಂದು ಅದ್ಭುತವಾದ ಪರಿಕಲ್ಪನೆಯಾಗಿದ್ದು, ಇದರಿಂದಾಗಿ ಕೃಷಿ ವಲಯಕ್ಕೆ ಉತ್ತಮ ಸಹಕಾರ ದೊರೆಯುತ್ತಿದೆ. ಸಮಾಜದಲ್ಲಿ ಸಮಾನತೆ ಮೂಡಿಸಿ, ಅಬಲವರ್ಗಗಳನ್ನು ಸಬಲಗೊಳಿಸಲು ಈ ಕ್ಷೇತ್ರದಿಂದ ಸಾಧ್ಯವಿದೆ. ಆದ್ದರಿಂದಾಗಿ ಸಹಕಾರ ಚಳವಳಿ ಮತ್ತಷ್ಟು ಪರಿಣಾಮಕಾರಿಯಾಗಿ ಬೆಳೆಯಬೇಕೆಂಬುದೇ ನಮ್ಮ ಆಶಯವಾಗಿದೆ.

**▸▸ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ,**
**ಆದಿಚುಂಚನಗಿರಿ**



ಮಹಿಳೆಯರು ಸಶಕ್ತರಾಗಲು, ಆರ್ಥಿಕವಾಗಿ ಸ್ವಾವಲಂಬಿಗಳಾಗಲು, ಶೋಷಣೆಯಿಂದ ವಿಮುಕ್ತರಾಗಲು, ಅಧಿಕಾರ ಸ್ಥಾನಗಳನ್ನು ಹೊಂದಲು ಮಹಿಳೆಯರನ್ನು ಸಿದ್ದಗೊಳಿಸುವುದೇ ಮಹಿಳಾ ಸಬಲೀಕರಣ. ಮಹಿಳೆಯರ ಸಬಲೀಕರಣಕ್ಕೆ ಅತ್ಯುತ್ತಮ ವೇದಿಕೆ ಎಂದರೆ ಸಹಕಾರ ಕ್ಷೇತ್ರವಾಗಿದೆ.

**▸▸ ಶ್ರೀಮತಿ ಸುಕ್ರಿ ಬೊಮ್ಮಗೌಡ,**
**ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು**

## ಹೆಸರಿಗೆ ತಕ್ಕಂತೆ ನಯನಗಳ ಮೂಲಕವೇ ಭಾವಾಭಿನಯ ತೋರುವ ನಯನ ನಾಗರಾಜ್

ತೆರೆಯ ಮೇಲೆ ಕಲಾವಿದರನ್ನು ನೋಡಿ ಅವರುಗಳು ನಿಜ ಜೀವನದಲ್ಲೂ ಹಾಗೆ ಕಾರುಗಳಲ್ಲಿ ಒಡಾಡುತ್ತಾರೆ. ತುಂಬಾ ಹೈ-ಫೈ ಲೈಫ್ ಲೀಡ್ ಮಾಡ್ತಾರೆ ಎಲ್ಲವೂ ಕಲಾವಿದರ ಕಾಲಡಿಗೆ ಬಂದು ಬೀಳುತ್ತಿರುತ್ತದೆ ಅಂತ ಜನರು ಅಂದುಕೊಳ್ಳುತ್ತಾರೆ. ಕಿರು-ಹಿರಿ ತೆರೆಗಳಲ್ಲಿ ನಾಯಕಿಯ ಮುಖದಲ್ಲಿ ಕಾಣುವ ಬಣ್ಣದ ಹಾಗೆ ಅವರ ಬದುಕು ಕೂಡ ಕಲರ್‌ಫುಲ್ ಆಗಿರುತ್ತದೆ ಅಂತ ಭಾವಿಸುತ್ತಾರೆ. ಆದರೆ, ಅವರ ನಿಜ ಜೀವನ ಆಗಿರುವುದಿಲ್ಲ. ಅವರೂ ಎಲ್ಲರ ಹಾಗೆ ಕಲ್ಲು-ಮುಳ್ಳಿನ ಹಾದಿ ಸವಿಸುತ್ತಾರೆ.

ಹೀಗೆ ಜೀವನದಲ್ಲಿ ನಾನಾ ರೀತಿಯ ಕಷ್ಟ-ನಷ್ಟಗಳ ಕಂಡು ತಮ್ಮ ಜೀವನ ರೂಪಿಸಿಕೊಂಡ ಕಲಾವಿದೆಯರಲ್ಲಿ ನಯನ ನಾಗರಾಜ್ ಕೂಡ ಒಬ್ಬರಾಗಿದ್ದಾರೆ. ಕಿರು ತೆರೆಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಧಾರವಾಹಿ ಗಿಣಿರಾಮದಲ್ಲಿ ಮಹತಿಯ ಪಾತ್ರದಲ್ಲಿ ತನ್ನ ಹೆಸರಿಗೆ ತಕ್ಕಂತೆ ನಯನಗಳ ಮೂಲಕವೇ ಭಾವಾಭಿನಯ ತೋರಿಸುತ್ತಾ ನಟಿಸುವ ಈಕೆಯಿಂದಲೇ ಆ ಪಾತ್ರಕ್ಕೆ ಒಂದು ಕಳೆ ಬಂದಿದೆ ಎನ್ನುತ್ತಾರೆ ವೀಕ್ಷಕರು.

ನಯನ ನಾಗರಾಜ್ ಈ ಮುನ್ನ ನೂರಾರು ಹೆಚ್ಚು ಬಾರಿ ಆಡಿಷನ್‌ಗಳನ್ನು ಮಾಡಿದರೂ, ಪ್ರತಿ ಬಾರಿಯೂ ಆಯ್ಕೆಯಾಗದೆ ನಿರಾಸೆಗೊಂಡಿದ್ದರು. ಅದು ಹೇಗೊ ಶಾಂತಂ ಪಾಪಂನಲ್ಲಿ ಒಂದು ಪಾತ್ರ ದೊರೆತ ನಂತರ ಅವಕಾಶಗಳು ದೊರೆಯುತ್ತಾ ಹೋಯಿತು. ನಂತರ ಈಕೆಯ ನಟನೆಯಿಂದಲೇ ಪಾಪ ಪಾಂಡು ನಗೆ ಧಾರವಾಹಿ ಹೆಚ್ಚು ಜನಪ್ರಿತೆಯನ್ನು ಗಳಿಸಿದ್ದು ಸುಳ್ಳಲ್ಲ.

ನಟನೆಯ ಅವಕಾಶಕ್ಕಾಗಿ ಪ್ರಯಸ್ನಿಸುವವರು ಎಷ್ಟೆ ಬಾರಿ ತಿರಸ್ಕೃತಗೊಂಡರೂ ನಿರಾಶರಾಗದೆ ಮತ್ತೆ ಮತ್ತೆ ಪ್ರಯತ್ನಿಸಬೇಕು ಹಾಗೂ ತಮ್ಮನ್ನು ತಾವು ಅಪ್ರೀಷಿಯೇಟ್ ಮಾಡಿಕೊಳ್ಳಬೇಕು ಆಗ ಅವಕಾಶಗಳು ತಾನಾಗಿಯೇ ದೊರೆಯುತ್ತವೆ ಎಂದ ಅವರ ನಯನದಲ್ಲಿ ಆತ್ಮವಿಶ್ವಾಸ ಕಾಣಿಸಿತು. ಚಿಕ್ಕಂದಿನಲ್ಲೇ ನಯನ ನಾಗರಾಜ್ ದುಡಿಮೆಯ ಬದುಕು. ಆ ದಿನಗಳಲ್ಲಿ ಶಾಲೆಯ ಫೀಸ್ ಕಟ್ಟಲು ಬೆಂಗಳೂರಿನ ಕೃಷ್ಣ ರಾವ್ ಪಾರ್ಕ್, ಲಾಲ್‌ಬಾಗ್, ಜಯನಗರ ನಾಲ್ಕನೇ ಹಂತ ಪುಟ್‌ಪಾತ್‌ನಲ್ಲಿ ನಿಂತು ಹೂವಿನ ಗಿಡಗಳನ್ನು ರೂ. 25, 50, 100ಗಳಿಗೆ ಮಾರಿ ಹಣ ಸಂಪಾದಿಸಿ ವಿದ್ಯಾಭ್ಯಾಸ ಪೂರೈಸಿದ್ದನ್ನು ನೆನೆಯುತ್ತಾರೆ.

ಈಗ ತಿಂಗಳಿಗೆ ಸಾವಿರ, ಲಕ್ಷ ರೂಪಾಯಿ ಸಂಪಾದಿಸಿದರೂ ನಮಗೆ ಯಾವುದೇ ದೊಡ್ಡ ಬ್ಯಾಂಕುಗಳು ಮನೆ ಕೊಳ್ಳಲು ಸಾಲ ಕೊಡುವುದಿಲ್ಲ. ಆಗ ನಮ್ಮ ನೆರವಿಗೆ ಬರುವುದೇ ಸಹಕಾರ ಬ್ಯಾಂಕುಗಳು ಎಂದು ಕೃತಜ್ಞತೆ ವ್ಯಕ್ತಪಡಿಸುತ್ತಾರೆ ನಯನ.



# THE RADDI SAHAKARA BANK NIYAMITHA, DHARWAD

**HEAD OFFICE, Bank Road, Dharwad - 580001**

Reg. No. 724, Est: 04-02-1914

**Reserve Bank of India - Licence No. UBD: KAN. 1140 P**

Ph. No. 0836-2796215, 2448118, Website: www.raddibank.com, E-mail-headoffice@raddibank.com

We are serving the people since 109 Years throughout 25 Branches and 1 Extension Counter with in inter-state of Karnataka

**BRANCHES**

Dharwad, Hubballi, Haveri, Ranebennur, Gadag, Navalgund, Annigeri, Naragund, Mulagund, Belgavi, Saundatti, Ramdurg, Gokak, Yaragatti, Mudalagi, Bagalkot, Jamkhandi, Mudhol, Galagali, Vijayapur, Muddebihal, Chitradurga, Davanagere, Huvin-Hadagali, Koppal, Extension Counter- Saraswatpur- Dharwad

- Share Capital Rs. 19.70 Crores (As on 31-03-2023)
- Reserve & Other Funds Rs. 76.20 Crores
- Working Capital Rs. 704.62 Crores
- Deposits Rs. 608.72 Crores
- Loans & Advances Rs. 371.40 Crores
- Bank is under FSWM (Financial Sound Well Managed) category
- Deposits are Insured D. I.C. G. C. and Attractive Interest Rates on Deposit
- Senior Citizen 0.50 % Extra on Deposit
- Safe Deposit Lockers Available
- Competitive Interest Rates on Loans and Advances
- Core Banking Solution with new technical features
- RTGS/NEFT facilities Available
- Direct Clearing Member (C. T. S.)
- Shortly we are Introducing A T M Facility
- Net N.P.A.0.00%

**Sri. V.R. Nagavi**
Chief Executive Officer

**Sri. K.B. Naik**
Vice-President

**Sri. K.L. Patil**
President

**BOARD OF DIRECTORS** Shri. H.K. Patil, Shri N.H. Konaraddi, Shri V.D. Kamaraddi, Shri L.R. Udapudi, Shri R.G. Budihal, Shri K.V. Hulakoti, Shri V.H. Bidari, Shri M.V. Manakur, Shri P.V. Chavannavar, Shri H.S.Koraddi, Shri S.R.Sonwalkar, Shri S.N. Nadagoudar, Smt.B.V. Navalagund, Smt. S.C. Huchchannavar, Shri D.G. Jogannavar, Shri A.L. Potnis, Shri G.B. Vantagodi

# ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರು


ಶ್ರೀ ಎಚ್.ಕೆ. ಪಾಟೀಲ
ಅಧ್ಯಕ್ಷರು


ಶ್ರೀ ಪರಮಶಿವಯ್ಯ ಬಿ.ಎಸ್.
ಉಪಾಧ್ಯಕ್ಷರು


ಶ್ರೀ ಡಿ.ಟಿ. ಪಾಟೀಲ
ನಿರ್ದೇಶಕರು


ಶ್ರೀ ರುದ್ರೇಗೌಡ
ನಿರ್ದೇಶಕರು


ಶ್ರೀ ಅಶೋಕ ಮಲ್ಲಪ್ಪ ಮನಗೂಳಿ
ನಿರ್ದೇಶಕರು


ಶ್ರೀ ಕೃಷ್ಣ ಹೆಚ್.ಸಿ.
ನಿರ್ದೇಶಕರು


ಶ್ರೀ ಕೋಗುಂಡಿ ಬಕ್ಕೇಶಪ್ಪ
ನಿರ್ದೇಶಕರು


ಶ್ರೀ ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ
ನಿರ್ದೇಶಕರು


ಶ್ರೀ ಹರೀಶ್ ಆಚಾರ್
ನಿರ್ದೇಶಕರು


ಶ್ರೀ ಕೃಷ್ಣಮೂರ್ತಿ ಭಂಡಾರಿ
ನಿರ್ದೇಶಕರು


ಶ್ರೀ ರಾಘವ ವಿಷ್ಣು ಬಾಳೇರಿ
ನಿರ್ದೇಶಕರು


ಶ್ರೀ ಮಲಕಣ್ಣ ಡಿ. ಪಾಟೀಲ
ನಿರ್ದೇಶಕರು


ಶ್ರೀ ರಾಜಕುಮಾರ ಬಸವರಾಜ ಬಾದವಾಡಗಿ
ನಿರ್ದೇಶಕರು


ಶ್ರೀ ನಿರಂಜನ್ ಟಿ.ಎಸ್.
ನಿರ್ದೇಶಕರು


ಶ್ರೀ ವಾಸು ಹೆಚ್.
ನಿರ್ದೇಶಕರು


ಡಾ. ಎಂ.ಬಿ. ಮಂಚೇಗೌಡ
ನಿರ್ದೇಶಕರು


ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ
ನಿರ್ದೇಶಕರು


ಶ್ರೀಮತಿ ವೀರಮ್ಮ ಪಿ.
ನಿರ್ದೇಶಕರು


ಡಾ. ಕೆ. ರಾಜೇಂದ್ರ ಭಾ.ಆ.ಸೇ.
ನಿಬಂಧಕರು / ನಿರ್ದೇಶಕರು (ನಾಮಿನಿ)


ಶ್ರೀ ರಮೇಶ್ ಬಾಬು
ವಿಶೇಷ ಆಹ್ವಾನಿತರು

## ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರು


ಶ್ರೀ ಎಂ.ಕೆ. ಪಟ್ಟಣಶೆಟ್ಟಿ
ವಿಶೇಷ ಆಹ್ವಾನಿತರು


ಶ್ರೀ ರಘುನಾಥ್ ಸಿ.
ವಿಶೇಷ ಆಹ್ವಾನಿತರು


ಶ್ರೀ ರಾಜಶೇಖರ್ ಎಸ್. ಹಾವಣಗಿ
ವಿಶೇಷ ಆಹ್ವಾನಿತರು


ಶ್ರೀ ಪುಂಡಲೀಕ ಎನ್. ಕೇರೂರೆ
ಮುಖ್ಯಕಾರ್ಯನಿರ್ವಹಣಾಧಿಕಾರಿ

## ಮಹಾಮಂಡಳದ ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು


ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ


ಶ್ರೀ ಎಮ್.ಎಮ್. ಮೆಟಗುಡ್ಡ


ಶ್ರೀ ಶರಣಪ್ಪ ಎಸ್. ವಾರದ


ಶ್ರೀ ಆರ್.ಎಸ್. ಸುಬ್ರಹ್ಮಣ್ಯ


ಶ್ರೀ ಬಿ.ಎನ್. ಲೋಕೇಶ್


ಶ್ರೀ ಚಂದ್ರಮೌಳಿ ಎಸ್.


ಶ್ರೀ ವಿಕ್ರಮ ಆರ್. ಸಿರೂರ


ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ


ಡಾ॥ ಆರ್. ಇಳಂಗೋವನ್



ದಿನಾಂಕ : 19.05.2023 ರಂದು ಬೆಂಗಳೂರಿನ ಆರ್‌ಐಸಿಎಂ ಸಹಯೋಗದೊಂದಿಗೆ ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಏರ್ಪಡಿಸಿದ್ದ ಐದು ದಿನಗಳ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ರುದ್ರೇಗೌಡ, ಶ್ರೀ ಹೆಚ್.ಸಿ. ಕೃಷ್ಣ ಹಾಗೂ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಮತ್ತು ಆರ್‌ಐಸಿಎಂನ ಉಪನಿರ್ದೇಶಕರಾದ ಶ್ರೀ ಕೆ. ರವಿಚಂದ್ರನ್ ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳು ಭಾಗವಹಿಸಿದ್ದರು.




ದಿನಾಂಕ : 17 ರಿಂದ 19ಮೇ 2023ರವರೆಗೆ ಎನ್‌ಸಿಯುಐ ಪ್ರಾಯೋಜಿತ "ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ" ಆಯೋಜಿಸಿತ್ತು. ದಿನಾಂಕ : 18.05.2023 ರಂದು ವಿವಿಧ ರಾಜ್ಯಗಳ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ನಿರ್ದೇಶಕರ ಅಧ್ಯಯನ ತಂಡವು ಮಹಾಮಂಡಳದ ಕಾರ್ಯನಿರ್ವಹಣೆ ಕುರಿತು ತಿಳಿದುಕೊಳ್ಳಲು ಮಹಾಮಂಡಳಕ್ಕೆ ಭೇಟಿ ನೀಡಿತ್ತು.





ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅಧಿಕಾರಿಗಳಿಗೆ ವಿಡಿಯೋ ಕಾನ್ಪರೆನ್ಸ್ ಮೂಲಕ ವಿಚಾರ ಸಂಕಿರಣ ಏರ್ಪಡಿಸಿತ್ತು.

# GROSBEAK TECHNOLOGY SOLUTIONS PVT LTD

Grosbeak was formed in 2015 with a vision to enable ease of business for Banks/Financial Institutions through our unique & effective communication-based solutions. Currently Serving more than 150 Urban Banks/Souhardas/Societies/Financial Institutions across India.

Specialization in providing solutions and services to the Banks:

- Secured SMS Service for OTP/Transaction/Reminders
- Smart Toll-Free Service with customised IVR, Multi product/service
- Smart Missed Call Service for getting Account balance & Last transactions.
- On Premises CHROME BASED secured SMS platform for Bank-CHOTA SANDESH
- Call centre Customer Support Solution specially designed for the Banks.
- Voice Solution- VMN number for authentication, OBD voice call for promotions
- Secured Website hosting & E-mail solutions for Banks.
- Integrated E Desk for Complaint Management System (Customer Grievance Redressal)




***<u>Unique solution TO SET UP CUSTOMER GRIEVANCE REDRESSAL SYSTEM as per the RBI Notification</u>***

RBI CIRCULARS/NOTIFICFATIONS FOR BANKS TO SET UP CUSTOMER GRIEVANCE REDRESSAL SYSTEM:

1) RBI Notification: CEPD. PRD. No.S873/13.01.001/2021-22 November 12, 2021
2) RBI/2020-21/87 CEPD.CO.PRD.Cir.No.01/13.01.013/2020-21 January 27, 2021 - Strengthening of Grievance Redress Mechanism in Banks
3) RBI/2015-16/59 DBR No.Leg.BC.21/09.07.006/2015-16 July 1, 2015 – Master Circular on Customer Service in Banks

We have designed & Developed a Simple, Compliant to RBI Circulars/Notifications.

- Compliance to RBI Guidelines/Circulars/Notifications on Customer Grievance Redressal Mechanism
- Secure & Independent of CBS, Easy to report, trace, track and manage.
- Dashboard for quick Summary Status.On-line MIS reports – click of a button- anytime from anywhere.




Grosbeak Technology Solutions Pvt Ltd.
# 31-9/C4, Nimishamba Building, 2nd Floor
K.K.Halli, Opp 10th BTS Depot, Hennur Main Road,
Bengaluru - 560043

Contact us: 9886909959 & 8762899307 EMAIL:shivram.samant@grosbeaksolutions.com
Website: www.grosbeaksolutions.com

GrosbeakTechnology
Engage.Retain.Restore